ಸಂಪಾದಕರು: ಡಾ.ಕೆ.ಎ.ಓಬಳೇಶ್

ತ್ರೈಮಾಸಿಕ ಪತ್ರಿಕೆ

ISSN: 3048-765X

# ಅರಿವು ಅಸ್ಮಿತೆ

ARIVU ASMITHE



# ಅರಿವಿನ ತೊರೆ



## ದಾವಣಗೆರೆ ಜಿಲ್ಲಾ 14ನೇ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರಾದ ಡಾ.ಎ.ಬಿ.ರಾಮಚಂದ್ರಪ್ಪ ಅವರ ಕುರಿತ ವಿಶೇಷ ಸಂಚಿಕೆ

> ಸುಲಿದ ಬಾಳೆಯ ಹಣ್ಣಿನಂದದಿ.
> ಕಳೆದ ಸಿಗುರಿನ ಕಬ್ಬಿನಂದದಿ.
> ಅಳಿದ ಉಷ್ಣದ ಹಾಲಿನಂದದಿ ಸುಲಭವಾಗಿರ್ಪ.
> ಲಲಿತವಹ ಕನ್ನಡದ ನುಡಿಯಲಿ.
> ತಿಳಿದು ತನ್ನೊಳು ತನ್ನ ಮೋಕ್ಷವ.
> ಗಳಿಸಿಕೊಂಡರೆ ಸಾಲದೇ? ಸಂಸ್ಕೃತದಲಿನ್ನೇನು?
>
> -ಮಹಾಲಿಂಗರಂಗ






# ದಾವಣಗೆರೆ ಜಿಲ್ಲಾ ೧೪ನೇ ಕನ್ನಡ ಸಾಹಿತ್ಯ ಸಮ್ಮೇಳನದ

## ಸರ್ವಾಧ್ಯಕ್ಷರಾಗಿ ಆಯ್ಕೆಯಾಗಿರುವ

# ಡಾ.ಎ.ಬಿ.ರಾಮಚಂದ್ರಪ್ಪ ಅವರಿಗೆ

## ಪ್ರೀತಿ ಪೂರ್ವಕ ಅಭಿನಂದನೆಗಳು







ರೈತ ಕುಟುಂಬದಲ್ಲಿ ಜನಿಸಿದ ಡಾ.ಎ.ಬಿ.ರಾಮಚಂದ್ರಪ್ಪನವರು ತಮ್ಮ ವಿದ್ಯಾರ್ಥಿ ದೆಸೆಯಿಂದಲೂ ಸಮಾಜವಾದಿ ಚಿಂತನೆಗಳಿಂದ ಪ್ರಭಾವಿತರಾಗಿ ಸಾಮಾಜಿಕ ತಾರತಮ್ಯಗಳನ್ನು ಖಂಡಿಸುತ್ತ ಬಂದವರು. ಡಾ.ಎ.ಬಿ.ರಾಮಚಂದ್ರಪ್ಪನವರು ವ್ಯವಸ್ಥೆಯೊಂದಿಗೆ ಎಂದೂ ರಾಜೀ ಮಾಡಿಕೊಂಡವರಲ್ಲ. ತಮ್ಮ ಬದುಕಿನುದ್ದಕ್ಕೂ ನೈತಿಕ ಮೌಲ್ಯಗಳನ್ನು ಕಾಪಾಡಿಕೊಂಡು ಬಂದವರು. ಇವರ ನೈತಿಕ ಮೌಲ್ಯಗಳ ಗಟ್ಟಿತನಕ್ಕೆ ಮಾನವ ಬಂಧುತ್ವ ವೇದಿಕೆಯ ರಾಜ್ಯ ಸಂಚಾಲಕ ಮತ್ತು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಸದಸ್ಯರಾಗಿ ಸ್ಥಾನಮಾನ ದೊರೆತಿದ್ದು, ಇವುಗಳ ಅಡಿಯಲ್ಲಿ ನಾಡಿನಾದ್ಯಂತ ಸಂಚರಿಸಿ ದಲಿತರು, ರೈತರು, ಮಹಿಳೆಯರು ಹಾಗೂ ಸಾಮಾಜಿಕವಾಗಿ ಶೋಷಣೆಗೆ ಒಳಗಾದ ಜನವರ್ಗಗಳ ದನಿಯಾಗಿ ಮತ್ತು ಕನ್ನಡ ನಾಡು-ನುಡಿಗೆ ಸಂಬಂಧಿಸಿದಂತೆ ಹೋರಾಟ ಮತ್ತು ಕಾರ್ಯಯೋಜನೆಗಳನ್ನು ರೂಪಿಸುತ್ತಿದ್ದಾರೆ. ಇಂತಹ ಧೀಮಂತ ವ್ಯಕ್ತಿತ್ವದ ಶ್ರೀಯುತ ಡಾ.ಎ.ಬಿ.ರಾಮಚಂದ್ರಪ್ಪ ಅವರನ್ನು ದಾವಣಗೆರೆ ಜಿಲ್ಲಾ ೧೪ನೇ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರಾಗಿ ಆಯ್ಕೆ ಮಾಡಿದ ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯಕಾರಿ ಸಮಿತಿಗೆ ಧನ್ಯವಾದಗಳು. ಇಂತಹ ಸುಸಂದರ್ಭದಲ್ಲಿ ಶ್ರೀಯುತ ಡಾ.ಎ.ಬಿ.ರಾಮಚಂದ್ರಪ್ಪನವರಿಗೆ ಪ್ರೀತಿಯಿಂದ ಅಭಿನಂದಿಸುತ್ತೇವೆ.





**ಜಯಪ್ಪ ಕೆ.ಎಸ್**

**ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು**
**ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ, ದಾವಣಗೆರೆ.**






# ಅರಿವಿನ ತೊರೆ

## ಸಂಪಾದಕೀಯ

ಭಾರತ ಒಕ್ಕೂಟ ವ್ಯವಸ್ಥೆಯ ಭಾಗವಾದ ಕನ್ನಡ ನಾಡಿಗೆ ತನ್ನದೇ ಆದ ವಿಶಿಷ್ಟ ಸ್ಥಾನಮಾನವಿದೆ. ಕನ್ನಡ ನಾಡು ಭಾಷೆ, ಸಾಹಿತ್ಯ, ಸಂಸ್ಕೃತಿ, ಸೌಹಾರ್ದತೆ, ಸ್ವಾಭಿಮಾನ, ಪ್ರಾಕೃತಿಕ ಸೊಬಗು, ಸಮತೋಲಿತ ಪರಿಸರ ಹಾಗೂ ಬದುಕಲಿಕ್ಕೆ ಯೋಗ್ಯವಾದ ಮತ್ತು ಸುರಕ್ಷಿತವಾದ ಅವಕಾಶ ನೀಡಿ ತಾಯ್ತನ ಮೆರೆಯುತ್ತ ಬಂದಿದೆ. ಇಂತಹ ಹೃದಯ ಶ್ರೀಮಂತಿಕೆಯ ನೆಲದಲ್ಲಿ ತಲೆ ಎತ್ತಿದ ಎಷ್ಟೋ ರಾಜ ಪ್ರಭುತ್ವಗಳು ಖಡ್ಗಕ್ಕಿಂತ ಮಾನವೀಯ ಗುಣಗಳಿಂದ ವಿಜಯ ಸಾಧಿಸಿವೆ. ಕನ್ನಡ ಭಾಷೆ ಸುಮಾರು ಎರಡು ಸಾವಿರ ವರ್ಷಕ್ಕೂ ಮೀಗಿಲಾದ ಚಾರಿತ್ರಿಕ ಹಿರಿತನ ಸಾಧಿಸಿದೆ. ಹಲವು ಭಾಷೆಗಳ ಆರ್ಭಟ ಮತ್ತು ಅತಿಕ್ರಮಣಗಳ ನಡುವೆಯೂ ಕನ್ನಡ ಭಾಷೆ ಸದ್ದಿಲ್ಲದೆ ಹಲವಾರು ಕಾಲಘಟ್ಟಗಳನ್ನು ಮೀರಿ, ತನ್ನ ಭಾಷಿಕ ಸೊಬಗಿನ ಮೂಲಕ ಸಾಹಿತ್ಯ ಸಿರಿತನಕ್ಕೆ ಸಾಕ್ಷಿಯಾಗಿ ಶ್ರೀವಿಜಯ, ಪಂಪನಾದಿಯಾಗಿ ಎಂಟು ಜ್ಞಾನಪೀಠಗಳು ನಮ್ಮ ಮುಂದಿವೆ. ಕನ್ನಡ ಸಾಹಿತ್ಯ ಪರಿಷತ್ತು ಪ್ರತಿವರ್ಷ ಕನ್ನಡದ ಹಬ್ಬವೊಂದನ್ನು ರೂಪಿಸುತ್ತೆ, ಸಾಹಿತಿಗಳಾಚೆಯೂ ಕನ್ನಡದ ಮನಸುಗಳು ಈ ಹಬ್ಬವನ್ನು ಸಂಭ್ರಮಿಸುತ್ತಿವೆ. ಹೀಗೆ ಕನ್ನಡ ಸಾಹಿತ್ಯ ಪರಿಷತ್ತಿನ ಅಡಿಯಲ್ಲಿ ರೂಪಗೊಳ್ಳುವ ಕನ್ನಡ ಹಬ್ಬದ ಭಾಗವಾಗಿಯೇ ದಾವಣಗೆರೆ ಜಿಲ್ಲಾ 14ನೇ ಕನ್ನಡ ಸಾಹಿತ್ಯ ಸಮ್ಮೇಳನ ಮೂಡಿಬಂದಿದೆ. ಈ ಸಂಭ್ರಮದ ಕೇಂದ್ರ ಸ್ಥಾನವನ್ನು ವಿಶ್ರಾಂತ ಪ್ರಾಧ್ಯಾಪಕರು, ಬಂಡಾಯ ಸಾಹಿತಿಗಳು, ವೈಚಾರಿಕ ಚಿಂತಕರು ಹಾಗೂ ಮಾನವ ಬಂಧುತ್ವ ವೇದಿಕೆಯ ರಾಜ್ಯ ಸಂಚಾಲಕರು ಆದ ಶ್ರೀಯುತ ಡಾ.ಎ.ಬಿ.ರಾಮಚಂದ್ರಪ್ಪನವರು ಅಲಂಕರಿಸಿರುತ್ತಾರೆ. ಕನ್ನಡ ನಾಡಿನ ಹೃದಯ ಭಾಗವಾದ ದಾವಣಗೆರೆ ಪ್ರಾಂತ್ಯದಲ್ಲಿ ಜನ್ಮತಳೆದು, ಈ ನೆಲದ ಮಣ್ಣಿನ ಸತ್ವವನ್ನು ಮೈಗೂಡಿಸಿಕೊಂಡು ಬೆಳೆದ ಡಾ.ಎ.ಬಿ.ರಾಮಚಂದ್ರಪ್ಪನವರು ಸಾಹಿತಿಯಾಗಿ, ವಿಚಾರವಾದಿಗಳಾಗಿ ಗುರುತಿಸಿಕೊಂಡವರು. ಇದರಾಚೆ ಅವರು ವಿದ್ಯಾರ್ಥಿ ನೆಚ್ಚಿನ ಕನ್ನಡ ಮೇಷ್ಟ್ರಾಗಿ ಚಿರಪರಿಚಿತರು. ಕನ್ನಡ ಸಾರಸ್ವತ ಲೋಕಕ್ಕೆ 'ಅಂಬೇಡ್ಕರ್ ಮತ್ತು ಹೋರಾಟ', 'ದೇವರ ದಾಸಿಮಯ್ಯ', 'ಭಾರತೀಯ ಸಾಮಾಜಿಕ ಚಿಂತಕರ ಮಹಾಬೆಳಗು' ಹಾಗೂ 'ಮನೆಯ ತೋರಣ' ಎಂಬ ಕೃತಿಗಳನ್ನು ಸಮರ್ಪಿಸಿದ್ದಾರೆ. ಸುಮಾರು ಇಪ್ಪತ್ತಕ್ಕೂ ಹೆಚ್ಚು ಕೃತಿಗಳ ಸಂಪಾದಕರಾಗಿ ಕೆಲಸ ಮಾಡಿದ್ದಾರೆ. ಕನ್ನಡ ನಾಡಿನ ಹೆಸರಾಂತ ಸಾಹಿತ್ಯ ಪತ್ರಿಕೆಗಳಲ್ಲಿ ಇವರ ಹಲವಾರು ಸಂಶೋಧನಾ ಬರಹಗಳು, ವೈಚಾರಿಕ ಲೇಖನಗಳು, ವಿಮರ್ಶೆ, ಕವಿತೆಗಳು ಪ್ರಕಟವಾಗಿವೆ. ಶ್ರೀಯುತರು ಸಾಹಿತ್ಯದಾಚೆ ಸಮಕಾಲೀನ ಬಿಕ್ಕಟ್ಟುಗಳೊಂದಿಗೆ ಅನುಸಂಧಾನಗೊಳ್ಳುವ ನೆಲೆಯಲ್ಲಿ ಹಲವಾರು ಹೋರಾಟ, ಸಂಘಟನೆಗಳಲ್ಲಿ ಸಕ್ರಿಯರಾಗಿದ್ದಾರೆ. ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಸದಸ್ಯರಾಗಿಯೂ ಕನ್ನಡದ ಅಸ್ಮಿತೆಗಾಗಿ ದುಡಿಯುತ್ತಿದ್ದಾರೆ.





**ಡಾ.ಕೆ.ಎ.ಓಬಳೇಶ್**
**ಸಂಪಾದಕರು, ಅರಿವು ಅಸ್ಮಿತೆ**

ಶ್ರೀಯುತ ಡಾ.ಎ.ಬಿ.ರಾಮಚಂದ್ರಪ್ಪನವರು ದಾವಣಗೆರೆ ಜಿಲ್ಲಾ 14ನೇ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರಾಗಿ ಆಯ್ಕೆಯಾದ ಪ್ರಯುಕ್ತ 'ಅರಿವು ಅಸ್ಮಿತೆ' ತ್ರೈಮಾಸಿಕ ಪತ್ರಿಕೆಯ ಅಡಿಯಲ್ಲಿ 'ಅರಿವಿನ ತೊರೆ' ಎಂಬ ಈ ವಿಶೇಷ ಸಂಚಿಕೆಯನ್ನು ಹೊರತರುತ್ತಿದ್ದೇವೆ. ಇದು ವೈಯಕ್ತಿಕವಾಗಿ ಅವರ ಒಲೈಕೆಗಾಗಿಯಲ್ಲ, ಅವರ ಕನ್ನಡ ಸೇವೆಗಾಗಿ. ಇದು ಶ್ರೀಯುತರ ಸಾಹಿತ್ಯ ಸೇವೆಯ ನೆಪದಲ್ಲಿ ಅವರ ವ್ಯಕ್ತಿತ್ವ, ಚಿಂತನೆಯೊಂದಿಗೆ ಹೋರಾಟ, ಸಂಘಟನೆ, ತುಡಿತ–ಮಿಡಿತಗಳನ್ನು ಪರಿಚಯಿಸುವ ಸಣ್ಣ ಪ್ರಯತ್ನವಾಗಿರುತ್ತದೆ. ನಮ್ಮ ಈ ಕಿರು ಪ್ರಯತ್ನಕ್ಕೆ ಸಹಕಾರ ನೀಡಿದ ಡಾ.ಎ.ಬಿ.ರಾಮಚಂದ್ರಪ್ಪನವರ ಕುಟುಂಬ ವರ್ಗ, ಆಪ್ತ ಬಳಗ, ವಿದ್ಯಾರ್ಥಿಗಳಿಗೆ ನಾವು ಅಭಾರಿಯಾಗಿದ್ದೇವೆ. ಹಾಗೆಯೇ ಈ ಹೊತ್ತಿಗೆಯನ್ನು ತುರ್ತಾಗಿ ಹೊರತರಲು ಕೈಜೋಡಿಸಿದ ಮಿತ್ರರು ಹಾಗೂ ಸಹ ಸಂಪಾದಕರಾಗಿ ಕಾರ್ಯನಿರ್ವಹಿಸಿದ ಕೆ.ಎಂ. ಹಾಲೇಶ್, ಗೋವರ್ಧನ್ ನವಿಲೇಹಾಳ್ ಅವರಿಗೂ, ತಾಂತ್ರಿಕ ಸಹಕಾರ ನೀಡಿದ ವಿದ್ಯಾರ್ಥಿ ಮಿತ್ರ ಬಾಲು ಅವರಿಗೂ, ಪತ್ರಿಕೆಯ ಪ್ರತಿ ಪುಟವೂ ಅಂದವಾಗಿ ಮೂಡಲು ಕಾರಣೀಭೂತರಾದ ಆತ್ಮೀಯ ಮಿತ್ರ ಸುರೇಶ್ ಅವರಿಗೂ ಸಮಯಕ್ಕೆ ಸರಿಯಾಗಿ ಪತ್ರಿಕೆಯನ್ನು ಮುದ್ರಿಸಿದ ಎ.ಎಂ ಪ್ರಿಂಟರ್ಸ್‌ನ ಮಾಲಿಕರಾದ ಬಲರಾಮ್ ಅವರಿಗೂ ನಾನು ಅಭಾರಿ.



## ಅರಿವಿನ ತೊರೆ

# ದಾವಣಗೆರೆ ಜಿಲ್ಲಾ 14ನೇ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರಾದ ಡಾ.ಎ.ಬಿ.ರಾಮಚಂದ್ರಪ್ಪ ಅವರೊಂದಿಗೆ...

ಶ್ರೀಯುತ ಡಾ.ಎ.ಬಿ.ರಾಮಚಂದ್ರಪ್ಪನವರು ವೃತ್ತಿಯಲ್ಲಿ ಪ್ರಾಧ್ಯಾಪಕರಾಗಿ ಹಲವಾರು ವರ್ಷಗಳ ಕಾಲ ಸೇವೆ ಸಲ್ಲಿಸಿ, ಅಪಾರ ಶಿಷ್ಯ ಬಳಗವನ್ನು ಸಂಪಾದಿಸಿದವರು. ತಮ್ಮ ಕಾಲೇಜು ಶಿಕ್ಷಣದ ದಿನಗಳಿಂದಲೂ ಬಂಡಾಯ ಪ್ರವೃತ್ತಿಯನ್ನು ಮೈಗೂಡಿಸಿಕೊಂಡಿದ್ದು, ಸಾಮಾಜಿಕ ಅಸಮಾನತೆ, ಶೋಷಣೆ, ಮೌಢ್ಯತೆಯ ವಿರುದ್ಧ ದನಿ ಎತ್ತಿದವರು. ಅಧ್ಯಾಪನದೊಂದಿಗೆ ಸಾಹಿತ್ಯ ಕ್ಷೇತ್ರದಲ್ಲಿಯೂ ಕೃಷಿ ಮಾಡುತ್ತ, ಸಂಘಟನೆ, ಹೋರಾಟಗಳಲ್ಲಿ ಸಕ್ರಿಯರಾದವರು. ತಮ್ಮ ಸೇವಾ ನಿವೃತ್ತಿಯ ತರುವಾಯ ವಿಶ್ರಾಂತಿಯಲ್ಲಿರದೆ 'ಮಾನವ ಬಂಧುತ್ವ' ವೇದಿಕೆಯ ರಾಜ್ಯ ಸಂಚಾಲಕರಾಗಿ ನಾಡಿನಾದ್ಯಂತ ಸಂಚರಿಸಿ ಜೀವಪರ ಆಶಯಗಳನ್ನು ಎತ್ತಿಹಿಡಿಯುವ ನೆಲೆಯಲ್ಲಿ ಹಲವಾರು ಕಾರ್ಯಕ್ರಮಗಳನ್ನು ರೂಪಿಸುವಲ್ಲಿ ಮಹತ್ವದ ಪಾತ್ರವಹಿಸಿರುತ್ತಾರೆ. ಶ್ರೀಯುತ ಡಾ.ಎ.ಬಿ.ರಾಮಚಂದ್ರಪ್ಪನವರನ್ನು ದಾವಣಗೆರೆ ಜಿಲ್ಲಾ 14ನೇ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರಾಗಿ ಆಯ್ಕೆ ಮಾಡಿದ ಸವಿನೆನಪಿಗಾಗಿ 'ಅರಿವು ಅಸ್ಮಿತೆ' ಪತ್ರಿಕೆಯ ವತಿಯಿಂದ ನಡೆಸಿದ ಸಂದರ್ಶನ ಈ ಮುಂದಿನಂತಿದೆ...



**ಸಂದರ್ಶನ**

**▸▸ದಾವಣಗೆರೆ ಜಿಲ್ಲಾ ೧೪ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ಆಯ್ಕೆಯಾಗಿದ್ದೀರಿ. ಇದರ ಬಗ್ಗೆ ತಮ್ಮ ಅನಿಸಿಕೆ.**

ನನ್ನನ್ನು ಈ ಭಾರಿಯ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ಆಯ್ಕೆ ಮಾಡಿದ ಸಾಹಿತ್ಯ ಪರಿಷತ್ತು ಮತ್ತು ಎಲ್ಲಾ ಕನ್ನಡದ ಮನಸ್ಸುಗಳಿಗೆ ನಾನು ಮೊದಲು ಅಭಿನಂದನೆ ಹೇಳಲು ಬಯಸುತ್ತೇನೆ. ಮುಖ್ಯವಾಗಿ ಜವಾಬ್ದಾರಿಯುತವಾದ ಜಾಗದಲ್ಲಿ ನಮ್ಮನ್ನು ಗೌರವಿಸುವುದು ಎಂದರೆ ಏಕಕಾಲದಲ್ಲಿ ನಮ್ಮ ಜವಾಬ್ದಾರಿಗಳನ್ನು ಹೆಚ್ಚಿಸುತ್ತದೆ ಎಂಬುದೇ ಇದರರ್ಥ. ಯಾವುದೇ ಸ್ಥಾನಮಾನ ನಮಗೆ ಲಭಿಸಿದೆ ಎಂದರೆ ಇನ್ನಷ್ಟು ಕೆಲಸ ಮಾಡುವುದಕ್ಕೆ ನಮಗೆ ಪ್ರೇರಣೆ ನೀಡಿದೆ ಎಂದು ನಾನು ಭಾವಿಸಿರುವೆ. ಮುಖ್ಯವಾಗಿ ನನ್ನನ್ನು ಯಾವ ಮಾನದಂಡಗಳ ಅಡಿಯಲ್ಲಿ ಆಯ್ಕೆ ಮಾಡಿದ್ದಾರೋ ನನಗೆ ತಿಳಿಯುತ್ತಿಲ್ಲ. ಬಹುಶಃ ಕನ್ನಡದ ಸಾಹಿತ್ಯ ಪರಿಷತ್ತು ಎಂದರೆ ನಮ್ಮ ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳನ್ನ ನೋಡಿಕೊಂಡೆ ಈ ಗೌರವವನ್ನು ನೀಡಿರುತ್ತಾರೆ. ಸಾಹಿತ್ಯ ಚಟುವಟಿಕೆಯೆಂದರೆ ಅದು ಬರವಣಿಗೆಯಾಗಿರಬಹುದು, ಸಾಂಸ್ಕೃತಿಕ ನೆಲೆಯ ಕೆಲಸ ಕಾರ್ಯಗಳಾಗಿರಬಹುದು. ಇವೆಲ್ಲವನ್ನು ಗಮನಿಸಿಯೇ ಈ ಸ್ಥಾನಕ್ಕೆ ಆಯ್ಕೆ ಮಾಡಿರುತ್ತಾರೆ. ಹೀಗಾಗಿ ನನ್ನನ್ನು ನಂಬಿ ಈ ಸ್ಥಾನ ನೀಡಿದ ಎಲ್ಲರ ನಂಬಿಕೆಗಳನ್ನು ಉಳಿಸುವ ನಿಟ್ಟಿನಲ್ಲಿ ನಾನು ಇನ್ನೂ ಮುಂದೆಯೂ ಸಕ್ರಿಯವಾಗಿ ಸಾಹಿತ್ಯ, ಸಾಂಸ್ಕೃತಿಕ ಹಾಗೂ ಸಂಘಟನಾತ್ಮಕ ನೆಲೆಯಲ್ಲಿ ಕಾರ್ಯನಿರ್ವಹಿಸುತ್ತೇನೆ ಎಂಬುದನ್ನು ಹೇಳಲು ಬಯಸುತ್ತೇನೆ.

**▸▸ತಾವು ಕನ್ನಡದ ಅಧ್ಯಾಪಕರಾಗಿ, ಸಾಹಿತಿಗಳಾಗಿ, ವಿಚಾರವಾದಿಗಳಾಗಿ ಕನ್ನಡ ಸಾರಸ್ವತ ಲೋಕದಲ್ಲಿ ಗುರುತಿಸಿಕೊಂಡಿದ್ದೀರಿ. ನಿಮ್ಮ ಸಾಹಿತ್ಯ ಹಾಗೂ ಚಿಂತನೆಗಳ ಮೇಲಿನ ಪ್ರಮುಖ ಪ್ರಭಾವಗಳೇನು?**

ನಾನು ಈ ವಿಚಾರವನ್ನು ಸಾಕಷ್ಟು ವೇದಿಕೆಗಳಲ್ಲಿ ಹಂಚಿಕೊಂಡಿದ್ದೇನೆ. ನನ್ನಂತಹ ತಳಮೂಲದಿಂದ ಬಂದಂತಹ ಓದುಗನಿಗೆ ಸಾಹಿತ್ಯವನ್ನು ನೋಡುವ ದೃಷ್ಟಿಕೋನಗಳನ್ನ ನಮ್ಮ ಊರುಕೇರಿಗಳೇ ನಮಗೆ ಕಲಿಸಿರುತ್ತವೆ. ಸಾಹಿತ್ಯ ಮಿಮಾಂಸೆ ಒಂದಾದರೆ, ಏಕಕಾಲಕ್ಕೆ ಸಾಮಾಜಿಕ ಮಿಮಾಂಸೆಯು ಬದುಕಿನೊಂದಿಗೆ ಬಂದಿರುತ್ತದೆ. ಪಠ್ಯವನ್ನು ನಾವು ಓದಬೇಕಾದರೆ ಇದೇನೋ ಬದುಕಿನ ನನ್ನದಲ್ಲದ ನೆಲೆಗಟ್ಟುಗಳು ಇಲ್ಲಿ ಇವೆಯಲ್ಲ



ಡಾ.ಓಬಳೇಶ್ ಕೆ,ಎ.

ಎನ್ನುವ ಪ್ರಶ್ನೆಗಳು ಆರಂಭವಾದಾಗ ಸಾಹಿತ್ಯವನ್ನು ನೋಡುವ ದೃಷ್ಟಿಕೋನ ಬದಲಾಗುತ್ತದೆ ಮತ್ತು ಸಾಹಿತ್ಯವನ್ನು ಪರಿಭಾವಿಸುವಂತಹ ಪರಿಕಲ್ಪನೆಯೇ ಭಿನ್ನವಾಗಿ ರೂಪುಗೊಳ್ಳುತ್ತದೆ. ಬಹುಶಃ ಇದು ನನ್ನೊಬ್ಬನ ತಿಳುವಳಿಕೆ ಮಾತ್ರವಲ್ಲ. ಎಪ್ಪತ್ತರ ದಶಕದಿಂದೀಚೆಗೆ ಸಾಹಿತ್ಯ ಚಟುವಟಿಕೆಯಲ್ಲಿ ತೊಡಗಿಕೊಂಡ ಎಲ್ಲರಿಗೂ ಈ ಪ್ರಶ್ನೆ ಕಾಡಿದೆ ಎಂದು ನಾನು ಭಾವಿಸಿಕೊಳ್ಳುತ್ತೇನೆ. ಹಾಗಾಗಿ ಸಾಹಿತ್ಯವನ್ನು







ಅರಿವಿನ ತೊರೆ

ಕೇವಲ ಸಾಹಿತ್ಯವಾಗಿ ನೋಡಿದ ಮನುಷ್ಯ ನಾನಲ್ಲ. ಸಾಹಿತ್ಯವನ್ನು ಸಮಾಜೀಕರಿಸಿಕೊಂಡು, ಸಂಸ್ಕೃತೀಕರಿಸಿಕೊಂಡು ಅಧ್ಯಯನ ಮಾಡಿದವನು. ಇದಕ್ಕೆ ಪೂರಕವಾಗಿ ನಾವು ಸಾಹಿತ್ಯ ಮತ್ತು ಸಮಾಜವನ್ನು ಒಟ್ಟೊಟ್ಟಿಗೆ ನೋಡಬೇಕಾದರೆ, ಸಮಾಜ ಎಂದಾಗ ಅನೇಕ ಹೋರಾಟಗಾರರು, ಚಿಂತಕರು, ದಾರ್ಶನಿಕರೆಲ್ಲ ನಮ್ಮ ಕಣ್ಣ ಮುಂದೆ ನಿಂತು ಹೋಗುತ್ತಾರೆ. ಅವರಲ್ಲಿ ಬುದ್ಧ, ಬಸವಣ್ಣ, ಅಂಬೇಡ್ಕರ್, ಪೆರಿಯಾರ್, ನಾಲ್ವಡಿಕೃಷ್ಣರಾಜ ಒಡೆಯರ್ ಇಂತಹ ಹಲವಾರು ಚಿಂತಕರು ನಮ್ಮ ಕಣ್ಣ ಮುಂದೆ ಬರುತ್ತಾರೆ. ಇವರ ಚಿಂತನೆಗಳೇ ನಮ್ಮ ಬರಹ. ಇಂತಹ ಚಿಂತನೆಗಳೇ ನಮ್ಮನ್ನು ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಪ್ರೇರೇಪಿಸುತ್ತದೆ. ಈ ಬಗೆಯ ಸಾಮಾಜಿಕ ಸಂಕಥನವು ನಮ್ಮ ಬರಹಗಳ ಮೇಲೆ ಹೆಚ್ಚು ದಟ್ಟವಾದ ಪ್ರಭಾವ ಬೀರಿದೆ.

**▸▸ಕನ್ನಡ ಭಾಷೆ ಮತ್ತು ಸಾಹಿತ್ಯಕ್ಕೆ ಸಾವಿರಾರು ವರ್ಷಗಳ ಇತಿಹಾಸವಿದೆ. ಇಂತಹ ಸುದೀರ್ಘವಾದ ಹಿನ್ನೆಲೆಯನ್ನು ಹೊಂದಿರುವ ಕನ್ನಡ ಭಾಷೆ ಅವಸಾನದ ಅಂಚಿನಲ್ಲಿದೆ ಎಂಬ ಚರ್ಚೆಗಳು ನಮ್ಮ ನಡುವೆ ಕೇಳಬರುತ್ತಿವೆ. ಇದರ ಬಗ್ಗೆ ತಮ್ಮ ನಿಲುವು?**

ಯಾವುದೇ ಒಂದು ಜನಭಾಷೆ ಅವನತಿ ಹೊಂದುತ್ತೆ ಎಂಬುದು ಸುಳ್ಳು. ಹಾಗೆ ಕನ್ನಡ ಅವಸಾನ ಹೊಂದುವುದಾಗಿದ್ದರೆ ಸುಮಾರು ಎರಡು ಸಾವಿರ ವರ್ಷಗಳಿಂದ ಕನ್ನಡದ ಮೇಲೆ ಹಲವಾರು ದಾಳಿಗಳು ನಡೆದಿವೆ ಮತ್ತು ಅನ್ಯಭಾಷೆಗಳ ದಟ್ಟ ಪ್ರಭಾವ ಬೀರಿವೆ. ಅವುಗಳಲ್ಲಿ ಸಂಸ್ಕೃತ, ಹಿಂದಿ, ಇಂಗ್ಲೀಷ್ ಹಾಗೂ ಕನ್ನಡದ ಸಹೋದರ ಭಾಷೆಗಳಾಗಿರಬಹುದು. ಇವುಗಳನ್ನೆಲ್ಲ ಮೀರಿ ಕನ್ನಡ ತನ್ನ ಅಸ್ತಿತ್ವ ಮತ್ತು ಅಸ್ಮಿತೆಯನ್ನು ಕಾಯ್ದುಕೊಂಡಿದೆ. ಈ ಬಗೆಯ ಎಲ್ಲಾ ಭಾಷಿಕ ನೆಲೆಗಳ ದಟ್ಟ ಪ್ರಭಾವಗಳನ್ನು ಧಿಕ್ಕರಿಸಿ ಕನ್ನಡ ಉಳಿವ ಬಗೆ ಹೇಗೆ ಎಂಬುದನ್ನು ವಚನಕಾರರು ನಮಗೆ ಹೇಳುತ್ತ ಹೋಗುತ್ತಾರೆ. ಇದಕ್ಕೆ ಪೂರಕವಾಗಿ ಮಹಲಿಂಗರಂಗನು ಕೂಡ ಕನ್ನಡ ಭಾಷಿಕ ಸೌಂದರ್ಯವನ್ನು ಮತ್ತು ಅದರ ಸರಳತೆಯನ್ನು ಅತ್ಯಂತ ಸೊಗಸಾಗಿ ಕಟ್ಟಿಕೊಟ್ಟಿದ್ದಾನೆ. ಹೀಗಾಗಿ ಕನ್ನಡ ನಾಶವಾಗುವ ಭಾಷೆಯಾಗಿದ್ದರೆ ಯಾವೊತ್ತೋ ನಾಶವಾಗಬೇಕಿತ್ತು. ಎಷ್ಟೇ ಅನ್ಯಭಾಷೆಗಳ ಪ್ರಭಾವವಾದರೂ ಅವುಗಳ ಜೊತೆ ಸಂಘರ್ಷ ನಡೆಸುತ್ತಲೆ ಕನ್ನಡ ಭಾಷೆ ಬೆಳೆಯುತ್ತೆ ಮತ್ತು ಬದುಕುತ್ತೆ. ಹೀಗಾಗಿ ಕನ್ನಡ ನಾಶವಾಗುವ ಭಾಷೆಯಲ್ಲ. ಹಾಗಂತ ಕನ್ನಡಕ್ಕೆ ಆತಂಕಗಳಿಲ್ಲ ಎಂದು ಹೇಳಲು ಸಾಧ್ಯವಿಲ್ಲ. ಆದರೆ ಆ ಆತಂಕಗಳನ್ನು ಮೀರುವ ಬಗೆ ಹೇಗೆ ಎಂಬುದೇ ಸಮಕಾಲೀನ ಸಂದರ್ಭದ ಸವಾಲು. ಒಂದು ಭಾಷೆಯೆಂದರೆ ಅದು ಕೇವಲ ಭಾಷೆ ಮಾತ್ರವಲ್ಲ, ಅದು ಒಂದು ಸಂಸ್ಕೃತಿಯೂ ಹೌದು. ಒಂದು ಭಾಷೆ ನಾಶವಾಗುತ್ತೆ ಎಂದರೆ ಒಂದು ಜನ ಸಂಸ್ಕೃತಿ ನಾಶವಾಗುತ್ತೆ ಎಂದೇ ಅರ್ಥ. ಹೀಗಾಗಿ ಕನ್ನಡದ ಅಸ್ತಿತ್ವ ಹಾಗೂ ಕನ್ನಡಿಗರ ಮುಂದಿರುವ ಆತಂಕಗಳನ್ನು ಮೆಟ್ಟುವ ನೆಲೆಯಲ್ಲಿ ನಮ್ಮ ಸರ್ಕಾರ, ನಮ್ಮ ಶಾಲೆಗಳು, ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಕನ್ನಡ ಸಾಹಿತ್ಯ ಪರಿಷತ್ತು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಕನ್ನಡ ಪರವಾದ ಸಂಘಟನೆ, ಸಂಘ-ಸಂಸ್ಥೆಗಳು ಸಕ್ರಿಯವಾಗಿ ತೊಡಗಿಕೊಳ್ಳಬೇಕಾಗಿದೆ. ಇಂದು ಕನ್ನಡದ ಬಗ್ಗೆ ಅರಿವೇ ಇಲ್ಲದ, ಹಳಗನ್ನಡವನ್ನು ಉಚ್ಚಾರಣೆ ಮಾಡಲಾಗದ ಹೈಬ್ರಿಡ್ ತಳಿಯೊಂದು ನಮ್ಮ ಮುಂದೆ ಸೃಷ್ಟಿಯಾಗುತ್ತಿದೆ. ಹೀಗಾಗಿ ಕನ್ನಡದ ಮನಸುಗಳಿಗೆ ದೊಡ್ಡ ಜವಬ್ದಾರಿ ಇದೆ ಎಂದು ನಾನು ಭಾವಿಸುತ್ತೇನೆ. ಭಾರತದ ಭಾಷೆಗಳಲ್ಲಿ ಕನ್ನಡವೂ ಒಂದು ರಾಷ್ಟ್ರಭಾಷೆ. ಕನ್ನಡ ಪ್ರಾದೇಶಿಕ ಭಾಷೆ ಎಂದು ಉಚ್ಚರಿಸುವುದೇ ತಪ್ಪಾದ ಕ್ರಮ ಎಂಬುದು ನನ್ನ ನಿಲುವು. ಸಂವಿಧಾನ ಕನ್ನಡವನ್ನು ಮಾನ್ಯ ಮಾಡಿದೆ. ಹೀಗಾಗಿ ಕನ್ನಡವೂ ರಾಷ್ಟ್ರಭಾಷೆಯಾಗಿದ್ದು, ಈ ರಾಷ್ಟ್ರದ ಅಸ್ಮಿತೆಗೆ ಪೂರಕವಾಗಿ ತನ್ನ ಧೀಮಂತಿಕೆಯಿಂದ ಅದು ಬೆಳೆಯುತ್ತದೆ.

**▸▸ಕನ್ನಡಿಗರಿಗೆ ಕನ್ನಡದ ಅಸ್ಮಿತೆಯನ್ನು ಪರಿಚಯಿಸುವ ಬಗೆ ಹೇಗೆ?**

ಈ ಪ್ರಶ್ನೆಗೆ ಕನ್ನಡ ಸಾಹಿತ್ಯ ಪರಂಪರೆಯಲ್ಲಿ ಹಲವಾರು ಕಡೆಗಳಲ್ಲಿ ಉತ್ತರವಿದೆ. ನಾನು ಹಿಂದೆ ಹೇಳಿದಂತೆ ಕನ್ನಡ ಒಂದು ಭಾಷೆ ಮಾತ್ರವಲ್ಲ, ಅದು ಕನ್ನಡದ ಪರಂಪರೆಯೂ ಹೌದು, ಕನ್ನಡದ ನೆಲ-ಜಲವೂ ಹೌದು. ಕನ್ನಡದ ಪರಂಪರೆ ಎಂತಹದು ಎಂಬುದನ್ನು ಕವಿರಾಜಮಾರ್ಗ ಕೃತಿಯನ್ನು ಮೊದಲು ಮಾಡಿಕೊಂಡು ಗುರುತಿಸುತ್ತ ಬಂದಿದ್ದೇವೆ. ಕವಿರಾಜಮಾರ್ಗಕಾರ ಹೇಳುವ 'ಕಸವರ' ಅಂದರೆ ಬಂಗಾರ ಎಂಬುದು ಯಾವುದು ಎಂಬುದನ್ನು ಹೇಳುವಾಗ ಪರಧರ್ಮವನ್ನು ಸಹಿಷ್ಣುತೆಯಿಂದ ನೋಡುವುದು, ಪರರ ವಿಚಾರಗಳನ್ನು ಗೌರವಿಸುವುದೇ ನಿಜವಾದ ಸಂಪತ್ತು ಎಂಬುದನ್ನು ತೋರಿಸಲಾಗಿದೆ. ಹೀಗಾಗಿ ಕನ್ನಡ ಸಂಸ್ಕೃತಿಯೇ ಸಹಿಷ್ಣುತೆಯ ಸಂಸ್ಕೃತಿಯಾಗಿದೆ. ಹೀಗಾಗಿ ಮುಂದೆ ಬಂದ ಪಂಪ 'ಮಾನವ ಜಾತಿ ತಾನೊಂದೆ ವಲಂ' ಎಂದು ಹೇಳಿದರೆ, ಕನಕದಾಸರು 'ಕುಲ ಕುಲ ಕುಲವೆಂದು ಹೊಡೆದಾಡದಿರಿ' ಎಂದು ಹೇಳುವಂತಹ ಹಲವಾರು ಆಲೋಚನೆಗಳು ನಮ್ಮಲ್ಲಿ ಮೂಡಿಬಂದಿವೆ. ಇವೆಲ್ಲವೂ ಜಾತ್ಯಾತೀತವಾಗಿ ಮತ್ತು ಧರ್ಮಾತೀತವಾಗಿ ಈ ನೆಲದಲ್ಲಿ ಮೂಡಿಬಂದಿವೆ. ನಾವು ಕನ್ನಡ ಭಾಷೆಯನ್ನು ಪರಿಚಯಿಸುವಾಗ, ಏಕಕಾಲದಲ್ಲಿ ಕನ್ನಡದ ಅಸ್ಮಿತೆಯನ್ನು ಪರಿಚಯಿಸಬೇಕು. ಅದರ ಜೊತೆಗೆ ಮಾಧ್ಯಮಗಳು, ಆಳುವ ಸರ್ಕಾರ ಕನ್ನಡ ಭಾಷೆಗೆ ಕುತ್ತು ತರುವ ಹಲವಾರು ಕಾರ್ಯಗಳಲ್ಲಿ ತೊಡಗಿಕೊಂಡಿವೆ. ನಮ್ಮ ಕೇಂದ್ರ ಸರ್ಕಾರ ಇದೆಯಲ್ಲ ಅದನ್ನು ನಾವು ಕೇಂದ್ರ ಸರ್ಕಾರ ಎನ್ನುವುದಕ್ಕಿಂತ ಒಕ್ಕೂಟ ಸರ್ಕಾರ ಎಂದು ಕರೆಯುವುದು ಸೂಕ್ತ. ಈ ಒಕ್ಕೂಟ ಸರ್ಕಾರ ಕನ್ನಡಿಗರ ಮೇಲೆ ಹಿಂದಿಯನ್ನು ಒತ್ತಾಯಪೂರ್ವಕವಾಗಿ ಹೇರುವ ಪ್ರಯತ್ನ ಮಾಡುತ್ತಿದೆ. ಹಾಗೆಯೇ ಒಕ್ಕೂಟ ಸರ್ಕಾರದ ಯಾವುದೇ ಕಾರ್ಯಕ್ರಮಗಳನ್ನು ಹಿಂದಿ ಭಾಷೆಯಲ್ಲಿಯೇ ಆಯೋಜಿಸಲಾಗುತ್ತಿದೆ. ವಿಶೇಷವಾಗಿ ನಮ್ಮ ಬ್ಯಾಂಕುಗಳಲ್ಲಿ ಕನ್ನಡ ಮಾತನಾಡುವ ಅಧಿಕಾರಿಗಳ ಸಂಖ್ಯೆ ತೀರಾ ವಿರಳ. ನಾವು ತ್ರಿಭಾಷ ಸೂತ್ರದ ಅಡಿಯಲ್ಲಿ ಹಿಂದಿಯನ್ನು ಮೂರನೇ ಭಾಷೆಯಾಗಿ ಒಪ್ಪಿಕೊಂಡಿದ್ದೇವೆ. ಕನ್ನಡ ಉಳಿಯಬೇಕಾದರೆ ಸರ್ಕಾರಿ ಶಾಲೆಗಳು ಉಳಿಯಬೇಕು. ಇಂದು ಸರ್ಕಾರದ ಶಾಲೆಗಳು ಅವಜ್ಞೆಗೆ ಒಳಗಾಗಿವೆ. ಸರ್ಕಾರಗಳು ಶಾಲೆಗಳ ಜಾಗಗಳನ್ನು ಕಬಳಿಸುತ್ತಿವೆ, ಇಂದಿಗೂ ಏಕ ಶಿಕ್ಷಕ ಇರುವ ಶಾಲೆಗಳು ನಮ್ಮಲ್ಲಿವೆ. ನೂರು ವರ್ಷ ದಾಟಿರುವ ಶಾಲೆಗಳನ್ನು ಸರಿಯಾಗಿ ನಿರ್ವಹಣೆ ಮಾಡುತ್ತಿಲ್ಲ. ಹೀಗಾಗಿ ಕನ್ನಡ ಶಾಲೆಗೆ ಬರುವವರ ಸಂಖ್ಯೆ ದಿನದಿಂದ ದಿನಕ್ಕೆ ಕಡಿಮೆಯಾಗುತ್ತಿದೆ. ಇಂತಹ ಸಂದರ್ಭದಲ್ಲಿ ಸಂಸ್ಕೃತಿ ಚಿಂತಕರು ಹಾಗೂ ಕನ್ನಡಪರ ಹೋರಾಟಗಾರರ ಜವಾಬ್ದಾರಿ ಹೆಚ್ಚಿದೆ. ಹೀಗಾಗಿ ಕನ್ನಡದ ಅಸ್ಮಿತೆಯನ್ನು ಹೇಳುವುದರ ಜೊತೆಗೆ ಕನ್ನಡವನ್ನು ಕಲಿಸುವ ಕ್ರಮ ಬದಲಾಗಬೇಕಿದೆ. ನಾವು ಸಣ್ಣವರಿದ್ದಾಗ ಕನ್ನಡವನ್ನು ಕಲಿಸುವ





ಕ್ರಮ ಇತ್ತಲ್ಲ ಅದೇ ಸರಿಯಾದ ಕ್ರಮ ಎಂದು ನಾನು ಭಾವಿಸಿರುವೆ. ಆ ಕ್ರಮದ ಮೂಲಕವೇ ಭಾಷಾ ಬೋಧನೆ ಮಾಡಬೇಕಾದ ಜರೂರು ಇದೆ.

**▶▶ ಕನ್ನಡದ ಮೇಲೆ ಹಿಂದಿ ಹೇರಿಕೆಯ ಹಿಂದಿನ ತಂತ್ರವೇನು?**

ಇತ್ತೀಚಿನ ರಾಜಕೀಯ ಬೆಳವಣಿಗೆಗಳನ್ನು ಗಮನಿಸಿದರೆ ಏಕ ಎನ್ನುವ ವ್ಯಸನ ಹೆಚ್ಚಾಗುತ್ತಿದೆ. ಒಂದು ದೇಶ, ಒಂದು ಚುನಾವಣೆ ಎನ್ನುವಂತಹದ್ದು ನಮ್ಮ ಮುಂದೆ ಕೇಳಿಬರುತ್ತಿದೆ. ಆದರೆ ಭಾರತ ಎಂಬುದು ಒಕ್ಕೂಟ ವ್ಯವಸ್ಥೆ ಎಂಬುದನ್ನು ನಾವು ಅರ್ಥಮಾಡಿಕೊಳ್ಳಬೇಕಾಗಿದೆ. ಈ ಒಕ್ಕೂಟ ವ್ಯವಸ್ಥೆಗೆ ಧಕ್ಕೆಯಾಗುವಂತಹ ಸಾಧ್ಯತೆಗಳು ಬೇರೆ ಬೇರೆ ಆಯಾಮಗಳಲ್ಲಿ ನಮ್ಮೊಳಗೆ ಪ್ರವೇಶ ಮಾಡುತ್ತಿವೆ. ಆ ಆಯಾಮಗಳಲ್ಲಿ ಭಾಷಿಕ ಆಯಾಮವು ಒಂದು. ನಾವು ತ್ರಿಭಾಷಾ ಸೂತ್ರದ ಅಡಿಯಲ್ಲಿ ಮೂರು ಭಾಷೆಗಳನ್ನು ಕಲಿಯುತ್ತೇವೆ. ಆದರೆ ಉತ್ತರ ಭಾರತದವರು ಯಾರೂ ತ್ರಿಭಾಷಾ ಸೂತ್ರ ಅಳವಡಿಸಿಕೊಂಡು ಮೂರು ಭಾಷೆಗಳನ್ನು ಕಲಿಯುವ ಪ್ರಯತ್ನ ಮಾಡುವುದಿಲ್ಲ. ಅವರು ಕೇವಲ ಎರಡು ಭಾಷೆಯನ್ನು ಕಲಿಯುತ್ತಾರೆ. ಹಾಗಾದರೆ ನಾವು ಯಾಕೆ ಹಿಂದಿಯನ್ನು ಕಲಿಯಬೇಕು. ಭಾಷೆಯಾಗಿ ಕಲಿಯುವುದು ಬೇರೆ. ಆದರೆ ರಾಷ್ಟ್ರಭಾಷೆಯೆಂದು ಹೇರುವ ಕ್ರಮ ಸರಿಯಲ್ಲ. ಹಿಂದಿ ಹೇಗೆ ಒಂದು ರಾಷ್ಟ್ರೀಯ ಭಾಷೆಯೋ ಹಾಗೆಯೇ ಕನ್ನಡವೂ ಒಂದು ರಾಷ್ಟ್ರೀಯ ಭಾಷೆ. ನಾವು ಹಿಂದಿ ಕಲಿಯವಂತೆ ಉತ್ತರ ಭಾರತದವರು ಕನ್ನಡವಾಗಲಿ ಅಥವಾ ಉಳಿದ ಯಾವುದೇ ಭಾಷೆಯನ್ನು ಕಲಿಯುವ ಪ್ರಯತ್ನ ಮಾಡುವುದಿಲ್ಲ. ಆದರೆ ಇಲ್ಲಿ ಹಿಂದಿ ಭಾಷೆಯನ್ನು ಹೇರುವ ಮೂಲಕ ಹಿಂದಿ ಸಂಸ್ಕೃತಿಯನ್ನು ನಮ್ಮ ಮೇಲೆ ಹೇರಲಾಗುತ್ತಿದೆ. ಆ ಮೂಲಕ ಕನ್ನಡದ ಅಸ್ಮಿತೆಯನ್ನು ನಾಶ ಮಾಡಿ, ಒಕ್ಕೂಟ ವ್ಯವಸ್ಥೆಯ ಬೇರುಗಳನ್ನು ಸಡಿಲ ಮಾಡುವಂತಹ ಹುನ್ನಾರಗಳು ಇಲ್ಲಿ ಅಡಗಿವೆ.

**▶▶ ತಾವು ಪ್ರಸ್ತುತ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ನಿರ್ದೇಶಕರಾಗಿ ಕಾರ್ಯನಿರ್ವಹಿಸುತ್ತಿದ್ದೀರಿ. ಇದರ ಅಡಿಯಲ್ಲಿ ತಮ್ಮ ತಂಡ ಕನ್ನಡ ಅಭಿವೃದ್ಧಿಗೆ ಕೈಗೊಂಡ ವಿಶೇಷ ಯೋಜನೆಗಳೇನು?**

ಇಂದು ಕರ್ನಾಟಕದಲ್ಲಿ ಕನ್ನಡಿಗರಲ್ಲದ ಹಲವಾರು ಅಧಿಕಾರಿಗಳು ಅದರಲ್ಲೂ ಐಎಎಸ್ ಹಾಗೂ ಐಪಿಎಸ್ ಕೇಡರ್ ಅಧಿಕಾರಿಗಳು ಹೆಚ್ಚಾಗಿ ಕೆಲಸ ಮಾಡುತ್ತಿದ್ದಾರೆ. ಅವರೆಲ್ಲ ಆಡಳಿತವನ್ನು ಕನ್ನಡದಲ್ಲಿಯೇ ನಡೆಸಬೇಕು ಎಂಬುದು ಸರ್ಕಾರದ ಆದೇಶ. ಆದರೆ ನಾನು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಸದಸ್ಯನಾಗಿ ಹಲವಾರು ಕಛೇರಿಗಳನ್ನು ಭೇಟಿ ಮಾಡಿ ನೋಡಿದಾಗ ಕನ್ನಡದ ಅಧಿಕಾರಿಗಳೇ ಇಂಗ್ಲಿಷ್‌ನಲ್ಲಿ ಕಡತಗಳನ್ನು ಸಿದ್ಧಮಾಡುತ್ತಿದ್ದಾರೆ. ಇದು ಬಹುದೊಡ್ಡ ಆತಂಕ. ಅವರಿಗೆ ಕನ್ನಡದಲ್ಲಿ ಆಡಳಿತ ರೂಪಿಸದೆ ಇರುವ ಸ್ಥಿತಿಯಿದೆ. ಈ ಕಾರಣಕ್ಕೋಸ್ಕರ ಕನ್ನಡ ಅಭಿವೃದ್ಧಿ ಪ್ರಾಧಿಕಾರ ಹಲವಾರು ಯೋಜನೆಗಳನ್ನು ರೂಪಿಸಿಕೊಂಡಿದೆ. ಅವುಗಳಲ್ಲಿ ಒಂದು, ಕನ್ನಡದಲ್ಲಿ ಆಡಳಿತ ನಡೆಸಲು ಸೂಕ್ತವಾದ ವೇದಿಕೆಯನ್ನು ನಿರ್ಮಾಣ ಮಾಡುವ ನಿಟ್ಟಿನಲ್ಲಿ ಯೋಜನೆ ರೂಪಿಸಲಾಗಿದ್ದು, ಕನ್ನಡದ ಆಡಳಿತಕ್ಕೆ ತೊಡಕುಗಳು ಇರುವ ಕಡೆಗಳಲ್ಲಿ ಆ ತೊಡಕುಗಳನ್ನು ಬಗೆಹರಿಸುವ ನಿಟ್ಟಿನಲ್ಲಿ ಮಾಹಿತಿಯನ್ನು ಒದಗಿಸುವಂತದ್ದು, ಮತ್ತೊಂದು ಕನ್ನಡದ ನೆಲದಲ್ಲಿ ಸವಹಾರ್ದತೆಯ ಕುರುಹುಗಳು ಹೆಜ್ಜೆ ಹೆಜ್ಜೆಗೂ



ಲಭಿಸುತ್ತದೆ. ಇಂತಹ ಸೌಹಾರ್ದತೆಯ ಪ್ರತೀಕವಾಗಿ ಸುಮಾರು 100 ಕೃತಿಗಳನ್ನು ಹೊರತರುವ ಯೋಜನೆಯನ್ನು ರೂಪಿಸಲಾಗಿದೆ. ಬ್ಯಾಂಕುಗಳಲ್ಲಿ ಕನ್ನಡ ಕಡ್ಡಾಯ ಎಂಬ ಯೋಜನೆ ನಮ್ಮ ಮುಂದಿದೆ. ಹಾಗೆಯೇ ಹೊರಗಿನಿಂದ ಬಂದವರಿಗೆ ಕನ್ನಡವನ್ನು ಕಲಿಸುವ ಯೋಜನೆಯಿದ್ದು, ಇಂತಹವರಿಗಾಗಿ ಕನ್ನಡ ಕಲಿಕಾ ಕೇಂದ್ರವನ್ನು ತೆರೆಯುವ ಯೋಜನೆ ರೂಪಿಸಲಾಗಿದೆ. ಹೀಗಾಗಿ ಮದರಸ, ಕಛೇರಿ, ಐಟಿ, ಬಿಟಿಗಳಲ್ಲಿ ಕನ್ನಡ ಕಲಿಕಾ ಕೇಂದ್ರಗಳನ್ನು ತೆರೆಯಲಾಗುತ್ತಿದೆ. ಇದರೊಂದಿಗೆ ನೂರು ವರ್ಷ ಪೂರೈಸಿರುವ ಸರ್ಕಾರಿ ಶಾಲೆಗಳನ್ನು ಗುರುತಿಸಿ ಕನ್ನಡ ಅಭಿವೃದ್ಧಿ ಪ್ರಾಧಿಕಾರದೊಂದಿಗೆ ಖಾಸಗಿ ಸಹಭಾಗಿತ್ವದಲ್ಲಿ ಇಂತಹ ಶಾಲೆಗಳನ್ನು ಅಭಿವೃದ್ಧಿಪಡಿಸುವ ಯೋಜನೆಯನ್ನು ರೂಪಿಸಲಾಗಿದೆ. ಇಂತಹ ಹಲವಾರು ಯೋಜನೆಗಳನ್ನು ಕನ್ನಡ ಅಭಿವೃದ್ಧಿ ಪ್ರಾಧಿಕಾರ ಕೈಗೊಂಡಿದೆ.

**▶▶ ಕನ್ನಡ ನೆಲದಲ್ಲಿ ಜನ್ಮತಳೆದ ವೈಚಾರಿಕ ಚಿಂತನಧಾರೆಗಳು ವಿಶ್ವಾತ್ಮಕ ನೆಲೆಯಲ್ಲಿ ಅನುಸಂಧಾನಗೊಳ್ಳಲು ಇದ್ದಂತಹ ತೊಡಕುಗಳೇನು?**

ನಮ್ಮಲ್ಲಿ ಸಾಹಿತ್ಯವನ್ನು ಸಾಹಿತ್ಯವಾಗಿಯೇ ನೋಡಬೇಕು ಎಂಬ ಮೂಲಭೂತವಾದಿ ಸಾಹಿತಿಗಳು ನಮ್ಮಲ್ಲಿದ್ದಾರೆ. ಯಾವುದೇ ಒಂದು ಸಾಹಿತ್ಯ ಕೃತಿ ಆಯಾ ಕಾಲದ ಪ್ರೇರಣೆ ಮತ್ತು ಪ್ರಭಾವಗಳೊಂದಿಗೆ ಅನೇಕ ತಾತ್ವಿಕ ಚಿಂತನೆಗಳಿಂದ ಪ್ರಭಾವಿತವಾಗಿರುತ್ತದೆ. ಭಾರತೀಯ ತತ್ವಜ್ಞಾನ ನಮ್ಮ ಎಲ್ಲ ಪಠ್ಯಗಳ ಮೇಲೆ ಪ್ರಭಾವ ಬೀರಿದೆ. ಇಂತಹ ಭಾರತೀಯ ತತ್ವಜ್ಞಾನದಲ್ಲಿ ಪ್ರಮುಖವಾಗಿ ಎರಡು ಧಾರೆಗಳನ್ನು ನೋಡುತ್ತೇವೆ. ಒಂದು ಭೌತವಾದ, ಇನ್ನೊಂದು ಅಭೌತವಾದ. ಭೌತವಾದ ವಾಸ್ತವ ಜಗತ್ತಿಗೆ ಬಗ್ಗೆ ಮಾತನಾಡಿದರೆ, ಅಭೌತವಾದ ಕಾಣಲಾರದ ಜಗತ್ತಿನ ಬಗ್ಗೆ ಮಾತನಾಡುತ್ತದೆ. ಈ ವೈದಿಕ ಧರ್ಮ ಅಭೌತವಾದವನ್ನು ಅನಾದಿ ಕಾಲದಿಂದಲೂ ಮಾತನಾಡಿಕೊಂಡು ಬಂದಿದೆ. ಬುದ್ಧ ಮಾತನಾಡಿದ್ದು ಭೌತವಾದದ ಕುರಿತು. ಹಾಗೆಯೇ ನಮ್ಮ ವಚನಕಾರರು ಮಾತನಾಡಿದ್ದು ಕೂಡ ಭೌತವಾದದ ಬಗ್ಗೆ. ಅಲ್ಲಿಂದ ಎಲ್ಲ ಭಕ್ತಿ ಪರಂಪರೆಗಳನ್ನು ಅವಲೋಕಿಸಿದರೆ ಭೌತವಾದದ ಬಗ್ಗೆ ಪ್ರತಿಪಾದಿಸಿವೆ. ಆ ಮೂಲಕ ಅಭೌತವಾದಕ್ಕೆ ಪ್ರತಿಯಾಗಿ ಸಂಘರ್ಷ ನಡೆಸುತ್ತ ಬಂದಿವೆ. ಆದರೂ ನಾವು ಎರಡು ಸಾವಿರ ವರ್ಷಗಳಿಗಿಂತ ಸುದೀರ್ಘ ಕಾಲದಲ್ಲಿ ಯಾವುದನ್ನು ಮೀರುವ ನೆಲೆಯಲ್ಲಿ ಭೌತವಾದ ಬೆಳೆದುಕೊಂಡು ಬಂದಿದೆಯೋ ಅದು ಶ್ರಮಪಡದೆ, ಆಯಾ ಕಾಲಘಟ್ಟಕ್ಕೆ ಅನುಗುಣವಾಗಿ ತನ್ನ





ಸ್ವರೂಪವನ್ನು ಬದಲಾಯಿಸಿಕೊಂಡು ಇಂದಿಗೂ ಜೀವಂತವಾಗಿದೆ. ಹೀಗಾಗಿ ದುಡಿಯದೆ ಬದುಕುವ ಪುರೋಹಿತಶಾಹಿ ವರ್ಗ ಇವತ್ತಿಗೂ ದೇವರು-ಧರ್ಮದ ಹೆಸರಿನಲ್ಲಿ ಜನರನ್ನು ವಂಚಿಸುವ ಪ್ರಯತ್ನದ ಭಾಗವಾಗಿ ಅಭೌತವಾದವನ್ನು ಜೀವಂತವಾಗಿ ಕಾಪಾಡಿಕೊಂಡಿದೆ. ಹೀಗಾಗಿ ಸಮಾನತೆ, ಸಂವಿಧಾನ, ಸೌಹಾರ್ದತೆ, ಭ್ರಾತೃತ್ವಕ್ಕೆ ಪೂರಕವಾದ ಚಿಂತನೆಗಳಿಗೆ ಅಸಹನೆ ಮೂಡುತ್ತಿವೆ. ಆದರೆ ಕನ್ನಡದ ವೈಚಾರಿಕ ಮನಸುಗಳು ಎಂದಿಗೂ ಅಭೌತವಾದಕ್ಕೆ ಶರಣಾಗತಿಯಾಗಿಲ್ಲ. ಪ್ರತಿರೋಧದ ಮೂಲಕವೇ ಇಂದಿಗೂ ಸಾಗಿವೆ.

**▶▶ ಕನ್ನಡದ ವೈಚಾರಿಕ ಚಿಂತನಧಾರೆಗಳು ಸಮಕಾಲೀನ ಸಂದರ್ಭದ ಕೋಮುವಾದವನ್ನು ಹತ್ತಿಕ್ಕುವ ನೆಲೆಯಲ್ಲಿ ಸಿದ್ಧಗೊಳ್ಳುವ ಬಗೆ ಹೇಗೆ?**

ನಾನು ಯಾವಾಗಲೂ ಒಂದು ಸಾಧ್ಯತೆಯ ಬಗ್ಗೆ ಮಾತನಾಡುತ್ತಿರುತ್ತೇನೆ. ಯಾವುದೇ ಬರಹಗಾರ, ಚಿಂತಕನಿಗೆ ತನ್ನ ಆಲೋಚನೆಗಳನ್ನು ಸಮಕಾಲೀನ ಚಿಂತನೆಗಳೊಂದಿಗೆ ಅನುಸಂಧಾನಗೊಳ್ಳುವ ಗುಣವಿರಬೇಕು. ನಾವು ಯಾವುದೇ ಕಾಲದ ಪಠ್ಯಗಳನ್ನು ಓದುವಾಗ ಎರಡು ನೆಲೆಗಳಿವೆ. ಒಂದು, ಪಠ್ಯವನ್ನು ಕಾಲಬದ್ಧವಾಗಿ ಓದುವುದು, ಮತ್ತೊಂದು ಕಾಲಾತೀತವಾಗಿ ಓದುವುದು. ಪಠ್ಯವನ್ನು ಕಾಲಾತೀತವಾಗಿ ಓದುವುದಕ್ಕೆ ಒಂದು ದಾರಿಯನ್ನು ರೂಪಿಸಿಕೊಂಡರೆ ಪ್ರಧಾನವಾಗಿ ಕನ್ನಡ ಪರಂಪರೆ ಹೇಗೆ ಧರ್ಮಾಂದತೆ, ಕೋಮುವಾದಕ್ಕೆ ಪ್ರತಿಕ್ರಿಯಾತ್ಮಕವಾಗಿದೆ ಎಂಬುದು ನಮಗೆ ತಿಳಿಯುತ್ತದೆ. ನಮ್ಮ ಶರೀಫರ ತತ್ವ-ಚಿಂತನೆ ಇದೆಯಲ್ಲ ಅದು ಸೌಹಾರ್ದತೆಗೆ ಇರುವ ಪ್ರಧಾನ ಧಾರೆ. ಕನ್ನಡದ ಸಂಸ್ಕೃತಿ ಹೇಗಿದೆ ಎಂದರೆ ಮುಸ್ಲಿಮರೆ ಇಲ್ಲದ ಎಷ್ಟೋ ಊರುಗಳಲ್ಲಿ ದರ್ಗಗಳಿವೆ. ಹಿಂದೂ-ಮುಸ್ಲಿಮರು ಒಟ್ಟೊಟ್ಟಿಗೆ ಸೇರಿ ಆಚರಿಸುವ ಎಷ್ಟೋ ಆಚರಣೆಗಳು ನಮ್ಮಲ್ಲಿ ಜೀವಂತವಾಗಿವೆ. ನಾವೆಲ್ಲ ಚಿಕ್ಕವರಿದ್ದಾಗ ಮುಸ್ಲಿಮರ ಮನೆಯ ಚೋಂಗೆ ನಮ್ಮ ಮನೆಗೆ ಬರುತ್ತಿತ್ತು. ನಮ್ಮ ಮನೆಯ ಹೋಳಿಗೆ ಅವರ ಮನೆಗೆ ಹೋಗುತ್ತಿದ್ದವು. ನಮ್ಮ ಹಬ್ಬ ಅವರದಾಗುತ್ತಿತ್ತು, ನಮ್ಮ ಹಬ್ಬ ಅವರ ಹಬ್ಬವಾಗುತಿತ್ತು. ಅಂತಹ ಸಾಧ್ಯತೆ ಇಂದು ನನ್ನ ಹಳ್ಳಿಯಲ್ಲಿ ಇಲ್ಲ. ಇದಕ್ಕೆ ಕಾರಣ ಈ ರಾಜಕೀಯ ಮೀಮಾಂಸೆಗಳು. ಇಂತಹ ವಿಷಬೀಜ ಬಿತ್ತುವ ಕೋಮುವಾದಿ ಮನಸ್ಥಿತಿಗಳನ್ನು ಖಂಡಿಸುವ ವಿಚಾರವಾದಿಗಳನ್ನು 'ನಗರ ನಕ್ಸಲರು' ಎಂಬ ಹಣೆಪಟ್ಟ ಕಟ್ಟಲಾಗುತ್ತಿದೆ. ಯಾರು ತನ್ನ ಹಕ್ಕನ್ನು ಕೇಳುತ್ತಾರೋ ಅವರು ದೇಶದ್ರೋಹಿಗಳಾಗುತ್ತಿದ್ದಾರೆ. ಈ ಕೋಮುವಾದ ಭಾಷೆಯೊಳಗೂ ಇವತ್ತು ಪ್ರವೇಶ ಮಾಡಿದೆ. ಭಾಷೆಗೂ ಧರ್ಮಕ್ಕೂ ಯಾವುದೇ ಸಂಬಧವಿಲ್ಲ. ಉತ್ತರ ಕರ್ನಾಟಕಕ್ಕೆ ಹೋದರೆ ಹಲವರ ಮನೆಮಾತು ಉರ್ದು. ಅದು ಕೇವಲ ಮುಸ್ಲಿಮರ ಭಾಷೆಯಲ್ಲ. ಇತ್ತೀಚೆಗೆ ದೇವಾಲಯದ ಮುಂದೆ ಮುಸ್ಲಿಮರು ಅಂಗಡಿ ಇಡಬಾರದು ಎಂಬ ಮನಸ್ಥಿತಿಗಳನ್ನು ನೋಡಿದ್ದೇವೆ. ಹೀಗಾಗಿ ಸಾಮಾಜಿಕ, ಧಾರ್ಮಿಕ ಹಾಗೂ ಆರ್ಥಿಕ ವಲಯದಲ್ಲೂ ಕೋಮುವಾದ ಪ್ರವೇಶ ಪಡೆದು ಹಳ್ಳಿ-ಹಳ್ಳಿಗಳಿಗೂ ಇದು ಹಬ್ಬದೆ. ಹೀಗಾಗಿ ಶಾಲೆ ಬಿಟ್ಟು ಬೀದಿಗೆ ಬಂದು ನಿಲ್ಲುವ ಸ್ಥಿತಿ ನಿರ್ಮಾಣವಾಗಿದೆ. ಶಾಲಾ-ಕಾಲೇಜುಗಳಲ್ಲಿ ಕೇಸರಿ ಬಾವುಟ ಹಾರಿಸಿದ್ದನ್ನ ರಾಜಕಾರಣಿಗಳು ಸಮರ್ಥಿಸಲು ಮುಂದಾಗಿದ್ದಾರೆ. ಇಂದು ಶಾಲಾ ಕಾಲೇಜುಗಳಲ್ಲಿ, ಮುಂದೆ ಕೆಂಪುಕೋಟೆಯ ಮೇಲೂ



ಕೇಸರಿ ಬಾವುಟ ಹಾರಿಸುತ್ತೇವೆ ಎಂಬ ಕೂಗುಗಳು ಕೇಳಿಬರುತ್ತಿವೆ. ಇವೆಲ್ಲವೂ ನಮ್ಮ ಸೌಹಾರ್ದತೆಗೆ ಧಕ್ಕೆ ತರುವ ಪ್ರಯತ್ನಗಳಾಗಿವೆ. ಹೀಗಾಗಿ ನಮ್ಮ ಪರಂಪರೆಯಲ್ಲಿರುವ ಸೌಹಾರ್ದತೆಯ ಬೀಜಗಳು ಹೆಮ್ಮರವಾಗಿ ಬೆಳೆದಿವೆ. ಅವುಗಳಿಗೆ ಕೊಡಲಿ ಪೆಟ್ಟು ಬೀಳದಂತೆ ನೋಡಿಕೊಳ್ಳಬೇಕಾದ ಜವಬ್ದಾರಿ ಪ್ರತಿಯೊಬ್ಬ ಕನ್ನಡಿಗರ ಮೇಲಿದೆ. ಒಂದು ಆಶಾದಾಯಕ ಬೆಳವಣಿಗೆ ಎಂದರೆ ಇಂತಹ ಕೋಮುವಾದವನ್ನು ಖಂಡಿಸುವ ಹಲವಾರು ಯುವ ಬರಹಗಾರರು, ಚಿಂತಕರು ಹೊಸ ಹೊಸ ಚಿಂತನೆಗಳನ್ನು ಅಭಿವ್ಯಕ್ತಿಸುವ ಮೂಲಕ ಕನ್ನಡ ನೆಲದಲ್ಲಿ ಸೌಹಾರ್ದತೆಯನ್ನು ಮೆರೆಯುತ್ತಿದ್ದಾರೆ.

**▶▶ ತಾವು ಹೀಗಾಗಲೇ ಮಾನವ ಬಂಧುತ್ವ ವೇದಿಕೆಯ ರಾಜ್ಯ ಸಂಚಾಲಕರಾಗಿ ಕಾರ್ಯ ಪ್ರವೃತ್ತರಾಗಿದ್ದೀರಿ. ಇಂತಹ ಸಂದರ್ಭದಲ್ಲಿ ನಿಮ್ಮ ವೈಚಾರಿಕ ಚಿಂತನೆಗಳ ಪ್ರತಿಪಾದನೆಗೆ ಇದು ಹೇಗೆ ಸಹಕಾರಿಯಾಗಿದೆ.**

ಮಾನವ ಬಂಧುತ್ವ ಎಂದರೆ ಮನುಷ್ಯ ಮನುಷ್ಯರ ನಡುವೆ ಬಾಂಧವ್ಯ ಬೆಸೆಯುವುದು. ಮೊದಲನೆಯದಾಗಿ ಇದಕ್ಕೆ ಕಾರಣೀಭೂತರಾದ ಸನ್ಮಾನ್ಯ ಸತೀಶ್ ಜಾರಕಿಹೊಳಿ ಸಾಹೇಬ್ರಿಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಅವರು ತಮ್ಮ ದುಡಿಮೆಯ ಶೇಕಡ ಹತ್ತರಷ್ಟು ಪಾಲನ್ನು ಸಮಾಜಮುಖಿಯಾದ ಕೆಲಸ ಕಾರ್ಯಗಳಿಗೆ ಮುಡುಪಾಗಿಟ್ಟ ಕಾರಣ ಕರ್ನಾಟಕದಾದ್ಯಂತ ಜೀವಪರ ಮತ್ತು ಪ್ರಗತಿಪರ ನೆಲೆಯ ಹಲವಾರು ಯೋಜನೆಗಳನ್ನು ರೂಪಿಸುವುದಕ್ಕೆ ಸಾಧ್ಯವಾಗಿದೆ. ಹೀಗಾಗಿ ಕನ್ನಡಿಗರ ಅಸ್ತಿತ್ವಕ್ಕೆ ಪೂರಕವಾದ ಕಾರ್ಯಕ್ರಮಗಳಾಗಿರಬಹುದು, ಮಹಿಳಾ ಸಬಲೀಕರಣ, ಯುವಜನತೆಗೆ ಸ್ಪರ್ಧಾತ್ಮಕ ಪರೀಕ್ಷೆಗೆ ಸಂಬಂಧಿಸಿದಂತೆ ಇನ್ನೂ ಹಲವಾರು ಕಾರ್ಯಕ್ರಮಗಳನ್ನು ರೂಪಿಸಿ, ಹಲವಾರು ಪ್ರಗತಿಪರ ಚಿಂತನಧಾರೆಗಳು ಮತ್ತು ಹೋರಾಟಗಳನ್ನು ಒಂದೆಡೆ ಬೆಸೆಯುವುದಕ್ಕೆ ಈ ವೇದಿಕೆ ಸಾಕಷ್ಟು ಅವಕಾಶ ಕಲ್ಪಿಸಿಕೊಟ್ಟಿದೆ. ಈ ನಿಟ್ಟಿನಲ್ಲಿ ಇನ್ನಷ್ಟು ಸಕ್ರಿಯವಾಗಿ ನಾಡಿನಾದ್ಯಂತ ಸಂಚರಿಸಿ ಕೆಲಸ ನಿರ್ವಹಿಸಲು ಹುಮ್ಮಸ್ಸು ಮೂಡಿದೆ.

**▶▶ ದಾವಣಗೆರೆ ಜಿಲ್ಲಾ ೧೪ನೇ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರಾಗಿ ಆಯ್ಕೆಯಾಗಿದ್ದೀರಿ. ಇಂತಹ ಸಂದರ್ಭದಲ್ಲಿ ಕನ್ನಡ ನಾಡಿನ ಜನತೆಗೆ ತಮ್ಮ ಸಂದೇಶವೇನು?**

ಕನ್ನಡ ಉಳಿಬೇಕು, ಬೆಳಿಬೇಕು ಎಂಬುದು ನಮ್ಮೆಲ್ಲರ ಆಶಯ. ಅದರ ಜೊತೆಗೆ ನಮ್ಮ ಯುವಜನತೆ ನಮ್ಮೊಳಗೆ ಸದ್ದಿಲ್ಲದೆ ಸೇರಿವ ಕೋಮುವಾದ ಶಕ್ತಿಗಳಿಗೆ ಬಲಿಯಾಗದಂತೆ ಎಚ್ಚರವಹಿಸಬೇಕಾಗಿದೆ. ನಾವು ಎಲ್ಲ ಭಾಷಿಕರನ್ನು, ಎಲ್ಲ ಧರ್ಮಿರನ್ನು ಗೌರವಿಸಬೇಕು. ಇದನ್ನು ನಮ್ಮ ಪರಂಪರೆಯೇ ನಮಗೆ ಕಲಿಸಿಕೊಟ್ಟಿದೆ. ಕನ್ನಡ ಉಳಿವಿಗೆ ಅಭಿಮಾನ ಅಗತ್ಯ. ಕನ್ನಡ ಕೇವಲ ಭಾಷೆ ಮಾತ್ರವಲ್ಲ. ಕನ್ನಡದ ಮುಂದಿನ ಇಂದಿನ ಬಿಕ್ಕಟ್ಟುಗಳಿಗೆ ಸಾಹಿತಿ ಮತ್ತು ಸಾಹಿತ್ಯ ಇಬ್ಬರು ಉತ್ತರದಾಹಿಗಳಾಗಬೇಕು. ಕನ್ನಡದ ಅಸ್ಮಿತೆಗೆ ಧಕ್ಕೆ ತರುವ ಕೋಮುವಾದದ ಕಸವನ್ನು ಕಿತ್ತೆಸೆಯಬೇಕು. ಹಾಗೆಯೇ ಸಂವಿಧಾನ ವಿರೋಧಿ ಮನಸ್ಸುಗಳನ್ನು ಗಟ್ಟಿಯಾಗಿ ಖಂಡಿಸಬೇಕು. ಕನ್ನಡದ ಮನಸ್ಸುಗಳು ಸೌಹಾರ್ದತೆಯನ್ನು ಮೆರೆಯುವಂತಾಗಲಿ ಎಂಬುದಾಗಿ ಆಶೀಸುತ್ತೇನೆ.





# ಅಲ್ಪಕಾಲದಲ್ಲಿ ತೋರಿದ ಅಪಾರ ಪ್ರೀತಿಗೆ



ಎ.ಬಿ.ಆರ್. ಎಂದೇ ಹೆಸರಾಗಿರುವ ಪ್ರೊ.ಎ.ಬಿ.ರಾಮಚಂದ್ರಪ್ಪ ಅವರು ಚಿರಪರಿಚಿತ ಅನಿರೀಕ್ಷಿತವಾದದ್ದು. ಅವರು ಪರಿಚಯವಾದ ಅಲ್ಪ ಅವಧಿಯಲ್ಲೇ ಪ್ರೇರಣೆಯಾದ ವ್ಯಕ್ತಿತ್ವ. ಸಚಿವರು, ಸಜ್ಜನ ರಾಜಕಾರಣಿ, ಪ್ರಗತಿಪರ ಚಿಂತಕರು ಎನಿಸಿಕೊಳ್ಳುವ ಸತೀಶ್ ಜಾರಕಿಹೊಳಿ ಫೌಂಡೇಶನ್‌ನ ಮಾನವ ಬಂಧುತ್ವ ವೇದಿಕೆಯ ರಾಜ್ಯ ಸಂಚಾಲಕರಾಗಿ ನಾಡಿಗೆ ಚಿರಪರಿಚಿತರಾಗಿದ್ದಾರೆ. ಚಿತ್ರದುರ್ಗದ ಸ್ನೇಹಿತರೊಡನೆ ಕೂಡಿ ಬಾಬಾಸಾಹೇಬರ ವೈಚಾರಿಕ ಚಿಂತನೆ ಹಾಗೂ ಬುದ್ಧ ಗುರುವಿನ ಕರುಣೆ ಮೈತ್ರಿ ಸಂದೇಶಗಳನ್ನು ಜನಸಾಮಾನ್ಯರಲ್ಲಿ ಬಿತ್ತುವ ಇರಾದೆಯಿಂದ ಅಂಬೇಡ್ಕರ್ ವಿಚಾರ ವೇದಿಕೆಯನ್ನು ಹುಟ್ಟು ಹಾಕಿದ್ದೆವು. ಒಂದೆರೆಡು ಕಾರ್ಯಕ್ರಮಗಳನ್ನು ನಿರ್ವಹಿಸಿದ ನಂತರ, ಅಂಬೇಡ್ಕರ್ ರಚಿಸಿದ ಬುದ್ಧ ಮತ್ತು ಆತನ ಧಮ್ಮ ಕೃತಿ ಆಧಾರಿತ 'ಬುದ್ಧನ ಬೆಳಕು' ನಾಟಕ ತಂಡವನ್ನು ಕಟ್ಟಿಕೊಂಡು ರಾಜ್ಯದೆಲ್ಲೆಡೆ ಪ್ರದರ್ಶನ ಕಾಣುತ್ತಿರುವುದು ತಿಳಿದು ನಾಟಕ ನಿರ್ದೇಶಕರ ಮೂಲಕ ಸಂಪರ್ಕಿಸಲಾಯಿತು. ತ.ರಾ.ಸು. ರಂಗಮಂದಿರ, ಚಿತ್ರದುರ್ಗದಲ್ಲಿ ಎಲ್ಲವೂ ಸಿದ್ಧತೆಗೊಳ್ಳುವ ಒಂದು ದಿನದ ಪೂರ್ವದಲ್ಲಿ ಎ.ಬಿ.ಆರ್. ಅವರು ಮೊದಲ ಬಾರಿಗೆ ಫೋನ್ ಮಾಡಿ ನಾಟಕ ಪ್ರದರ್ಶನದ ಬಗ್ಗೆ ಅನುಮಾನ ವ್ಯಕ್ತಪಡಿಸಿದರು. ಮಧ್ಯೆ ರಾತ್ರಿಯವರೆಗೆ ನಡೆದ ಈ ಪ್ರಸಂಗ ಎ.ಬಿ.ಆರ್. ಅವರನ್ನು ಅರ್ಥಮಾಡಿಕೊಳ್ಳಲು ಸಾಧ್ಯವಾಯಿತು. ವಿಚಾರ ವೇದಿಕೆ ಪರವಾದ ಮನವಿಯ ಮೇರೆಗೆ ಎ.ಬಿ.ಆರ್.ಅವರು ಹೊಡೆದು ಹೋಗುತ್ತಿದ್ದ ನಾಟಕ ತಂಡವನ್ನು ಮಧ್ಯೆ ರಾತ್ರಿಯಲ್ಲಿಯೇ ಒಪ್ಪಿಸಿದರು.



ಡಾ.ಎಂ.ವೇದಾಂತ
ಏಳಂಜಿ

ಬುದ್ಧನ ಬೆಳಕು ನಾಟಕದಲ್ಲಿ ಅಂಬೇಡ್ಕರ್ ಪಾತ್ರ ನಿರ್ವಹಿಸುತ್ತಿದ್ದ ಎ.ಬಿ.ಆರ್. ಅವರಿಗೆ ಅಂಬೇಡ್ಕರ್ ಅವರ ಪ್ರಬುದ್ಧ ನಡೆಯನ್ನು ಲೀಲಾಜಾಲವಾಗಿ ನಿರ್ವಹಿಸಿದ್ದರು. ಅಂಬೇಡ್ಕರ್ ಪಾತ್ರ ಬಂದಾಗಲೆಲ್ಲ ಇಡೀ ಸನ್ನಿವೇಶವನ್ನೇ ತನ್ನ ವಶಮಾಡಿಕೊಳ್ಳುತ್ತಾ ತಮ್ಮ ಸ್ಪಷ್ಟವಾದ ಧ್ವನಿಯಿಂದ ಹೊರಬರುತ್ತಿದ್ದ ಸಂಭಾಷಣೆಗಳು ಅಂಬೇಡ್ಕರ್ ಅವರನ್ನೇ ನೆನಪು ಮಾಡುತ್ತಿದ್ದವು. ಅವರ ಎತ್ತರ. ದೇಹ, ಆ ಗಾಂಭೀರ್ಯದಿಂದಾಗಿ ಸ್ವತಃ ಅಂಬೇಡ್ಕರ್ ಅವರನ್ನು ಆರಾಧಿಸುವ ವ್ಯಕ್ತಿತ್ವವೊಂದು ಅಂಬೇಡ್ಕರ್ ಅವರ ಪಾತ್ರವಾಗುವ ಸಂದರ್ಭವನ್ನು ಬಳಸಿಕೊಳ್ಳಲಾಗುತ್ತದೆ ಎಂಬುದಕ್ಕೆ ಎ.ಬಿ.ಆರ್. ಅವರು ನಿದರ್ಶನದಂತೆ ಕಂಡುಬಂದರು. ರಂಗಮಂಟಪಕ್ಕೆ ಬಂದ ಪ್ರತಿಭಾರಿಯೂ ಪ್ರೇಕ್ಷಕರಿಂದ ಚಪ್ಪಾಳೆ ಗಿಟ್ಟಿಸಿಕೊಳ್ಳುತ್ತಿದ್ದರು. ಅನೇಕ ವರ್ಷಗಳ ಕಾಲ ಉಪನ್ಯಾಸಕರಾಗಿ, ಸಮಾಜ ಸೇವಕರಾಗಿ ಗುರುತಿಸಿಕೊಂಡ ಎ.ಬಿ.ಆರ್. ಅವರಿಗೆ ಇವುಗಳು ಹೊಸದಲ್ಲಾದಾದರೂ ನಾಟಕ ನೋಡುಗರಿಗೆ ಸೋಜಿಗವಾಗಿ ಕಂಡರು. ಅವರ ಸ್ಪಷ್ಟ ಮಾತು, ಸಣ್ಣವರನ್ನು ತಮ್ಮದೇ ವಯಸ್ಸಿನ ಸ್ನೇಹಿತರಂತೆ ಕಾಣುವ ಬುದ್ಧನ ಮೈತ್ರಿ ಕರುಣಾ ತತ್ವದಿಂದಾಗಿ ಅವರ ನೇರ ಶಿಷ್ಯನಲ್ಲದಿದ್ದರೂ ಗುರುವಿನ ಭಾವನೆ ಬೆಳೆಸಿದರು. ನಾಟಕ ಪ್ರದರ್ಶನ ನಂತರ ಅವರಿಗೆ ಅಭಿನಂದಿಸುವಲ್ಲಿ ನಮ್ಮ ತಂಡ ಮುಂದಾದರೆ ನಮ್ಮನ್ನೇ ಅಭಿನಂದಿಸಿದ ಅವರ ನಡೆ ಅವರೊಂದಿಗೆ ಇಲ್ಲಿಯವರೆಗಿನ ಸಖ್ಯಕ್ಕೆ ಕಾರಣವಾಯಿತು.

**ಪ್ರೊ.ಎ.ಬಿ.ರಾಮಚಂದ್ರಪ್ಪ ಅವರು ಸಾಹಿತ್ಯ, ನಾಡು ನುಡಿಗಳನ್ನು ಬೆಳೆಸುವಲ್ಲಿ ತುಂಬಾ ದೊಡ್ಡ ಕನಸುಗಳನ್ನು ಹೊಂದಿದ್ದಾರೆ. ಒಂದು ಕನಸು ಬರಿದಾಗುವ ವೇಳೆಗಾಗಲೇ ಮತ್ತೊಂದು ಕನಸಿನಿಂದ ನನಸಾಗಿಸುವ ಪ್ರಯತ್ನಯನ್ನು ನಿರಂತರವಾಗಿ ಮಾಡುತ್ತಲೇ ಇರುತ್ತಾರೆ. ಈ ನಡುವೆ ಹೊಳೆಗೆ ಹೊಸ ನೀರನ್ನು ಆಯಿಸುವ ನಮ್ಮಂತಹ ಕಿರಿಯರನ್ನು ಆ ದಾರಿಗೆ ಸೇರಿಸಿಕೊಳ್ಳುವ ಅವರ ಗುಣ ಇತರರಿಗೂ ಮಾದರಿಯಾಗಿದೆ.**

ದೊಡ್ಡವರು ಸಣ್ಣವರನ್ನು ಅಷ್ಟು ನೆನಪಿಸಿಕೊಳ್ಳಲಾರರು ಎಂಬ ಮಾತನ್ನು ಅಪವಾದವಾಗಿಸಿದ ಎ.ಬಿ.ಆರ್. ಮೇಷ್ಟ್ರು ಸ್ವತಃ ಅವರೇ ಹತ್ತಕ್ಕೂ ಹೆಚ್ಚು ಭಾರಿ ಪೋನ್ ಕರೆ ಮಾಡಿ ವಿಚಾರಿಸ ತೊಡಗಿದರು. ನನ್ನ ಪೂರ್ವಪರಗಳನ್ನು ತಿಳಿಯುತ್ತಲೇ ನನ್ನ ಓದು ಬರಹಗಳಿಗೆ ಗೌರವ ಭಾವನೆ ಹೊಂದಿದ್ದರು. ಪ್ರೇರಕಶಕ್ತಿಯಂತೆ ಭಾಸವಾಗುವ ಅವರ ಮಾತುಗಳು ಅವರಿಗೆ ಹೆಚ್ಚು ಆಪ್ತವಾಗಲಿಕ್ಕೆ ಸಾಧ್ಯವಾಯಿತು. ಇದೀಗ ಅಕಾಡಮಿಯ ಸದಸ್ಯರೂ ಆಗಿರುವ ಅವರು ನಾಡು, ನುಡಿ, ಸಾಹಿತ್ಯಕ್ಕೆ ಅನೇಕ ಕೊಡುಗೆಗಳನ್ನು ನೀಡಿದ್ದಾರೆ. ಅಲ್ಲದೇ ದಲಿತ ಸಮುದಾಯಕ್ಕೆ ಅಂಬೇಡ್ಕರ್, ಬುದ್ಧ ತತ್ವಗಳನ್ನು ಸಾರಲು ಶ್ರಮಿಸುತ್ತಿದ್ದಾರೆ. ಚಿತ್ರದುರ್ಗ, ದಾವಣಗೆರೆ ಜಿಲ್ಲೆಗಳಿಗೆಸಂಬಂಧಿಸಿದಂತೆ ಅನೇಕ ಕಾರ್ಯಕ್ರಮಗಳಿಗೆ ಮಾನವ ಬಂಧುತ್ವ ವೇದಿಕೆಯ ಮೂಲಕ ಸ್ಪಂದಿಸುವ ಅವರ ಗುಣವನ್ನು ಕಾಣುವ ನಾವುಗಳಿಗೆ, ರಾಜ್ಯದ ಇತರೆ ಜಿಲ್ಲೆಯ ಅನೇಕ ಸಂಘಟಕರಿಗೂ ಅಷ್ಟೇ ಸೌಮ್ಯವಾಗಿ ಸಹಾಯಹಸ್ತ ಚಾಚುವ ಆಶಾಕಿರಣದಂತಿದ್ದಾರೆ. ಕಾರ್ಯಕ್ರಮ ರೂಪಿಸುವುದು, ಅದಕ್ಕಾಗಿ ಬದ್ಧತೆ ಇರುವ ವ್ಯಕ್ತಿಗಳನ್ನು ಗುರುತಿಸುತ್ತಲೇ ತಮ್ಮ ಬಿಡುವಿನ ವೇಳೆಯಲ್ಲಿ ಮಾತಾನಾಡಿಸುವ ಅವರ ವ್ಯಕ್ತಿತ್ವ ಅಪರೂಪದ್ದಾಗಿದೆ.

ದೇಶದ ಪ್ರಗತಿಪರ, ವೈಚಾರಿಕ ಮನೋಭಾವದ ವ್ಯಕ್ತಿಗಳ ಬಗ್ಗೆ ಯೋಜನೆಯನ್ನು ರೂಪಿಸುತ್ತಿದ್ದೇವೆ. ತಮ್ಮಿಂದ ಪೆರಿಯಾರ್ ರಾಮಸ್ವಾಮಿ ನಾಯ್ಕರ್ ಅವರ ಬಗ್ಗೆ ಐವತ್ತು ಪುಟದ ಪುಸ್ತಕ ಬರೆಯುವಂತೆ ತಿಳಿಸಿದರು. ಆ ಪುಸ್ತಕಕ್ಕೆ ಯು.ಜಿ.ಸಿ. ಮಾನದಂಡವಾದ ಐ.ಎಸ್.ಬಿ.ಎನ್. ನಂಬರ್ ಇರುವುದಿಲ್ಲ ಎಂದಾಗ ಲಾಭವಲ್ಲದ ಅನ್ ಅಕಾಡಮಿಕ್ ಕೆಲಸದ ಬಗ್ಗೆ ಬರೆದುಕೊಡುವುದು ಬೇಡವೆನಿಸಿತು. ಬೇರೆ ಕೆಲಸಗಳ ನೆಪ ಹೇಳಿ ಜಾರಿಕೊಳ್ಳಲು ಪ್ರಯತ್ನಿಸಿದೆ. ಅವರು ನಾಡಿನ ಸುಮಾರು 25–30 ಪ್ರಖ್ಯಾತ ವೈಚಾರಿಕ ಚಿಂತನೆಗಳ ಬಗ್ಗೆ 50 ಪುಟಗಳ ಕೃತಿಗಳನ್ನು ರಚಿಸಿ, ಅಚ್ಚುಕಟ್ಟಾಗಿ ಪ್ರಕಟಿಸುತ್ತೇವೆ. ಆ ಕೃತಿಗಳು ಮಳಿಗೆಗಳಿಗೆ ಮಾರಾಟವಾಗುವುದಿಲ್ಲ. ಕೊಳ್ಳುವುದಕ್ಕೂ ಅವಕಾಶವಿಲ್ಲ. ಲಾಭದ ಉದ್ದೇಶಕ್ಕಾಗಿ ಕೃತಿಗಳನ್ನು ರಚಿಸುತ್ತಿಲ್ಲ. ಅಂಬೇಡ್ಕರ್, ಗಾಂಧಿ, ವಿವೇಕಾನಂದ, ಪೆರಿಯಾರ್, ನಾರಾಯಣ ಗುರು, ರಾಜಕುಮಾರ್ ಹೀಗೆ ಹತ್ತಾರು ಹೆಸರುಗಳನ್ನು ಪ್ರಸ್ತಾಪಿಸುತ್ತಲೇ ಇವರ ಜೀವನೋದ್ದೇಶಗಳು ಮತ್ತೊಬ್ಬರಿಗೆ ಪರಿಚಯವಾಗಬೇಕೆನ್ನುವ ಸದುದ್ದೇಶದಿಂದ ಕೃತಿಗಳನ್ನು ಬರೆಸುತ್ತಿರುವುದಾಗಿ ಹಾಗೂ ಈ ಕೃತಿಗಳು ನಾಡಿನ ಜನತೆಗೆ ಉಚಿತವಾಗಿ ಹಂಚುವ ಉದ್ದೇಶವನ್ನು ಮಾನವ ಬಂಧುತ್ವ ವೇದಿಕೆ ಹೊಂದಿದೆ ಎಂದು ತಿಳಿಸಿದರು. ಈ ಕಾರ್ಯಕ್ಕೆ ನಿಮ್ಮಂತ ಯುವಬರಹಗಾರರು ಕೈ ಜೋಡಿಸಬೇಕೆಂದರು. ಪ್ರಖರ ವೈಚಾರಿಕ ಚಿಂತಕ ಪೆರಿಯಾರ್ ಬಗ್ಗೆ ಬರೆಯಲು ತಿಳಿಸಿದರು. ಲಾಭದ ನಿರೀಕ್ಷೆಗಳ ಸಂಘಟಕರ ನಡುವೆ ಇಂತಹ ಅಪರೂಪ ಕೆಲಸದ ಜವಾಬ್ದಾರಿಯನ್ನು ಕಂಡು ಅಚ್ಚರಿ ಅನಿಸಿತು. ಪ್ರಕಟಿಸಿದರೇ ಮೂರು–ನಾಲ್ಕು ಪುಸ್ತಕಗಳಾಗುವಷ್ಟು ಬರಹ ಮಾಡಿದ್ದರೂ ಒಂದೂ ಪುಸ್ತಕ ಪ್ರಕಟಿಸದ ನಾನು ಎ.ಬಿ.ಆರ್. ಅವರ ಉದ್ದೇಶಗಳನ್ನು ಕೇಳಿ ತಕ್ಷಣಕ್ಕೆ ನನ್ನ ಮೊದಲ ಕೃತಿ ಜನರಿಗೆ ಉಚಿತ ಹಂಚುವ ಕೃತಿಯಾಗಲಿ ಎಂದು ಒಪ್ಪಿಕೊಂಡೆ.



ಎ.ಬಿ.ಆರ್. ಅವರು ನನಗೆ ಹೊಸಬರಲ್ಲ, ಅವರಿಗೆ ನಾನು ಹೊಸಬ. ಅವರು ಅಷ್ಟು ಕೆಲಸದ ನಡುವೆ ನನ್ನನ್ನು ನೆನಸಿಕೊಂಡು ಹೇಗೆ ಪೋನ್ ಮಾಡುತ್ತಾರೋ ತಿಳಿಯದು. ಅವರ ಕರೆ ಬಂದಾಗಲೆಲ್ಲ ನನಗೂ ಅಚ್ಚರಿ ಎನಿಸುತ್ತದೆ. ಚಿತ್ರದುರ್ಗ ಜಿಲ್ಲೆಯ ಸರ್ಕಾರಕ್ಕೆ ಸಂಬಂಧಿಸಿದಂತೆ ಜಿಲ್ಲೆಗೆ ಸಂಬಂಧಿಸಿದ ಸಮಿತಿಯೊಂದಕ್ಕೆ (ನನಗೂ ಅಸ್ಪಷ್ಟ) ಸೇರಿದಂತೆ ಸರ್ಕಾರದ ಮಟ್ಟಕ್ಕೆ ನಿಮ್ಮ ಹೆಸರನ್ನು ಸೂಚಿಸಿರುವೆ. ಯಾವುದೇ ರಾಜಕೀಯ ಪ್ರತಿನಿಧಿಗಳ ಒತ್ತಡವಿಲ್ಲದಿದ್ದರೇ ನೀವು ಸದಸ್ಯರಾಗಿರುತ್ತೀರಿ, ಐದು ಜನರ ತಂಡದಲ್ಲಿ ನೀವು ಒಬ್ಬರು. ಹೊಸ ಪ್ರತಿಭೆಗಳು ಮುಂದೆ ಬರಬೇಕೆಂದು, ನಿಮಗೆ ಉತ್ತಮ ವೇದಿಕೆಯಾಗುವುದೆಂದು, ಜಿಲ್ಲೆಯ ಕೆಲಸಕ್ಕೆ ಕೈಜೋಡಿಸುವಿರೆಂಬ ನಂಬಿಕೆಯಿಂದ ನಿಮ್ಮ ಹೆಸರು ಮುಖ್ಯಮಂತ್ರಿಯವರ ಬಳಿ ಕಳಿಸಿರುವೆ. ಅವರ ಸಹಿಗಾಗಿ ಕಾಯುತ್ತಿದ್ದೇವೆ ಎಂದು ಎಂದು ಕರೆ ಮಾಡಿ ತಿಳಿಸಿದರು.

ಈ ಸಮಿತಿಯ ಸದಸ್ಯತ್ವ ಸಿಗಲೇಬೇಕೆಂದಿಲ್ಲ. ಅವರ ಹಾರೈಕೆ, ಪ್ರೋತ್ಸಹಕ್ಕಿಂತಲೂ ಪದವಿಗಳು ದೊಡ್ಡವಲ್ಲ. ಅವರ ನಿಸ್ವಾರ್ಥದ ಆಲೋಚನೆಗಳಿಗೆ ಕೈಜೋಡಿಸುವುದು ನನ್ನ ಆದ್ಯ ಕರ್ತವ್ಯ. ತುಂಬಾ ಕಡಿಮೆ ಸಮಯದಲ್ಲಿ ನನ್ನ ಮೇಲೆ ಅಪಾರ ನಂಬಿಕೆ, ಪ್ರೀತಿ, ವಿಶ್ವಾಸವಿಟ್ಟ ಹಿರಿಯರಾದ ಸಹೃದಯಿ ಎ.ಬಿ.ಆರ್. ಸರ್ ಅವರಿಗೆ ಧನ್ಯವಾದಗಳು. ಅವರು ಸಾಹಿತ್ಯ, ನಾಡು ನುಡಿಗಳನ್ನು ಬೆಳೆಸುವಲ್ಲಿ ತುಂಬಾ ದೊಡ್ಡ ಕನಸುಗಳನ್ನು ಹೊಂದಿದ್ದಾರೆ. ಒಂದು ಕನಸು ಬರಿದಾಗುವ ವೇಳೆಗಾಗಲೇ ಮತ್ತೊಂದು ಕನಸಿನಿಂದ ನನಸಾಗಿಸುವ ಪ್ರಯತ್ನಯನ್ನು ನಿರಂತರವಾಗಿ ಮಾಡುತ್ತಲೇ ಇರುತ್ತಾರೆ. ಈ ನಡುವೆ ಹೊಳೆಗೆ ಹೊಸ ನೀರನ್ನು ಆಯಿಸುವ ನಮ್ಮಂತಹ ಕಿರಿಯರನ್ನು ಆ ದಾರಿಗೆ ಸೇರಿಸಿಕೊಳ್ಳುವ ಅವರ ಗುಣ ಇತರರಿಗೂ ಮಾದರಿಯಾಗಿದೆ. ಜಗಳೂರಿನಲ್ಲಿ ನಡೆಯುವ ದಾವಣಗೆರೆ ಜಿಲ್ಲಾ 14ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ ಲಭಿಸಿದ ಈ ಸಂದರ್ಭದಲ್ಲಿ ಅವರ ಬಗ್ಗೆ ಮೌಲ್ವಿಕ ಮಾತುಗಳನ್ನು ಹಂಚಿಕೊಳ್ಳುವುದು ಖುಷಿ ತಂದಿದೆ. ಅವರಿಗೆ ಸದಾ ಒಳಿತಾಗಲಿ ಎಂದು ಆಶಿಸುವೆ.





# ಅವ್ವ ನೆಚ್ಚಿನ ಮಗ, ಬರಗೂರರ ಮೆಚ್ಚಿನ ಶಿಷ್ಯ

ಡಾ.ಎ.ಬಿ.ರಾಮಚಂದ್ರಪ್ಪ ಅವರು ರೈತಾಪಿ ಕುಟಂಬದಲ್ಲಿ ಜನಿಸಿದರು. ಬಡತನದ ನಡುವೆ ಉನ್ನತ ವ್ಯಾಸಂಗ ಪಡೆದು ಹರಿಹರದ ಪ್ರತಿಷ್ಠಿತ ಕಾಲೇಜಿನಲ್ಲಿ ಕನ್ನಡ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿದ್ದಾರೆ. ಇವರದು ಸಾತ್ವಿಕ ಮನೋಭಾವದ ಮೃದು ವ್ಯಕ್ತಿತ್ವ. ಅವ್ವನಿಗೆ ನೆಚ್ಚಿನ ಮಗನಾಗಿ ಅವರ ಊರಿಗೆ ಕೀರ್ತಿವಂತರಾಗಿದ್ದಾರೆ. ಕನ್ನಡ ಸಾಹಿತ್ಯ ಲೋಕದ ಮೇರು ವ್ಯಕ್ತಿತ್ವ, ಬಂಡಾಯ ಸಾಹಿತ್ಯದ ರೂವಾರಿಯಾದ ಪ್ರೊ. ಬರಗೂರು ರಾಮಚಂದ್ರಪ್ಪ ಅವರ ನೆಚ್ಚಿನ ಶಿಷ್ಯರಾಗಿಯೂ ಇದ್ದಾರೆ. ಪ್ರೊ.ಬರಗೂರು ರಾಮಚಂದ್ರಪ್ಪ ಅವರ ಸಾಹಿತ್ಯ ಮತ್ತು ವ್ಯಕ್ತಿತ್ವವೂ ಡಾ. ಎ.ಬಿ ರಾಮಚಂದ್ರಪ್ಪ ಅವರಲ್ಲಿ ಗಾಢವಾದ ಪರಿಣಾಮ ಬೀರಿದೆ.



ಡಾ.ಬಂಡಳ್ಳಿ ಕುಮಾರ

ಇವರು ವೈಚಾರಿಕ. ಪ್ರಗತಿಪರ ಸಂಘಟನೆಗಳಲ್ಲಿ ತಮ್ಮನ್ನು ತಾವೆ ತೊಡಗಿಸಿಕೊಂಡವರು. ತಂದೆ ರೈತರಾಗಿದ್ದರೂ ಕೂಡ ಮಗನನ್ನು ಒಳ್ಳೆಯ ವಿದ್ಯಾವಂತ, ಪ್ರಾಧ್ಯಾಪಕರಾಗಿ ಸಮಾಜದಲ್ಲಿ ಒಳ್ಳೆಯ ವ್ಯಕ್ತಿಯಾಗಿ ರೂಪಿಸಿದ್ದಾರೆ. ಪ್ರಾಥಮಿಕ ಶಿಕ್ಷಣವನ್ನು ಸ್ವಗ್ರಾಮದಲ್ಲಿ ಓದಿ ಪ್ರೌಢ ಶಿಕ್ಷಣವನ್ನು ಚನ್ನಗಿರಿಯಲ್ಲಿ ಮುಗಿಸಿದರು.
ಪದವಿ ಮತ್ತು ಸ್ನಾತಕೋತ್ತರ ಪದವಿಯನ್ನು ಪ್ರತಿಷ್ಠಿತ ಮೈಸೂರು ವಿಶ್ವವಿದ್ಯಾನಿಲಯದಿಂದ ಪಡೆದು, ಕುವೆಂಪು ವಿಶ್ವವಿದ್ಯಾಲಯದಲ್ಲಿ ಡಾಕ್ಟರೇಟ್ ಪದವಿಯನ್ನು ಪಡೆದಿದ್ದಾರೆ.

ಎಬಿಆರ್ ಅವರಿಗೆ ಚಿಕ್ಕ ವಯಸ್ಸಿನಿಂದಲೂ ಅಂಬೇಡ್ಕರ್ ಮತ್ತು ವಾಲ್ಮೀಕಿ ಅವರಂತಹ ದಾರ್ಶನಿಕರು ಪ್ರಭಾವ ಬೀರಿದ್ದಾರೆ. ದಲಿತ ಸಂಘರ್ಷ ಸಮಿತಿಯಲ್ಲಿ ಸುಮಾರು 40 ವರ್ಷಗಳಿಂದಲೂ ಸಕ್ರಿಯವಾಗಿದ್ದಾರೆ. ಇಡೀ ನಾಡಿನಾದ್ಯಂತ ಚಾಲ್ತಿಯಲ್ಲಿರುವ ಬಂಡಾಯ ಸಾಹಿತ್ಯ ಸಂಘಟನೆಯಲ್ಲಿ ಸಂಚಲಕನಾಗಿ ಕೆಲಸ ಮಾಡುತ್ತಿದ್ದಾರೆ. ಇವರು ಕನ್ನಡ ಸಾಹಿತ್ಯ ಲೋಕಕ್ಕೆ 20ಕ್ಕೂ ಹೆಚ್ಚು ಕೃತಿಗಳ ಕೃಷಿ ಮಾಡಿದ್ದಾರೆ. ಅಂಬೇಡ್ಕರ್ ಮತ್ತು ಹೋರಾಟ, ದೇವರ ದಾಸಿಮಯ್ಯ, ಭಾರತೀಯ ಸಾಮಾಜಿಕ ಚಿಂತಕರ ಮಹಾಬೆಳಗು ಇನ್ನೂ ಹಲವಾರು ಕೃತಿಗಳನ್ನು ರಚಿಸಿದ್ದಾರೆ. ವೈಚಾರಿಕ, ಪ್ರಗತಿಪರ ಚಿಂತನೆಗಳನ್ನು ಒಳಗೊಂಡಿರುವ ಬಹು ಮೌಲಿಕ ಕೃತಿಯಾಗಿವೆ. ಕನ್ನಡ ಪ್ರಾಧ್ಯಾಪಕರಾಗಿ ನಿವೃತ್ತಿಯ ನಂತರ ಮನೆಯಲ್ಲಿ ಇರಬಹುದಿತ್ತು. ಇವರು ಆಯ್ಕೆ ಮಾಡಿಗೊಂಡಿದ್ದು ವೈಚಾರಿಕ ಚಳುವಳಿಯ ಜವಾಬ್ದಾರಿಯನ್ನು. ನಾಡಿನಾದ್ಯಂತ ಸದ್ದಿಲ್ಲದೆ ತಳಮಟ್ಟದಲ್ಲಿ ಕೆಲಸ ಮಾಡುತ್ತಿರುವ ಮಾನವ ಬಂಧುತ್ವ ವೇದಿಕೆಯ ರಾಜ್ಯ ಸಂಚಾಲಕರಾಗಿ ನೇಮಕಗೊಂಡಿದ್ದಾರೆ. ಇವರು ಇಂದಿಗೂ ಕೂಡ ಇಡೀ ರಾಜ್ಯದ ಎಲ್ಲಾ ಜಿಲ್ಲೆ, ತಾಲ್ಲೂಕುಗಳಿಗೆ ಖುದ್ದು ಭೇಟಿ ಮಾಡಿ ಬಂಧುತ್ವದ ಬೀಜವನ್ನು ಯುವಜನರಲ್ಲಿ ಬಿತ್ತುತ್ತಿದ್ದಾರೆ. ಸಮಸಮಾಜದ ಆಶಯವನ್ನು ಮುಂದುವರಿಸಿಕೊಂಡು ಹೋಗಲು ನಮ್ಮಂತ ಅಸಂಖ್ಯಾತ ಯುವಕರಿಗೆ ಸದಾ ಪ್ರೋತ್ಸಾಹವನ್ನು ನೀಡುತ್ತಾ ಬಂದಿದ್ದಾರೆ.

ಯುವಕರ ಪಡೆಯನ್ನು ಕಟ್ಟಿರುವ ಡಾ. ಎ. ಬಿ ರಾಮಚಂದ್ರಪ್ಪನವರು ವೈಜ್ಞಾನಿಕ ಚಿಂತನೆಯ ಬೋಧನೆ ಮಾಡುತ್ತಿದ್ದಾರೆ. ಸಾಮಾಜಿಕ ನ್ಯಾಯಪರವಾದ ಸಂಘಟನೆಗಳಲ್ಲಿ ಕಾರ್ಮಿಕ, ವಿದ್ಯಾರ್ಥಿ, ಅಹಿಂದ ಸಂಘಟನೆಯಲ್ಲಿ ನಿರಂತರ ಸಂಪರ್ಕದಲ್ಲಿದ್ದು ಅವರಿಗೆ ಸಿಗಬೇಕಾಗಿರುವ ನ್ಯಾಯಯುತ ಸೌಲಭ್ಯಗಳನ್ನು ಕೊಡಿಸುವಲ್ಲಿ ಇವರ ಪಾತ್ರವೂ ದೊಡ್ಡದಾಗಿದೆ. ಇವರು ಕನ್ನಡ ನಾಡು–ನುಡಿಯ ಉಳಿವಿಗಾಗಿ ಹೋರಾಟದ ಜೊತೆಯಲ್ಲಿ ಭಾಗವಹಿಸುತ್ತಿದ್ದಾರೆ. ಪ್ರಸ್ತುತ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಸದಸ್ಯರಾಗಿ ನೇಮಕಗೊಂಡಿದ್ದಾರೆ. ಕನ್ನಡ ಉಳಿವಿಗಾಗಿ ಅನೇಕ ಯೋಜನೆಗಳನ್ನು ರೂಪಿಸುವ ಮಹತ್ವಾಕಾಂಕ್ಷೆಯನ್ನು ಹೊಂದಿದ್ದಾರೆ. ಇವರು ಹಂಪಿ ಕನ್ನಡ ವಿಶ್ವವಿದ್ಯಾನಿಲಯದಿಂದ ಮಾರ್ಗದರ್ಶಕರಾಗಿ ಹಲವಾರು ಸಂಶೋಧನ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ಮಾಡಿದ್ದಾರೆ. ರಾಷ್ಟ್ರೀಯ, ರಾಜ್ಯ ಮಟ್ಟದ ವಿಚಾರ ಸಂಕಿರಣದಲ್ಲಿ ಪ್ರಬಂಧ ಮಂಡಿಸಿರುವುದು ಇವರ ವಿದ್ವತ್‌ಗೆ ಕಾರಣೀಭೂತವಾಗಿದೆ. ಮಧ್ಯ ಕರ್ನಾಟಕದಲ್ಲಿರುವ ದಾವಣಗೆರೆಯು ಹಲವು ಐತಿಹಾಸಿಕಗಳಿಗೆ ಸಾಕ್ಷಿಯಾಗಿದೆ. ದಾವಣಗೆರೆ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗುವುದು ಸುಲಭದ ಕೆಲಸವಲ್ಲ. ನಾಡು ನುಡಿ, ಸಾಹಿತ್ಯ, ಸಂಘಟನೆಗಳಲ್ಲಿ ಗುರುತರವಾದ ಕೆಲಸವನ್ನು ಮಾಡಿರುವವರಿಗೆ ಇಂತಹ ದೊಡ್ಡ ಜವಾಬ್ದಾರಿ ದಕ್ಕುತ್ತದೆ. ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಎ.ಬಿ.ರಾಮಚಂದ್ರಪ್ಪರವರು ಆಯ್ಕೆಯಾಗಿರುವುದಕ್ಕೆ ನಮಗೆಲ್ಲಾ ಸಂತೋಷದ ಸಂಗತಿಯಾಗಿದೆ.











ಕರ್ನಾಟಕದಲ್ಲಿ ಶ್ರೀ ಸತೀಶ್ ಜಾರಕಿಹೊಳಿ, ಶ್ರೀ ಬರಗೂರು ರಾಮಚಂದ್ರಪ್ಪನವರು ವೈಚಾರಿಕ ಚಳುವಳಿಗೆ ತಮ್ಮನ್ನು ತಾವು ತೊಡಗಿಸಿಕೊಂಡಿದ್ದಾರೆ. ಅಂತಹ ಮಹನೀಯರ ಜೊತೆ ಎ.ಬಿ ರಾಮಚಂದ್ರಪ್ಪರವರು ಕೆಲಸ ಮಾಡುತ್ತಿರುವುದು ಹೆಮ್ಮೆಯ ವಿಷಯವಾಗಿದೆ. ಇವರು ಸಾಮಾಜಿಕವಾಗಿ, ಶೈಕ್ಷಣಿಕವಾಗಿ ಹಲವರಿಗೆ ಮಾರ್ಗದರ್ಶನ ಮಾಡುತ್ತಿದ್ದಾರೆ. ಮಾನವ ಬಂಧುತ್ವ ವೇದಿಕೆಯಲ್ಲಿ ಹಲವಾರು ಯೋಜನೆಗಳನ್ನು ರೂಕಿಸುವಲ್ಲಿ ಕಾರ್ಯಗತವಾಗಿದ್ದಾರೆ. ಎ.ಬಿ.ರಾಮಚಂದ್ರಪ್ಪನವರು ಈ ನಾಡಿಗೆ ಬಹುಮುಖ ಪ್ರತಿಭೆಯಾಗಿ ಕಾಯಕ ಮಾಡುತ್ತಾ ಯುವಜನರಲ್ಲಿ ಬಂಧುತ್ವವನ್ನು ಕಟ್ಟುತ್ತಿದ್ದಾರೆ. ಇಂದಿನ ಜಗತ್ತಿನಲ್ಲಿ ನಡೆಯುತ್ತಿರುವ ಕೋಮುಸಂಘರ್ಷಕ್ಕೆ ಬಂಧುತ್ವದ ಬೆಳೆಯನ್ನು ತೆಗೆಯಲು ಸಿದ್ಧರಾಗಿರುವ ಡಾ. ಎ.ಬಿ ರಾಮಚಂದ್ರಪ್ಪನವರಿಗೆದಾವಣಗೆರೆ ಜಿಲ್ಲಾ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ಆಯ್ಕೆಯಾಗಿರುವುದು ನಮಗೆಲ್ಲಾ ಸಂತೋಷ ಹಾಗೂ ಗೌರವದ ಕ್ಷಣವಾಗಿದೆ.

## ಎಬಿಆರ್ ಅವರ ಕೃತಿಗಳು ಹಾಗೂ ಪ್ರಶಸ್ತಿ–ಪುರಸ್ಕಾರಗಳು






## ಅರಿವಿನ ತೊರೆ



# ಅಂಬೇಡ್ಕರ್ ವಿಚಾರಧಾರೆ ಹೊತ್ತು ಸಮ ಸಮಾಜದ ವಿಚಾರ ಬಿತ್ತುವ ಕಾಯಕ ಯೋಗಿ

ಸುಮಾರು ಹದಿನೈದು ವರ್ಷಗಳ ಹಿಂದಿನ ಮಾತು ಗೆಳೆಯ ಗಂಗರಾಜ ವನದುರ್ಗ ಕುವೆಂಪು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಕೇಂದ್ರದಲ್ಲಿ ಕೆಲಸ ಮಾಡುತ್ತಿದ್ದರು. ಜೀನ ಸಾಹಿತ್ಯದ ಕುರಿತು ಹಮ್ಮಿಕೊಂಡ ವಿಚಾರ ಸಂಕಿರಣಕ್ಕೆ ನನ್ನನ್ನು ಕರೆದಿದ್ದರು ಹೆಚ್.ದಂಡಪ್ಪ ಅವರು ಕಾರ್ಯಕ್ರಮ ಸಂಘಟಕರಲ್ಲಿ ಒಬ್ಬರಾಗಿದ್ದರು. ಕಾರ್ಯಕ್ರಮದ ಭಾಗವಾಗಿ ಲಕ್ಕಪ್ಪಗೌಡರು ಬರೆದಿದ್ದ ಅಂಬೇಡ್ಕರ್ ಪುಸ್ತಕದ ಕುರಿತು ಮಾತನಾಡಲು ನನ್ನನ್ನು ರಂಗರಾಜ್ ಆಹ್ವಾನಿಸಿದ್ದರು. ದೂರದ ಗುಲ್ಬರ್ಗದಿಂದ ಶಿವಮೊಗ್ಗಕ್ಕೆ ತಲುಪುತ್ತಿದ್ದಂತೆ ರಂಗರಾಜ್ ಮತ್ತವರ ಗೆಳೆಯರು ಬಸ್ ನಿಲ್ದಾಣಕ್ಕೆ ಬಂದು ನನ್ನನ್ನು ಕರೆದುಕೊಂಡು ವಸತಿ ಗೃಹಕ್ಕೆ ಬಿಟ್ಟು ಕಾರ್ಯಕ್ರಮಕ್ಕೆ ನೀವು ರೆಡಿಯಾಗಿ ರಾಮಚಂದ್ರಪ್ಪ ನಾನು ಬರುತ್ತೇವೆ. ತಿಂಡಿ ಮಾಡಿ ಹೋಗೋಣ ಎಂದು ಹೇಳಿ ಬೇರೆ ಬೇರೆ ಅತಿಥಿಗಳನ್ನು ಕರೆಯಲು ಹೋದರು



ಪ್ರೊ.ಎಚ್.ಟಿ.ಪೋತೆ

ಆ ದಿನ ರಾಮಚಂದ್ರಪ್ಪ ನನಗೆ ಪರಿಚಯವಾದರು. ಅಲ್ಲಿಂದ ರಾಮಚಂದ್ರಪ್ಪ ನಾನು ನಿರಂತರ ಸಂಪರ್ಕದಲ್ಲಿದ್ದೇವೆ. ವಚನ ಸಾಹಿತ್ಯ ದಲಿತ ಬಂಡಾಯ ಕ್ಷೇತ್ರದಲ್ಲಿ ಅವರು ಕೆಲಸ ಮಾಡುತ್ತಿದ್ದಾರೆ. ಸತೀಶ್ ಜಾರಕಿಹೊಳಿಯವರು ಸ್ಥಾಪಿಸಿದ ಮಾನವ ಬಂಧುತ್ವ ವೇದಿಕೆಯ ರಾಜ್ಯ ಸಂಚಾಲಕರಾಗಿರುವ ರಾಮಚಂದ್ರಪ್ಪ ಸಂಘಟನೆಗೊಂದು ಜೀವ ತುಂಬಿದ್ದಾರೆ. ಬುದ್ಧ ಬಸವ ಅಂಬೇಡ್ಕರ್ ಆಶಯಗಳ ನೆಲೆಯಲ್ಲಿ ಸಮಾಜಮುಖಿ ಕೆಲಸದಲ್ಲಿ ತೊಡಗಿದ್ದಾರೆ. ಸಮಾಜದಲ್ಲಿ ಬೇರೂರಿರುವ ಮೌಢ್ಯತೆ ಕಂದಾಚಾರ ಅಸ್ಪೃಶ್ಯತೆ ಯಂತಹ ಸಾಮಾಜಿಕ ಪಿಡುಗುಗಳನ್ನು ನಿರ್ಮೂಲನೆ ಮಾಡುವಲ್ಲಿ ಮಹತ್ವದ ಯೋಜನೆಗಳನ್ನು ಹಾಕಿಕೊಂಡು ಶ್ರಮಿಸುತ್ತಿದ್ದಾರೆ.



ರಾಮಚಂದ್ರಪ್ಪ ಉತ್ತಮ ಅಧ್ಯಾಪಕರಾಗಿರುವಂತೆ ಲೇಖಕ ವಿಚಾರವಾದಿಯಾಗಿ ಹಿರಿಯ ತಲೆಮಾರಿನ ಬರಗೂರು ರಾಮಚಂದ್ರಪ್ಪ ಸಿದ್ದಲಿಂಗಯ್ಯ ಚೆನ್ನಣ್ಣ ವಾಲೀಕಾರ ಮುಂತಾದವರ ಒಡನಾಟದಲ್ಲಿ ಬೆಳೆದು ಬಂದಿದ್ದಾರೆ ದಲಿತ ಬಂಡಾಯ ಚಿಂತನೆಯನ್ನು ಕರಗತ ಮಾಡಿಕೊಂಡು ಇವರು ಅಂಬೇಡ್ಕರ್ ವಿಚಾರಧಾರೆಗಳನ್ನು ಹೊತ್ತು ಸಮ ಸಮಾಜದ ವಿಚಾರಗಳನ್ನು ಬಿತ್ತುತ್ತಿದ್ದಾರೆ ಇದರ ಜೊತೆ ವೈಚಾರಿಕ ಪರಂಪರೆಯ ಬುದ್ಧ ಬಸವ ಅಂಬೇಡ್ಕರ್ ಈ ಮುಂತಾದ ಚಿಂತನೆ ಚಳುವಳಿಯನ್ನು ಬೆಳೆಸಿದ ಹೋರಾಟಗಾರರ ಚಿಂತಕರ ಕುರಿತು ಕಿರು ಹೊತ್ತಿಗೆಗಳನ್ನು ಪ್ರಕಟಿಸುವ ಯೋಜನೆಯನ್ನು ಮಾನವ ಬಂಧುತ್ವ ವೇದಿಕೆಯಿಂದ ಮಾಡುತ್ತಿರುವುದು ಸ್ವಾಗತರ್ಹವಾಗಿದೆ. ಇದರ ಜೊತೆಗೆ ಮಾನವ ಬಂಧುತ್ವ ವೇದಿಕೆಯ ಮೂಲಕ ಅಂಬೇಡ್ಕರ್ ಅವರ ವಿಚಾರಗಳನ್ನು ಜನಸಮೂಹಕ್ಕೆ ತಲುಪಿಸಲು ರಂಗಮಾಧ್ಯಮವನ್ನು ಬಳಸುತ್ತಿದ್ದಾರೆ.

ರಾಮಚಂದ್ರಪ್ಪ ಸ್ವತಃ ಅಂಬೇಡ್ಕರ್ ಪಾತ್ರ ಮಾಡುವ ಮೂಲಕ ಅಂಬೇಡ್ಕರ್ ಚಿಂತನೆಗೆ ತಮ್ಮನ್ನು ತಾವು ತೊಡಗಿಸಿಕೊಂಡಿದ್ದಾರೆಂದು ಹೇಳಲು ಹೆಮ್ಮೆಯಾಗುತ್ತದೆ.

ರಾಮಚಂದ್ರಪ್ಪ ಹಸನ್ಮುಖಿ ಚಿಕಿತ್ಸಕ ಸ್ವಭಾವದ ಕಾರಣ ದಿಂದ ಅನೇಕರ ಸ್ನೇಹಗಳಿಸಿದ್ದಾರೆ ನನ್ನ ಬರಹ ಭಾಷಣ ಪ್ರೀತಿಸುವ ರಾಮಚಂದ್ರಪ್ಪ ನಕ್ಕು ನಕ್ಕು ಹೊಟ್ಟೆ ಉಣ್ಣಾಗಿಸಿ ಕೊಂಡಿರುವ ಘಟನೆಯೊಂದು ಹೇಳಬೇಕು. ಲಕ್ಕಪ್ಪಗೌಡರ ಕಾರ್ಯಕ್ರಮಕ್ಕೆ ಹೋಗಿದ್ದೆ ಎಂದು ಹೇಳಿದೆನಲ್ಲ ಅದಕ್ಕೆ ಸಂಬಂಧಿಸಿದ ವಿಚಾರ ನಾನು ರೂಮಿನಲ್ಲಿ ರೆಡಿಯಾಗುವ ಹೊತ್ತಿಗೆ ಗೆಳೆಯ ರಂಗರಾಜ ರಾಮಚಂದ್ರಪ್ಪ ಬಂದರು. ಬ್ರದರ್ ಬಟ್ಟೆ ಹಾಕಿಕೊಳ್ಳಿ ರೆಡಿಯಾಗಿ ಹೋಗೋಣ ಎಂದು ರಂಗರಾಜ ಒತ್ತಾಯ ಮಾಡಿದ. ಆಯ್ತು ಬ್ರದರ್ ಎಂದು ನಾನು ಮೊದಲು ಬೂಟ್ ಹಾಕೊಂಡು ನಂತರ ಪ್ಯಾಂಟ್ ಹಾಕ್ಕೊಂಡೆ ರಾಮಚಂದ್ರಪ್ಪ ಇದೇನದು ಎಲ್ಲರೂ ಪ್ಯಾಂಟ್ ಹಾಕೊಂಡ್ ಮೇಲೆ ಬೂಟ್ ಹಾಕೋದಲ್ವಾ ಎಂದು ನನ್ನ ನೋಡಿ ಕೇಳಿದರು. ಹೌದಲ್ಲ ಬ್ರದರ್ಸ್ ನೀವು ಹೀಗೆ ಎಂದು ರಂಗರಾಜ್ ಕೇಳಿದರು. ನೋಡಿ ಪ್ಯಾಂಟ್ ಹಾಕೊಂಡು ಬೂಟ್ ಹಾಕೋಬೇಕಾದ್ರೆ ಕುರ್ಚಿ ಮೇಲೆ ಕೂಡಬೇಕು. ಕುರ್ಚಿ ಮೇಲೆ ಕೂತ್ರೆ ಪ್ಯಾಂಟಿನ ಇಸ್ತ್ರಿ ಹಾಳಾಗುತ್ತದೆ. ಅದಕ್ಕೆ ಪ್ಯಾಂಟಿನ ಗರಿಗರಿ ಮಡಿಕೆ ಹಾಳಾಗಬಾರದೆಂದು ಬೂಟ್ ಹಾಕೊಂಡು ಮೇಲೆ ಸಲೀಸಾಗಿ ಪ್ಯಾಂಟಲ್ಲಿ ಕಾಲ ಸೇರಿಸಿದರೆ ಒಳ್ಳೆಯದೆಂದು ಹೇಳಿದಾಗ ಅಲ್ಲಿದ್ದ ರಾಮಚಂದ್ರಪ್ಪ ಮತ್ತವರ ಸ್ನೇಹಿತರು ನಕ್ಕಿದ್ದೆ ನಕ್ಕಿದ್ದು, ಶಿವಮೊಗ್ಗ ಎಂದಾಗ ಇದು ನನ್ನ ಮನದಲ್ಲಿ ಸುಳಿದು ಹೋಗುತ್ತದೆ. ಇದು ನನ್ನ ರಾಮಚಂದ್ರಪ್ಪನ ನಡುವೆ ಸ್ನೇಹದ ನಡುವಿನ ಕೊಂಡಿಯಾಗಿದೆ.

ರಾಮಚಂದ್ರಪ್ಪ ಈಗ ನಿವೃತ್ತಿಯಾಗಿದ್ದಾನೆ. ಮಾನವ ಬಂಧುತ್ವ ವೇದಿಕೆಯ ನೇತೃತ್ವ ವಹಿಸಿಕೊಂಡಿದ್ದಾರೆ ಈಗ ಜಿಲ್ಲಾ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷ ಗೌರವ ಕೂಡ ಸಲ್ಲುತ್ತಿರುವುದು ಹೆಮ್ಮೆಯ ಸಂಗತಿ ಎಂದೇ ನನ್ನ ಭಾವನೆಯಾಗಿದೆ. ಅವರು ಈ ನಿಟ್ಟಿನಲ್ಲಿ ಸಮಾಜಮುಖಿ ಕೆಲಸ ಮಾಡಲಿ ಅವರ ಯಶಸ್ಸಿನಲ್ಲಿ ನಾವೆಲ್ಲ ಇದ್ದೇವೆ. ಅವರಿಗೆ ಶುಭ ಹಾರೈಕೆಗಳು.



ದಾವಣಗೆರೆ ಜಿಲ್ಲಾ 14ನೇ ಕನ್ನಡ ಸಾಹಿತ್ಯ
ಸಮ್ಮೇಳನದ ವಿಶೇಷ ಸಂಚಿಕೆ



ಅರಿವಿನ ತೊರೆ

# ಜೀವನ ಪ್ರೀತಿಯ ಮಾನವ ಬಂಧು



**ರಾಮಚಂದ್ರಪ್ಪನವರು ಜನಪರ ಹೋರಾಟಗಳಲ್ಲಿ, ಸಮಾನತೆಯ ಪರವಾದ ಚಳುವಳಿಗಳಲ್ಲಿ, ಬಂಡಾಯ ಸಂಘಟನೆಯಲ್ಲಿ, ನಿರಂತರವಾಗಿ ತಮ್ಮನ್ನು ಕ್ರಿಯಾಶೀಲವಾಗಿ ತೊಡಗಿಸಿಕೊಂಡು ಸಂಘಟನೆಗಳ ಸಂಚಾಲಕರಾಗಿಯೂ ಸಾಮಾಜಿಕ ಜಾಗೃತಿಯ ಜವಾಬ್ದಾರಿಯನ್ನು ಯಶಸ್ವಿಯಾಗಿ ನಿಭಾಯಿಸಿದವರು..**

ಬದುಕು ಯಾಂತ್ರಿಕಗೊಂಡು ಸಂಕೀರ್ಣಗೊಳ್ಳುತ್ತಿದೆ ಎನ್ನುವ ಆಧುನಿಕತೆಯ ಹೊತ್ತಿನಲ್ಲಿ ಮನುಷ್ಯ ಸಂಬಂಧಗಳಿಗಿರಬಹುದಾದ ಸಂವೇದನಾಶೀಲತೆಯನ್ನು ಕಾಪಾಡಿಕೊಂಡು ಜೀವಿಸುವುದೇ ಒಂದು ಸವಾಲು. ಇಂತಹ ತಲ್ಲಣದ ಹೊತ್ತಿನಲ್ಲಿ ತಮ್ಮತನಗಳನ್ನು ಜತನ ಮಾಡಿಕೊಂಡವರ ಸಂಖ್ಯೆ ತುಂಬಾ ಕಡಿಮೆ. ಅಂತಹ ಜೀವಂತಿಕೆಯ ವ್ಯಕ್ತಿತ್ವಗಳಲ್ಲಿ ರಾಮಚಂದ್ರಪ್ಪನವರೂ ಒಬ್ಬರು. ಗೆಳೆಯರ ಗುಂಪಿನಲ್ಲಿ ರಾಮ, ರಾಮು ಆಗಿ ಬೆಳೆದವರು. ವೃತ್ತಿ ಬದುಕಿನ ವಲಯದಲ್ಲಿ ವಿದ್ಯಾರ್ಥಿಗಳ ನೆನಪಿನಲ್ಲಿ ಸಂಭ್ರಮಗಳಲ್ಲಿ ಎ.ಬಿ.ಆರ್. ಎಂದೇ ಚಿರಪರಿಚಿತರು. ಕಳೆದ ಇಪ್ಪತ್ತು ವರ್ಷಗಳಿಂದ ಅವರನ್ನು ಹತ್ತಿರದಿಂದ ಬಲ್ಲೆ, ಕುಟುಂಬದ ಬಂಧುತ್ವದ ಬಾಂಧವ್ಯವೂ ನಮ್ಮ ನಡುವೆ ಸಾಧ್ಯವಾದದ್ದು ಅವರ ವ್ಯಕ್ತಿತ್ವದ ಅನನ್ಯತೆಯ ಕಾರಣದಿಂದಲೆ ಎನ್ನುವುದು ಗಮನಾರ್ಹ.



ಡಾ. ಜಿ.ಪ್ರಶಾಂತ ನಾಯಕ

ಓದು ಸಂವಾದ ಅಧ್ಯಯನ ಅಧ್ಯಾಪನ ಚಿಂತನೆ ಎಂಬೆಲ್ಲಾ ನೆಲೆಯಲ್ಲಿ ಮನುಷ್ಯ ಸಂಬಂಧಗಳನ್ನೇ ಕೇಂದ್ರವಾಗಿಸಿಕೊಂಡು ವಸ್ತುನಿಷ್ಠತೆ, ಜೀವನಪ್ರೀತಿ, ಸಮಾನತೆ ಸಹಬಾಳ್ವೆಯ ಬಗೆಗೊಂದು ಅಕ್ಕರೆಯನ್ನು ನಿರಂತರವಾಗಿ ಬದ್ಧತೆಯ ಅರ್ಥದಿಂದ ಕಾಪಾಡಿಕೊಂಡ ರಾಮಚಂದ್ರಪ್ಪ ಪ್ರಗತಿಪರ ಚಿಂತನೆಯ ರೂಪಕವಾಗಿಯೇ ಅರಿವನ್ನು ಕಾಯ್ದುಕೊಂಡದ್ದು ವಿಶಿಷ್ಟವಾದದ್ದು. ಕನ್ನಡ ಸಾಹಿತ್ಯದ ಓದು ಅಧ್ಯಯನ ಹಿರಿಕಿರಿಯ ವಿದ್ವಾಂಸರೊಂದಿಗಿನ ಒಡನಾಟದಲ್ಲಿ ವಿನಯ ಮತ್ತು ವಿವೇಕವನ್ನು ತಮ್ಮ ಸಂವಹನದ ಶಕ್ತಿಯಾಗಿ ಕಾಯ್ದುಕೊಂಡರು. ಹಾಗಾಗಿಯೇ ಎ.ಬಿ.ಆರ್. ನಮ್ಮ ನಡುವಿನ ಕ್ರಿಯಾಶೀಲ ಚಿಂತನೆಯ ಚಿಂತಕರಾಗಿ, ವಿಮರ್ಶಕರಾಗಿ, ಸಂಶೋಧಕರಾಗಿ ಶೈಕ್ಷಣಿಕ ಸಾಂಸ್ಕೃತಿಕ ಪ್ರಜ್ಞೆಯ ವಾರಸುದಾರರಂತೆ ಬದುಕುವುದು ಸಾಧ್ಯವಾಗಿದೆ. ಬುದ್ಧ, ಅಂಬೇಡ್ಕರ್, ಲೋಹಿಯಾ, ಪೆರಿಯಾರ್, ಕುವೆಂಪುವೇ ಮೊದಲಾದವರ ಚಿಂತನೆಯ ಮಹಾಮಾರ್ಗದಲ್ಲಿ ನಡೆಯುವುದು ಸಹಜವಾಗಿ ಸಾಧ್ಯವಾಗಿರುವಲ್ಲಿಯೇ ಅವರು ಎಲ್ಲ ಬಗೆಯ ಪೂರ್ವಾಗ್ರಹಗಳಿಂದ ಪಾರಾಗಿ ತಮ್ಮತನವನ್ನು ಕಾಯ್ದುಕೊಂಡಿರುವುದರ ಫಲಿತವಾಗಿದೆ. ಕನ್ನಡದ ಅಧ್ಯಾಪಕರಾಗಿ ಪಠ್ಯಗಳನ್ನು ರೂಪಿಸುವಲ್ಲಿ, ಶೈಕ್ಷಣಿಕ ನೀತಿ–ನಿರೂಪಣೆಗಳಲ್ಲಿ, ಅಧ್ಯಯನದ ಶಿಸ್ತನ್ನು ಕಾಪಾಡುವಲ್ಲಿ ಸಾಂಸ್ಕೃತಿಕ ಅರಿವನ್ನು ತುಂಬುತ್ತಲೇ ಯುವ ವಿದ್ಯಾರ್ಥಿ ಸಮೂಹಕ್ಕೆ ಆದರ್ಶ ಅಧ್ಯಾಪಕರಾದ ರಾಮಚಂದ್ರಪ್ಪನವರು ತನ್ಮೂಲಕ ಇತರರಿಗೆ ಮಾದರಿಯಂತಾದವರು.

ಜನಪರ ಹೋರಾಟಗಳಲ್ಲಿ, ಸಮಾನತೆಯ ಪರವಾದ ಚಳುವಳಿಗಳಲ್ಲಿ, ಬಂಡಾಯ ಸಂಘಟನೆಯಲ್ಲಿ, ನಿರಂತರವಾಗಿ ತಮ್ಮನ್ನು ಕ್ರಿಯಾಶೀಲವಾಗಿ ತೊಡಗಿಸಿಕೊಂಡು ಸಂಘಟನೆಗಳ ಸಂಚಾಲಕರಾಗಿಯೂ ಸಾಮಾಜಿಕ ಜಾಗೃತಿಯ ಜವಾಬ್ದಾರಿಯನ್ನು ಯಶಸ್ವಿಯಾಗಿ ನಿಭಾಯಿಸಿದವರು. ವೃತ್ತಿಯ ಅನಿವಾರ್ಯತೆಯ ನಿವೃತ್ತಿಯ ನಂತರ ಅವರ ಸೃಜನಶೀಲ ವ್ಯಕ್ತಿತ್ವಕ್ಕೆ ಮತ್ತಷ್ಟು ಕ್ರಿಯಾಶೀಲತೆಯು ಸಾಧ್ಯವಾಗಿದೆ. ಸದ್ಯಕ್ಕೆ ನಾಡಿನಲ್ಲಿ ಸಂಚಲನವನ್ನು ಸೃಷ್ಟಿಸಿರುವ ಮಾನ್ಯ ಸತೀಶ ಜಾರಕಿಹೊಳಿಯವರ ಮಹೋನ್ನತ ಯೋಚನೆ ಯೋಜನೆಯ "ಮಾನವ ಬಂಧುತ್ವ" ಸಂಘಟನೆಗೆ ರಾಜ್ಯ ಸಂಯೋಜಕ ಶಕ್ತಿಯಾಗಿ ಕಾರ್ಯನಿರ್ವಹಿಸಿತ್ತಿರುವುದು, ಹೊಸಹೊಸ ಯೋಜನೆಗಳ ರೂವಾರಿಯಾಗಿರುವುದು ಮೆಚ್ಚುಗೆಯ ಸಂಗತಿ.

ಮೂಲತಃ ತಮ್ಮ ಸರಳ ಸಹಜ ನಡೆ ನುಡಿ, ಆಪ್ತವಾದ ಸಂವಹನ, ಎಲ್ಲರೊಳಗೊಂದಾಗಿ ಬದುಕ ಬಯಸುವ ಜೀವನಪ್ರೀತಿಯ ಗುಣಗಳಿಂದ ಒಮ್ಮೆ ಅವರನ್ನು ಭೆಟ್ಟಿಯಾದವರು ಎಂದಿಗೂ ಮತ್ತೆ ಮರೆಯಲಾಗದಂತೆ ನೆನಪಿಡಬಹುದಾದ ಸ್ನೇಹಜೀವಿ ರಾಮಚಂದ್ರಪ್ಪನವರು. ತಮ್ಮ ಹೃದಯವಂತಿಕೆಯಿಂದಲೇ ಸಂಬಂಧಕ್ಕೆ ಮುನ್ನುಡಿ ಬರೆಯಬಲ್ಲವರು. ಈಚೆಗೆ ಸರ್ಕಾರ ಅವರನ್ನು ಕನ್ನಡ ಅಭಿವೃದ್ಧಿ ಪ್ರಾಧಿಕಾರಕ್ಕೆ ಸದಸ್ಯರನ್ನಾಗಿ ನೇಮಿಸಿರುವುದು ಅವರ ಕ್ರಿಯಾಶೀಲತೆಗೆ ಸಂದ ಗೌರವವೂ ಹೌದು. ದಾವಣಗೆರೆ ಜಿಲ್ಲೆಯ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆಯ ಮಹತ್ವದ ಜವಾಬ್ದಾರಿಗೆ ಅವರು ಖಂಡಿತವಾಗಿಯೂ ಅತ್ಯಂತ ಅರ್ಹರಾದ ವ್ಯಕ್ತಿ ಮತ್ತು ವ್ಯಕ್ತಿತ್ವ, ತನ್ಮೂಲಕ ಸಾಹಿತ್ಯ ಪರಿಷತ್ತು ತನಗೆ ಗೌರವವನ್ನು ತಂದುಕೊಂಡಿದೆ ಎನ್ನುವುದು ಅಭಿನಂದಾರ್ಹವಾದ ಸಂಗತಿಯೇ ಹೌದು. ರಾಮಚಂದ್ರಪ್ಪನವರಿಗೆ ಒದಗಿದ ಈ ಬಗೆಯ ಸಾಂಸ್ಕೃತಿಕ ಜವಾಬ್ದಾರಿ ಅವರ ಮತ್ತಷ್ಟು ಉತ್ಸಾಹದ ಬೆಳವಣಿಗೆಗೆ ಪೂರಕವಾಗಬಲ್ಲದು, ಮಾನವೀಯ ಮೌಲ್ಯಗಳ ಕಾಯುವಿಕೆಗೊಂದು ಅರ್ಥವನ್ನು ತಂದುಕೊಡಬಲ್ಲದು. ಅವರಿಗೆ ಎಲ್ಲ ಒಳಿತುಗಳು ಒದಗಿಬರಲಿ ಎನ್ನುವುದು ನನ್ನಂತಹ ಗೆಳೆಯರೆಲ್ಲರ ಹಾರೈಕೆ.



ದಾವಣಗೆರೆ ಜಿಲ್ಲಾ ೧೪ನೇ ಕನ್ನಡ ಸಾಹಿತ್ಯ ಸಮ್ಮೇಳನದ

ಸರ್ವಾಧ್ಯಕ್ಷರಾಗಿ ಆಯ್ಕೆಯಾಗಿರುವ

ಡಾ.ಎ.ಬಿ.ರಾಮಚಂದ್ರಪ್ಪ ಅವರಿಗೆ

ಪ್ರೀತಿ ಪೂರ್ವಕ ಅಭಿನಂದನೆಗಳು



ಶುಭಕೋರುವವರು

ಶ್ರೀ ಹಾಲೇಶ್ ಕೆ.ಎಂ.



ಶ್ರೀ ಹುಲಿಗೆಮ್ಮ ದೇವಿ ನರ್ಸರಿ,

ಬನ್ನಿಕೋಡು, ಹರಿಹರ ತಾ.





ನಿಮ್ಮ ದಾವಣಗೆರೆ ಸಮೀಪ ಉತ್ತಮ ಗುಣಮಟ್ಟದ

ಅಡಿಕೆ ಹಾಗೂ ತೆಂಗಿನ ಸಸಿಗಳು ಲಭ್ಯ

96864 82859






ಅರಿವಿನ ತೊರೆ

# ನನ್ನ ನಲ್ಮೆಯ ಗೆಳೆಯ ಪ್ರಗತಿಪರ ಚಿಂತಕ



ನಾನು ಸಿರಿಗೆರಿಯಲ್ಲಿ ಪಿ.ಯು ಅಭ್ಯಾಸ ಮಾಡುವಾಗ ನನ್ನ ಸ್ನೇಹಿತರಾದ ಚಿದಾನಂದಪ್ಪ ಹಾಗೂ ರವಿ ಅವರ ಮೂಲಕ ಪರಿಚಯವಾದ ಎ.ಬಿ.ಆರ್ ಅಲ್ಲಿಯೇ ಪದವಿ ಶಿಕ್ಷಣ ಮುಂದುವರಿಸಿ ಮಠದ ವ್ಯವಸ್ಥೆಯ ವಿರುದ್ಧ ಸಿಡಿದೆದ್ದ ಹರಿಹರದ ಎಸ್.ಜೆ.ವಿ.ಪಿ ಕಾಲೇಜಿನಲ್ಲಿ ಪದವಿ ಮುಗಿಸಿದರು. ನಾನು ಬಿ.ಆರ್ ಪ್ರಾಜೆಕ್ಟ್‌ನಲ್ಲಿ ಎಂ.ಎ ವ್ಯಾಸಾಂಗ ಮಾಡುವಾಗ ನನ್ನ ಸೀನಿಯರ್ ಆಗಿದ್ದರು. ನನ್ನ ಹಾಗೂ ಎ.ಬಿ.ಆರ್ ಸ್ನೇಹಕ್ಕೆ ಈಗ ನಲವತ್ತು ವರ್ಷಗಳಾಗಿವೆ, ಇಂದಿಗೂ ಹಾಗೆಯೇ ಇದ್ದೇವೆ.

ನಾನು ದೂರವಾಣಿ ಇಲಾಖೆಯಲ್ಲಿ ನೌಕರಿಯಲ್ಲಿದ್ದಾಗ ಅವರಿಗೆ ಬಾಳ ಸಂಗಾತಿಯನ್ನು ಹುಡುಕಿ ಅವರ ದಾಂಪತ್ಯ ಜೀವನದ ಯಶಸ್ವಿಗೆ ಕಾರಣರಾಗಿರುವವರಲ್ಲಿ ನಾನು ಒಬ್ಬನಾಗಿದ್ದೇನೆ. ಹರಿಹರದ ಎಸ್.ಜೆ.ವಿ.ಪಿ ಕಾಲೇಜಿನಲ್ಲಿ ತಮ್ಮ ಅಧ್ಯಾಪಕರ ವೃತಿಯನ್ನು ಪ್ರಾರಂಭಿಸಿದ ಇವರು ತಮ್ಮ ವೃತ್ತಿಯ ಬಗ್ಗೆ ವಿಶೇಷವಾದ ಬದ್ಧತೆಯನ್ನಿಟ್ಟುಕೊಂಡು ಸಾವಿರಾರು ಶಿಷ್ಯರ ಮೆಚ್ಚುಗೆಗೆ ಪಾತ್ರರಾಗಿದ್ದರು. ಆ ಸಂಸ್ಥೆಯ ಆಡಳಿತ ಮಂಡಳಿಯೊಂದಿಗೆ ರಾಜಿ ಮಾಡಿಕೊಳ್ಳದೆ ತನ್ನದೇ ತತ್ವ ಸಿದ್ಧಾಂತಗಳಿಗೆ ಬದ್ಧರಾಗಿದ್ದರು. ಅವರಲ್ಲಿರುವ ನಾಯಕತ್ವದ ಗುಣ, ಸಂಘಟನಾತ್ಮಕ ಶಕ್ತಿಯಿಂದಾಗಿ ಸಾಹಿತ್ಯ ಹಾಗೂ ಸಾಂಸ್ಕೃತಿಕ ಸಂಘ ಸಂಸ್ಥೆಗಳಲ್ಲಿ ಗುರುತಿಸಿಕೊಂಡಿದ್ದರು. ವಯಕ್ತಿಕವಾಗಿ ಎಷ್ಟೇ ಕಷ್ಟ ಕಾರ್ಪಣ್ಯಗಳಿದ್ದರು ಅವುಗಳನ್ನು ತೋರ್ಪಡಿಸುತ್ತದೆ ದಿಟ್ಟವಾಗಿ ಎದುರಿಸಿದವರು. ಸದಾ ಮುಗುಳ್ನಗೆಯ ಮೃದು ಮಾತುಗಳ ಮೂಲಕ ಇನ್ನೊಬ್ಬರ ಮನಸ್ಸನ್ನು ಗೆಲ್ಲುವ ಆಕರ್ಷಕ ವ್ಯಕ್ತಿತ್ವ ಅವರಲ್ಲಿ ನಾನು ಕಂಡಿದ್ದೇನೆ. ನೇರ ನಡೆ ನುಡಿಯ ವೈಚಾರಿಕ ವ್ಯಕ್ತಿತ್ವವನ್ನು ಹೊಂದಿದ್ದ ಇವರು ಎಲ್ಲರನ್ನು ಪ್ರೀತಿಸುವ ಹಾಗೂ ಗೌರವಿಸುವ ಮಾತೃ ಹೃದಯ ಅವರದ್ದಾಗಿದೆ. ಪ್ರತಿ ವರ್ಷ ಶಿವಮೊಗ್ಗೆಯ ಸಹ್ಯಾದ್ರಿ ಕಾಲೇಜಿನಲ್ಲಿ ಮೌಲ್ಯಮಾಪನ ಕಾರ್ಯದಲ್ಲಿ ಸೇರಿಕೊಳ್ಳುತ್ತಿದ್ದೇವು. ಮೌಲ್ಯಮಾಪನ ಮುಗಿದ ಅನಂತರ ಪಠ್ಯಗಳ ಬಗ್ಗೆ ಶೈಕ್ಷಣಿಕ ವಿಚಾರ ಕುರಿತು ಚರ್ಚೆ ಮಾಡುತ್ತಿದ್ದೆವು. ಸಾಂಪ್ರದಾಯಿಕ ಸನಾತನ, ವಸ್ತು ವಿಷಯ ಕುರಿತಾದ ಪಠ್ಯಗಳ ಬಗ್ಗೆ ತೀಕ್ಷಣವಾಗಿ ಪ್ರತಿಭಟಿಸುತ್ತಿದ್ದೆವು. ನಾವೆಲ್ಲ ಹಿರಿಯ ಅಧ್ಯಾಪಕರ ಪಾಲಿಗೆ ದುಷ್ಟಕೂಟದ ಗುಂಪಾಗಿ ಕಾಣುತ್ತಿದ್ದೆವು. ಅದರಲ್ಲಿ ಎ.ಬಿ.ಆರ್. ಅವರ ಬಂಡಾಯದ ಮನೋಧರ್ಮ, ವೈಚಾರಿಕ ಪ್ರಜ್ಞೆ ನನ್ನ ಮೇಲೆ ಗಾಢವಾದ ಪ್ರಭಾವ ಬೀರಿದ್ದವು. ನನ್ನೂರಿನಲ್ಲಿ ಕಳೆದ ಮೂರು ವರ್ಷಗಳ ಹಿಂದೆ ಖುಷ್ಕಿ ಜಮೀನು ಕೊಂಡು ನನ್ನ ಸಹೋದರನಿಗೆ ಕೃಷಿ ಮಾಡಲು ಕೊಟ್ಟಾಗ ಆ ಜಮೀನಿಗೆ ಅಡಿಕೆ ತೋಟ ಮಾಡುವಂತೆ ಪ್ರೋತ್ಸಾಹಿಸಿ ಪ್ರೇರೇಪಿಸಿದವರು ಎ.ಬಿ.ಆರ್ ಆಗಿದ್ದರು. ಇತ್ತೀಚೆಗೆ ನಾನು ಕರ್ನಾಟಕ ರಾಜ್ಯ ಪಠ್ಯ ಪುಸ್ತಕ ಪರಿಷ್ಕರಣಾ ಸಮಿತಿ ಅಧ್ಯಕ್ಷನಾಗಿ ಆಯ್ಕೆಯಾಗಿದ್ದರ ಹಿಂದೆ ಎ.ಬಿ.ಆರ್ ಅವರ ಪಾತ್ರ ಮಹತ್ವದ್ದಾಗಿತ್ತು. ನಾನು ಎಷ್ಟೇ ಬುದ್ಧಿವಂತ ಪ್ರಭಾವಶಾಲಿಯಾಗಿ ಬೆಳೆದರೂ ಅದಕ್ಕೆ ಎ.ಬಿ.ಆರ್. ನನಗೆ ಸ್ಫೂರ್ತಿಯಾಗಿದ್ದರು.

ಅಂಬೇಡ್ಕರ್ ಚಿಂತನೆಗಳ ಕುರಿತಾಗಿ ಅಧಿಕೃತವಾಗಿ ಮಾತನಾಡಬಲ್ಲ ಪ್ರಬುದ್ಧ ಚಿಂತಕರಾಗಿ ಅವರು ಗುರುತಿಸಿಕೊಂಡಿರುವುದು ನನಗೆ ಹೆಮ್ಮೆಯ ಸಂಗತಿಯಾಗಿದೆ. ಕರ್ನಾಟಕ ರಾಜ್ಯ ಮಾನವ ಬಂಧುತ್ವ ವೇದಿಕೆಯ ರಾಜ್ಯ ಸಂಚಾಲಕರಾಗಿ ನಾಡಿನಾದ್ಯಂತ ತಿರುಗಾಡಿ ವೈಚಾರಿಕ ಪ್ರಜ್ಞೆ ಮೂಡಿಸಿ ಮಾನವ ಸಂಬಂಧಗಳ ಬೆಸುಗೆಯಲ್ಲಿ ಮುಖ್ಯ ಪಾತ್ರವಹಿಸುತ್ತಿದ್ದಾರೆ. ಸಾಮಾಜಿಕ ನ್ಯಾಯದ ಬಗ್ಗೆ ಸಮ ಸಮಾಜದ ಕನಸನ್ನು ಕಾಣುತ್ತಾ ಸಾಮಾಜಿಕ ಬದ್ಧತೆಯಿಂದ ಕಾರ್ಯನಿರ್ವಹಿಸುತ್ತಿದ್ದಾರೆ. ಇಂತಹ ಬಹುಮುಖ್ಯ ವ್ಯಕ್ತಿತ್ವವುಳ್ಳ ನನ್ನ ಹಿತೈಶಿ ಸ್ನೇಹಿತ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಸದಸ್ಯರಾಗಿ, ಸಾಹಿತ್ಯ ಕ್ಷೇತ್ರದಲ್ಲಿ ಹಲವಾರು ಕೃತಿಗಳನ್ನು ರಚಿಸಿ, ಕವಿಯಾಗಿ, ದಾವಣಗೆರೆ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಜಿಲ್ಲಾ ಸಮ್ಮೇಳನದ ಅಧ್ಯಕ್ಷನಾಗಿ ಆಯ್ಕೆ ಆಗಿರುವುದ ನನಗೆ ಅತ್ಯಂತ ಸಂಭ್ರಮದ ಸಂಗತಿಯಾಗಿದೆ. ಅವರಿಗೆ ಎಲ್ಲಾ ರೀತಿಯ ಶುಭ ಕೋರುತ್ತೇನೆ.



ಕೆ.ಅಂಜನಪ್ಪ








## ಅರಿವಿನ ತೊರೆ





# ಇಳಿಗಾಲದ ಕಡು ಚೆಲುವ



ಡಾ. ಮಲ್ಲಿಕಾರ್ಜುನ್ ಕಲಮರಹಳ್ಳಿ

"ಎಬಿಆರ್" ಎಂಬ ಸಂಕ್ಷಿಪ್ತ ಹೆಸರಿನಲ್ಲಿ ಖ್ಯಾತನಾಮರಾಗಿರುವ ಅಗರಬನ್ನಿಹಟ್ಟಿ ರಾಮಚಂದ್ರಪ್ಪನವರನ್ನು ಕಳೆದ 25 ವರ್ಷಗಳಿಂದ ಬಲ್ಲವನಾಗಿದ್ದೇನೆ. ದೂರವಾಣಿಯಲ್ಲಿ ಮಾತನಾಡುವಾಗ ಮೊದಲು ನಾನು ಅವರನ್ನು ಬೇರೆ ಬೇರೆ ವಿಶೇಷಣಗಳಿಂದ ಸಂಬೋಧಿಸಿ ಅವರನ್ನು ಕೆಣಕುವುದು, ಅವರು ನನ್ನನ್ನು ಕೆಣಕಿ ಅಹಅಹಅಹಾ.. ಅಂತ ಗಹಗಹಿಸಿ ನಕ್ಕು ನನ್ನನ್ನು ನಗಿಸಿ ಅನಂತರ ವಿಷಯಕ್ಕೆ ಬರುವುದು ನಮ್ಮ ನಡುವೆ ನಿರಂತರ ಸಹಜ ರೂಢಿಯ ಪ್ರಕ್ರಿಯೆ ಆಗಿದೆ. ಆ ನಗುವಿನಲ್ಲಿ ಉಲ್ಲಾಸವಿದೆ. ಹಿತವಿದೆ.

ವಿದ್ಯಾರ್ಥಿ ದೆಸೆಯಿಂದಲೂ ಸಾಮಾಜಿಕ ಹೋರಾಟಗಳಲ್ಲಿ ಪಾಲ್ಗೊಳ್ಳುತ್ತಿರುವ ರಾಮಚಂದ್ರಪ್ಪನವರು ಸಾಮಾಜಿಕ ಕಳಕಳಿಯ ದಲಿತ ಪ್ರಜ್ಞೆಯ ವಿಚಾರವಾದಿ. ಬಾಬಾಸಾಹೇಬ್ ಅಂಬೇಡ್ಕರ್ ವಿಚಾರಧಾರೆಗಳನ್ನು ತಮ್ಮ ಬದುಕಿನ ಪಥದ ಬಂಡಿಯನ್ನಾಗಿಸಿಕೊಂಡವರು. ಮಾನವ ಬಂಧುತ್ವ ವೇದಿಕೆಯ ರಾಜ್ಯ ಸಂಚಾಲಕರಾಗಿ ರಾಜ್ಯಾದ್ಯಂತ ಕಾಲಿಗೆ ಚಕ್ರ ಕಟ್ಟಿಕೊಂಡು ಸುತ್ತಾಡುತ್ತಿರುವವರು. ಬಂಧುತ್ವ ವೇದಿಕೆಗೆ ಅಂತಃಶಕ್ತಿಯಾಗಿ ನಿಂತವರು. ದಾವಣಗೆರೆಯಲ್ಲಿ ಜರುಗಿದ ರಾಜ್ಯ ಬಂಡಾಯ ಸಾಹಿತ್ಯ ಸಮ್ಮೇಳನ ಎಬಿಆರ್ ಅವರ ಸಂಘಟನಾ ಕ್ರಿಯಾಶೀಲತೆಯ ಕನ್ನಡಿ. ಸುಮಾರು 35 ವರ್ಷಗಳು ಪದವಿ ಕಾಲೇಜು ಕನ್ನಡ ಅಧ್ಯಾಪಕರಾಗಿ ವಿದ್ಯಾರ್ಥಿಗಳಿಂದ ಅಚ್ಚುಮೆಚ್ಚಿನ "ಆಪ್ತಮೇಷ್ಟ್ರು" ಎಂಬ ಹೆಗ್ಗಳಿಕೆಗೆ ಪಾತ್ರರಾದವರು. ಬಂಧುತ್ವ ಕೇಂದ್ರಗಳಲ್ಲಿ ನಿರಂತರವಾಗಿ ಜನಮುಖೀ ಕಾರ್ಯಕ್ರಮಗಳು ಜರುಗುತ್ತಿರುತ್ತವೆ. ಆ ಎಲ್ಲಾ ಕಾರ್ಯಕ್ರಮಗಳಿಗೆ ಊಟ ವಸತಿ ಸೌಕರ್ಯಗಳನ್ನು ಕಲ್ಪಿಸಿಕೊಡುವ ಮಹತ್ತರ ಕಾರ್ಯಕ್ಕೆ ಇವರದ್ದೇ ಪ್ರೇರಣೆ. ಬಂಧುತ್ವ ವೇದಿಕೆಯಿಂದ ರಾಜ್ಯ ಮಟ್ಟದ ನಾಟಕ ಶಿಬಿರ ಏರ್ಪಡಿಸಿ "ಬುದ್ಧಬೆಳಗು" ನಾಟಕದಲ್ಲಿ ತಾನೂ ಒಂದು ಪಾತ್ರನಿರ್ವಹಿಸಿ ಸಮಾಜಕ್ಕೆ ಉತ್ತಮ ಅರಿವಿನ ಬೆಳಗನ್ನು ಬಿತ್ತುವಲ್ಲಿ ಸಫಲರಾದವರು.

ಮಿತ್ರ ರಾಮಚಂದ್ರಪ್ಪ ತಮ್ಮ ಖಾಸಗಿ ದಿನಚರಿಯಲ್ಲಿಯೂ ಒಂದು ಶಿಸ್ತನ್ನು ಪಾಲಿಸುತ್ತಿರುವರು. ಬೆಳಂ ಬೆಳಗ್ಗೆ ಮುಸುಕಿನಲ್ಲಿ ಒಂಟಿಯಾಗಿ ವಾಕ್ ಮಾಡುತ್ತಲೇ ನೈಸರ್ಗಿಕ ಅಣಬೆಳಗನ್ನು ಹುಡುಕಾಡುವ ಮಳೆಗಾಲದಲ್ಲಿ ಆಹಾರಪ್ರಿಯ. ಅಂತೆಯೇ ಅಚ್ಚುಕಟ್ಟಾದ ಗರಿಗರಿ ಉಡುಗೆ ತೊಡುಗೆಗಳನ್ನು ಧರಿಸಿ ಆಕರ್ಷಕವಾಗಿ ಕಾಣಿಸಿಕೊಳ್ಳುವ ಇಳಿಗಾಲದ ಕಡುಚಲುವ. ಪ್ರಿಯಮಿತ್ರ ಎ.ಬಿ.ರಾಮಚಂದ್ರಪ್ಪನವರು ಜಗಳೂರಿನಲ್ಲಿ ಜರುಗುತ್ತಿರುವ ದಾವಣಗೆರೆ ಜಿಲ್ಲಾ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷತೆ ವಹಿಸಿಕೊಳ್ಳುತ್ತಿರುವ ಈ ಹೊತ್ತಿನಲ್ಲಿ ತುಂಬು ಹೃದಯದಿಂದ ಅಭಿನಂದನೆಗಳನ್ನು ಸಲ್ಲಿಸುತ್ತಾ ಮುಂದಿನ ದಿನಮಾನದಲ್ಲಿ ಇನ್ನೂ ಉನ್ನತೋನ್ನತ ಸ್ಥಾನಮಾನಗಳು ಲಭಿಸಲೆಂದು ಆಶಿಸುತ್ತೇನೆ.



## ದಾವಣಗೆರೆ ಜಿಲ್ಲಾ ೧೪ನೇ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರಾಗಿ ಆಯ್ಕೆಯಾಗಿರುವ

# ಡಾ.ಎ.ಬಿ.ರಾಮಚಂದ್ರಪ್ಪ ಅವರಿಗೆ

## ಪ್ರೀತಿ ಪೂರ್ವಕ ಅಭಿನಂದನೆಗಳು







**ಅಶೋಕ ಜಿ. ಗಾಣಗಟ್ಟೆ**
ಸಂಶೋಧಕರು, ಕನ್ನಡ ವಿಶ್ವವಿದ್ಯಾಲಯ, ಹಂಪಿ

**ಡಾ.ಆನಂದ ಎಸ್.ಎನ್**
ಸಹಾಯಕ ಪ್ರಾಧ್ಯಾಪಕರು
ಕನ್ನಡ ವಿಭಾಗ, ಸರ್ಕಾರಿ ಪ್ರಥಮ ದರ್ಜೆ
ಕಾಲೇಜು, ಅಜ್ಜಂಪುರ



**ಡಾ. ನಿಂಗಪ್ಪ ಮಂಟೇದರ**
ಕಚೇರಿ ಸಹಾಯಕ. ದೇಸಿ ಸಂಸ್ಕೃತಿ ಅಧ್ಯಯನ ಕೇಂದ್ರ ಕುರುಬನ ಕಟ್ಟೆ





## ಅರಿವಿನ ತೊರೆ

# ಮಗು ಮನದ ಚಿಂತಕ

ಬಹು ಸಂಸ್ಕೃತಿಯ ಭಾರತ ಇಂದು ಸಂಕಷ್ಟದಲ್ಲಿದೆ. ಏಕಾಕೃತಿಯ, ಏಕಮುಖೀ ಸಂಸ್ಕೃತಿಯ ಭಾರತದ ಕೂಗು ವರ್ತಮಾನದಲ್ಲಿ ಜೋರಾಗಿಯೇ ಕೇಳಿಸುತ್ತಿದೆ. ದೇಶದ ಅಸ್ಮಿತೆಗೇ ಅದು ಘನ ಘೋರ ಕಂಟಕ. ಹಲವು ಭಾಷೆ, ವಿಭಿನ್ನ ಭಾವನೆ, ವಿವಿಧ ವಿನ್ಯಾಸದ ವೇಶಗಳ ವರ್ಣಮಯ ಭಾರತ ಕಪ್ಪು-ಬಿಳುಪಿನ ಜಾಲದಲ್ಲಿ ನವೆದು ಹೋಗಲು ಬಿಡಬಾರದಲ್ಲವೇ? ಹಲವು ರುಚಿಗಳಿದ್ದಾಗಲೇ ಸ್ವಾದಿಷ್ಟತೆಯ ಸಾರ ನಮ್ಮ ಅನುಭವಕ್ಕೆ ಬರುವುದು. ಈ ವೈವಿಧ್ಯತೆಯನ್ನು ಮಂಕಾಗಿಸುವ ಹುನ್ನಾರ ಈಗ ಭರದಿಂದ ನಡೆಯುತ್ತಿದೆ. ನಮ್ಮ ಸಂವಿಧಾನ ನಮಗೆ ನೀಡಿರುವ ಅಭಿವ್ಯಕ್ತಿ ಸ್ವಾತಂತ್ರ್ಯವನ್ನೇ ಮೊಟಕುಗೊಳಿಸಿ ಅಧೀನತೆಗೆ ಪರೋಕ್ಷವಾಗಿ ತಳ್ಳುವ ನಯವಂಚಕತನ ನಮಗೆ ಸರಿಯಾದ ಕ್ರಮದಲ್ಲಿ ಮನವರಿಕೆಯಾಗುತ್ತಿಲ್ಲ. ಇದೇ ಇಂದಿನ ದುರಂತವೂ ಹೌದು. ನಮ್ಮ ಪರಮ ಧರ್ಮವಾಗಿರುವ ಸಂವಿಧಾನವನ್ನು ಬದಲಾಯಿಸುವ, ದುರ್ಬಲಗೊಳಿಸುವ ಅಡ್ಡ ಮಾತೂ ಕೇಳಿಬರುತ್ತಿದೆ. ಇದು ನಮ್ಮೆಲ್ಲ ಚೇತನವನ್ನೂ ನಿಷ್ಕ್ರಿಯಗೊಳಿಸುವ ಸಂಚು. ಇಂತಹ ಸಂಚಿನ ಮೂಲಕ ಮನುಸ್ಮೃತಿಯ ಮರು ಜಾರಿಗಾಗಿ ಇಂತಹ ಕ್ಷುಲ್ಲಕ ಮನಸ್ಸುಗಳು ಹಾತೊರೆಯುತ್ತಿವೆ. ಇಂತಹ ದುಷ್ಟ ಪರಿಸ್ಥಿತಿಯನ್ನು ಕಟುವಾಗಿ ವಿರೋಧಿಸುವ ಮನಸ್ಸುಗಳು ಇಂದು ವಿರಳವಾಗುತ್ತಿರುವುದು ಶೋಚನೀಯ. ಬಹು ಜನರ ಸುಖ, ಸಂತೋಷ, ನೆಮ್ಮದಿಯನ್ನು ಬಯಸುವ ಮನಸ್ಸುಗಳಿಗೆ ಇಂದು ಬರ ಬಂದಿದೆ. ಆದರೂ ಇಂತಹ ದುರಿತ ಕಾಲದಲ್ಲೂ ನೊಂದವರ ನೋವಿಗೆ, ಸಂಕಟಕ್ಕೆ, ಯಾತನೆಗೆ ಮಿಡಿಯುವ, ಪಿಡುಗಿನಂತೆ ಜನ್ಮಾಪಿ ಕಾಡುತ್ತಿರುವ ಜಾತಿ ವ್ಯವಸ್ಥೆಯಲ್ಲಿ ತೀರಾ ಕೆಳಗೆ ಬಿದ್ದಿರುವ ತಳ ಸಮುದಾಯಗಳ ತಳಮಳಕ್ಕೆ ಸ್ಪಂದಿಸುವ ಅಂತಃಕರಣವುಳ್ಳ ಬೆರಳೆಣಿಕೆಯ ಜೀವಗಳಲ್ಲಿ ಗೆಳೆಯ ರಾಮಚಂದ್ರಪ್ಪನವರೂ ಒಬ್ಬರು. ಅವರು ಕನ್ನಡದ ಪ್ರಾಧ್ಯಾಪಕರಾಗಿ, ಭಾಷೆಯ ಒಳ ಸುಳಿಗಳನ್ನು ಬಲ್ಲವರಾಗಿ, ಸಂಸ್ಕೃತಿಯ ಒಳಪದರುಗಳನ್ನು ಅರ್ಥೈಸಿಕೊಂಡವರು, ಅಷ್ಟೇ ಅಲ್ಲದೆ ಅದನ್ನು ತಮ್ಮ ವಿದ್ಯಾರ್ಥಿಗಳಿಗೂ ಧಾರೆ ಎರೆದವರು. ಈ ಪಯಣ ಇಲ್ಲಿಗೇ ಮುಗಿದಿದ್ದರೆ ಅವರೊಬ್ಬ ಯಶಸ್ವೀ ಅಧ್ಯಾಪಕ ಎಂದಷ್ಟೇ ಆಗಿರುತ್ತಿದ್ದರು. ಆದರೆ ಅದನ್ನೂ ಮಿಕ್ಕಿ ಅವರು ಜನಪರ, ಜೀವಪರ ಸಂಘಟನೆಗಳೊಂದಿಗೆ ತಮ್ಮನ್ನು ಗುರುತಿಸಿಕೊಳ್ಳುವ ಮೂಲಕ ತಮ್ಮ ಕ್ರಿಯಾಶೀಲತೆಯನ್ನು ಮುಂಗಾಣಿಸುತ್ತಿರುವವರಲ್ಲಿ ಅವರು ಪ್ರಮುಖರು. ಸಮ ಸಮಾಜದ ಕನಸು ಕಾಣುತ್ತಾ, ಸರ್ವೋದಯಕ್ಕಾಗಿ ತುಡಿಯುತ್ತಾ ಸದ್ದಿಲ್ಲದೇ ಕ್ರಿಯಾಶೀಲರಾಗಿರುವ ಅವರು 14ನೇ ಜಿಲ್ಲಾ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರಾಗಿರುವುದು ನನಗಂತೂ ಅತೀವ ಸಂತಸವನ್ನುಂಟು ಮಾಡಿದೆ. ಅವರು ಮುಂದೆಯೂ ತಮ್ಮ ಸೃಜನಶೀಲ ಚಟುವಟಿಕೆಗಳಲ್ಲಿ ಮತ್ತಷ್ಟು ಗಾಢವಾಗಿ ತೊಡಗಲಿ ಎಂದು ಮನದುಂಬಿ ಹಾರೈಸುವೆ.



ಚಂದ್ರಶೇಖರ್ ತಾಳ್ಯ



**ರಾಮಚಂದ್ರಪ್ಪನವರು ಕನ್ನಡದ ಪ್ರಾಧ್ಯಾಪಕರಾಗಿ, ಭಾಷೆಯ ಒಳ ಸುಳಿಗಳನ್ನು ಬಲ್ಲವರಾಗಿ, ಸಂಸ್ಕೃತಿಯ ಒಳಪದರುಗಳನ್ನು ಅರ್ಥೈಸಿಕೊಂಡವರು, ಅಷ್ಟೇ ಅಲ್ಲದೆ ಅದನ್ನು ತಮ್ಮ ವಿದ್ಯಾರ್ಥಿಗಳಿಗೂ ಧಾರೆ ಎರೆದವರು. ಈ ಪಯಣ ಇಲ್ಲಿಗೇ ಮುಗಿದಿದ್ದರೆ ಅವರೊಬ್ಬ ಯಶಸ್ವೀ ಅಧ್ಯಾಪಕ ಎಂದಷ್ಟೇ ಆಗಿರುತ್ತಿದ್ದರು. ಆದರೆ ಅದನ್ನೂ ಮಿಕ್ಕಿ ಅವರು ಜನಪರ, ಜೀವಪರ ಸಂಘಟನೆಗಳೊಂದಿಗೆ ತಮ್ಮನ್ನು ಗುರುತಿಸಿಕೊಳ್ಳುವ ಮೂಲಕ ತಮ್ಮ ಕ್ರಿಯಾಶೀಲತೆಯನ್ನು ಮುಂಗಾಣಿಸುತ್ತಿರುವವರಲ್ಲಿ ಅವರು ಪ್ರಮುಖರು.**

## ಅರಿವಿನ ತೊರೆ



# ಅಚ್ಚುಮೆಚ್ಚಿನ ಮೇಷ್ಟ್ರು

**ಎಬಿಆರ್ ಬಗ್ಗೆ ಬರೆಯುತ್ತಾ ಹೋದರೆ ಅದಕ್ಕೆ ಅಂತ್ಯ ಎಂಬುದಿಲ್ಲ. ಏಕೆಂದರೆ ಒಂದೊಂದು ಮುಖದಲ್ಲೂ ಒಂದೊಂದು ರೀತಿ ಕಾಣುವ ಅವರ ವ್ಯಕ್ತಿತ್ವ ಬಹುಮುಖವುಳ್ಳದ್ದು. ಬಹುತ್ವ ಭಾರತದ ಪ್ರತಿನಿಧಿಯಾಗಿ ಕಾಣುವ ಅವರು ನಿಗರ್ವಿಯಾಗಿ ತನ್ನನ್ನು ಬಹುತ್ವದ ಉಳಿವಿಗಾಗಿ ಬಹು ನೆಲೆಯಲ್ಲಿ ತೊಡಗಿಸಿಕೊಂಡವರು.**



ಡಾ.ಆನಂದ ಎಸ್. ಎನ್.

ನಿಮ್ಮ ಗೈಡ್ ಯಾರು? ಎಂದು ನನ್ನನ್ನು ಕೇಳಿದಾಗ 'ಎ. ಬಿ. ರಾಮಚಂದ್ರಪ್ಪನವರು' ಎಂಬ ಉತ್ತರ ಬಂದ ತಕ್ಷಣ, 'ಓ ಎಬಿಆರ್ ಅವರು!' ಎಂಬ ಉದ್ಗಾರ! ಏಕೆಂದರೆ ಅವರು ಎಲ್ಲರಿಗೂ ಎಬಿಆರ್ ಎಂದೇ ಚಿರಪರಿಚಿತರು. 2017ರಲ್ಲಿ ಹಂಪಿಯ ಕನ್ನಡ ವಿಶ್ವವಿದ್ಯಾಲಯದಲ್ಲಿ ನಾನು ಸಾಹಿತ್ಯ ವಿಭಾಗದಿಂದ ಸಂಶೋಧಕನಾಗಿ ಆಯ್ಕೆಯಾದೆ. ಆಗ ನನ್ನ ತಲೆಯೊಳಗೆ ಇದ್ದುದು ಗೈಡ್ ಯಾರನ್ನು ಕೊಡುತ್ತಾರೆ? ಅಥವಾ ಸಿಗುತ್ತಾರೆ? ಅಥವಾ ನಮಗೇ ಆಯ್ಕೆ ಇದಿಯೆ? ಇದ್ದರೆ ನನಗೆ ಪರಿಚಿತ, ವಿಶ್ವಾಸಗಳಿಸಿ ಹೇಳಿಟ್ಟುಕೊಂಡ ಯಾವ ಗೈಡೂ ಇಲ್ಲವಲ್ಲ ಎಂಬ ಚಿಂತೆಯಿತ್ತು. ಆಗ ಕನ್ನಡ ವಿಶ್ವವಿದ್ಯಾಲಯದಿಂದ ಬಾಹ್ಯ ಮಾರ್ಗದರ್ಶಕರ ಪಟ್ಟಿ ಬಿಡುಗಡೆಗೊಳಿಸಿ ಇವರಲ್ಲಿ ಯಾರನ್ನಾದರೂ ಆರಿಸಿಕೊಳ್ಳಿ ಎಂದು ಹೇಳಿದರು. ಆ ಪಟ್ಟಿಯಲ್ಲಿರುವವರಲ್ಲಿ ಯಾರನ್ನೂ ನಾನು ನೇರವಾಗಿ ಕಂಡಿಲ್ಲ, ಪರಿಚಯವಿರುವವರೂ ಯಾರಿಲ್ಲ. ಅದೇ ಸಮಯಕ್ಕೆ ಅನಿರೀಕ್ಷಿತವಾಗಿ ಕುವೆಂಪು ವಿಶ್ವವಿದ್ಯಾಲಯದ ಪ್ರೊಫೆಸರ್‌ಗಳಾದ ಡಾ. ಅಂಜನಪ್ಪ ಸರ್ ಮತ್ತು ಡಾ. ರವಿ ಸರ್ ಪರೀಕ್ಷಾ ಕರ್ತವ್ಯದ ಮೇಲೆ ಬಂದರು. ಅವರನ್ನು ವಿಚಾರಿಸಿದಾಗ ಪಟ್ಟಿಯನ್ನು ನೋಡಿ ಒಂದೇ ಮಾತಿಗೆ ದಾವಣಗೆರೆಯ ಎಬಿಆರ್ ಅವರ ಹೆಸರನ್ನು ವಿಶ್ವವಿದ್ಯಾಲಯಕ್ಕೆ ಹೇಳಿ. 'ಅವರು ನಮ್ಮ ಆಪ್ತ ಗೆಳೆಯ, ಒಳ್ಳೆಯ ಮನುಷ್ಯ, ಬೇಕಾದರೂ ಕಾಲ್ ಮಾಡಿ ಹೇಳುತ್ತೇವೆ' ಎಂಬ ಭರವಸೆಯ ಮಾತುಗಳನ್ನಾಡಿ ನನ್ನೊಳಗೊಂದು ಧೃಢ ನಿರ್ಧಾರ ಕೈಗೊಳ್ಳಲು ಕಾರಣರಾದರು. ಹಂಪಿ ವಿವಿಗೆ ಹೋಗಿ ಸಾಹಿತ್ಯ ವಿಭಾಗದಲ್ಲಿ ನನ್ನ ಮಾರ್ಗದರ್ಶಕರು 'ಡಾ. ಎ.ಬಿ. ರಾಮಚಂದ್ರಪ್ಪನವರು' ಎಂದು ಹೇಳಿದಾಗ ಅಲ್ಲಿಯ ಪುಟ್ಟಯ್ಯ ಸರ್, ರಹಮತ್ ಸರ್, ನುಗಡೋಣಿ ಸರ್ ಗಳು 'ಅತ್ಯುತ್ತಮ ಆಯ್ಕೆ' ಎಂದ ಮಾತು ನನ್ನಲ್ಲಿ ಮತ್ತೊಷ್ಟು ಭರವಸೆಯನ್ನು ಮೂಡಿಸಿತು.

ಹಂಪಿಯಿಂದ ನೇರವಾಗಿ ದಾವಣಗೆರೆಗೆ ಬಂದು ಎಬಿಆರ್ ಅವರಿಗೆ ಕಾಲ್ ಮಾಡಿದೆ. ಮನೆಗೆ ಬರಲು ಹೇಳಿ ವಿಳಾಸ ಕಳಿಸಿದರು. ಮನೆಗೆ ಹೋದಾಗ ಆಗಲೇ ಅವರನ್ನು ಮೊದಲು ನೋಡಿದ್ದು. ಎತ್ತರದ ನಿಲುವು, ಹಸನ್ಮುಖಿ ಮೊಗದಲ್ಲಿ ದೃಢತೆಯ ದಿಟ್ಟತೆ, ಪ್ರಖರ ಚಿಂತನೆ, ಮುಕ್ತ ಮನೋಭಾವ, ಎಲ್ಲರನ್ನೂ ಒಳಗೊಳ್ಳುವ ಆಪ್ತಗುಣ, ಧೈರ್ಯ ತುಂಬಿ ಕಾರ್ಯೋನ್ಮುಖರಾಗುವಂತೆ ಮಾಡುವ ಚಾಕಚಕ್ಯತೆ, ಗೊಂದಲಗಳನ್ನು ಬಹುಬೇಗ ಅರ್ಥ ಮಾಡಿಕೊಂಡು ಸೂಕ್ತ ಸಲಹೆ ನೀಡಿ ಆತ್ಮವಿಶ್ವಾಸ ತುಂಬುವ ಜಾಣ್ಮೆ, ಈ ಎಲ್ಲ ಗುಣಸ್ವಭಾವಗಳು ಮೊದಲ ಭೇಟಿಯಲ್ಲಿಯೇ ಪರಿಚಿತವಾದವು. ನನ್ನಲ್ಲಿ ನನಗೆ ಪೂರ್ಣ ವಿಶ್ವಾಸ ಮೂಡಿತು. ನಾನು ಯಶಸ್ವಿಯಾಗಿ, ಅತ್ಯುತ್ತಮವಾಗಿ ನಾನು ಅರಿತುಕೊಂಡಂತೆ ಸಂಶೋಧನೆ ಕೈಗೊಳ್ಳಲು ಸಾಧ್ಯ ಎಂಬ ಭರವಸೆ ನನ್ನೊಳಗೆ ಮೂಡಿತು.

ಎಬಿಆರ್ ಹೇಳಿದರು "ಸ್ಪರ್ಧಾತ್ಮಕ ಕ್ಷೇತ್ರದಲ್ಲಿ ನೀವೆಲ್ಲಾ ಓದಿಕೊಂಡು ಬಂದಿದ್ದೀರಿ. ಆದರೆ ಇದು ಸಂಶೋಧನಾ ಕ್ಷೇತ್ರ. ಇಲ್ಲಿ ಆ ನಿಮ್ಮ ಓದು ಪೂರ್ಣ ಪ್ರಮಾಣದಲ್ಲಿ ಸಹಾಯಕವಾಗುವುದಿಲ್ಲ. ನಿಮ್ಮ ಓದಿನ ವಿಧಾನ ಬದಲಾಗಬೇಕು. ವಿಷಯದ ಗ್ರಹಿಕೆ ಬದಲಾಗಬೇಕು. ಸಾಹಿತ್ಯವನ್ನು ಸಂಶೋಧನಾ ದೃಷ್ಟಿಯಾಗಿ ನೋಡುವುದು ನಿಮ್ಮ ಇದುವರೆಗಿನ ಓದಿನಲ್ಲಿ ಆಗಿರುವುದಿಲ್ಲ. ಆದ್ದರಿಂದ ಇನ್ನು ಮುಂದೆ ನಿಮ್ಮ ಓದಿನ ವಿಧಾನವನ್ನು ಬದಲಾಯಿಸಿಕೊಳ್ಳಿ" ಎಂದರು.

ಅದು ಹೇಗೆ ಸಾರ್' ಎಂದು ಗೊಂದಲಗೊಂಡ ನಾನು ಕೇಳಿದೆ. 'ನೋಡು, ಸಾಹಿತಿ ಸುಮ್ಮನೆ ಬರೆದಿರುವುದಿಲ್ಲ. ಅವನ ಬರಹದ ಹಿಂದೆ ಅವನ ಲೋಕಗ್ರಹಿಕೆಯಿದೆ, ಆವನು ಬಾಳಿದ ಬದುಕಿದೆ, ಅವನು ಕಂಡುಂಡ ಜೀವನಾನುಭವಿದೆ, ಅವನ ಆ ಬರಹದ ಹಿಂದೆ ಇರುವುದನ್ನು ನೀನು ನಿನ್ನ ಗ್ರಹಿಕೆಗೆ ತಂದುಕೊಂಡೆಯಾದರೆ ನಿನ್ನ ಓದು ಸಂಶೋಧನಾ ಓದು' ಎನಿಸುತ್ತದೆ, ಎಂದು ಹೇಳಿ ಕುವೆಂಪು, ಮಾಸ್ತಿಯಿಂದ ದೇವನೂರ ಮಹಾದೇವ, ಸಿದ್ದಲಿಂಗಯ್ಯನವರೆಗೆ ಕವಿತೆ, ಕತೆ, ಕಾದಂಬರಿಗಳ ಉದಾಹರಣೆ ಸಹಿತ ಹೇಳಿದರು. ಆಗ ನನಗೆ ಪ್ರಾಕ್ಟಿಕಲ್ ಆಗಿ ಅರ್ಥವಾಗತೊಡಗಿತು. ಮುಂದುವರಿದು ಹೇಳಿದರು. ಸಂಶೋಧನೆ ಕೈಗೊಳ್ಳುವ ಮೊದಲು ಒಂದಿಷ್ಟು ಓದಿಕೊಳ್ಳಬೇಕಾಗುತ್ತದೆ. ಕೆಲವೊಂದನ್ನು ಗಮನಿಸಿಕೊಳ್ಳಬೇಕಾಗುತ್ತದೆ. ಆದ್ದರಿಂದ ಸಾಹಿತ್ಯವನ್ನು ಓದಲು ಆರಂಭಿಸಿ ಹಾಗೆಯೇ ವಿಮರ್ಶೆಗಳನ್ನು ಗಮನಿಸಿ. ತತ್ವ ಸಿದ್ಧಾಂತಗಳನ್ನು ಅವಲೋಕಿಸು. ಮಾರ್ಕ್ಸ್‌ವಾದ, ಗಾಂಧೀವಾದ, ಅಂಬೇಡ್ಕರ್‌ವಾದ ಅಸ್ತಿತ್ವವಾದ, ವಾಸ್ತವವಾದ, ಭೌತವಾದ ಹೀಗೆ ಅನೇಕ ಸಿದ್ಧಾಂತಗಳ ಪರಿಚಯಬೇಕಾಗುತ್ತದೆ. ಇದಲ್ಲದೆ ಗ್ರಾಮ್ಷಿ, ಡೆಂಡಾ, ಫುಕೊ, ಸೈಯದ್, ಅಂಬೇಡ್ಕರ್, ಪೆರಿಯಾರ್, ಕಾರ್ಲ್‌ಮಾರ್ಕ್ಸ್, ಗಾಂಧೀಜಿ, ನಾರಾಯಣಗುರು, ವಿವೇಕಾನಂದ ಹೀಗೆ ಚಿಂತಕರ ಬಗ್ಗೆ ಓದಿಕೋ. ನಿನ್ನ ಅರಿವಿನ ವಿಸ್ತಾರ ಹೆಚ್ಚಬೇಕಾದರೆ ಸಂಶೋಧನೆ ಕೈಗೊಳ್ಳುವುದಕ್ಕಿಂತ ಮೊದಲು ಈ ಕೆಲಸ ಆಗಬೇಕು" ಎಂದು ಆಪ್ತವಾಗಿ ಹೇಳಿದರು. ಸಂಶೋಧನೆಗೆ ಸಂಬಂಧಿಸಿದ ನನ್ನೊಳಗಿನ ಎಲ್ಲ ಕೊರತೆಗಳನ್ನು ಮೊದಲ ಭೇಟಿಯಲ್ಲಿಯೇ ಗುರುತಿಸಿ ನಾನು ಸಂಶೋಧನೆಯಲ್ಲಿ ಮೊದಲು ಮಾಡಿಕೊಳ್ಳಬೇಕಾದ ಸಿದ್ಧತೆಯ ಬಗ್ಗೆ ಸೂಕ್ತ ಹಾಗೂ ಅತ್ಯುತ್ತಮ ಮಾರ್ಗದರ್ಶನ ನೀಡಿದರು. ಅವರ ಮಾತಲ್ಲಿ ನನಗೆ ಸಂಪೂರ್ಣ ನಂಬಿಕೆ ಬಂದಿತು. ಅವರ ಮಾರ್ಗದರ್ಶನದಂತೆ ನಡೆದರೆ ನನ್ನೊಳಗೊಬ್ಬ 'ಸಂಶೋಧಕ' ಹುಟ್ಟಲು ಬಹಳ ಸಮಯ ಬೇಕಿಲ್ಲ ಎನಿಸಿತು. ಅವರು ಬೆನ್ತಟ್ಟಿ ಭರವಸೆಯಿಟ್ಟು ಆಡಿದ ಒಂದೊಂದು ಮಾತುಗಳನ್ನು ಮೆಲುಕು ಹಾಕುತ್ತಾ ಓದ ತೊಡಗಿದೆ, ಓದಿದಷ್ಟು ನನ್ನ ಉತ್ಸಾಹ ಇಮ್ಮಡಿಯಾಗತೊಡಗಿತು. ಓದುವಾಗಲೇ ನನ್ನೊಳಗೆ ಉಂಟಾದ ಗೊಂದಲಗಳನ್ನು ಪರಿಹರಿಸಿಕೊಳ್ಳಲು ಕಾಲ್ ಮಾಡಿದಾಗ ಬಿಡುವು ಮಾಡಿಕೊಂಡು ಅವರೇ ಕಾಲ್ ಮಾಡಿ ನನ್ನ ಓದಿನ ಬಗ್ಗೆ ವಿಚಾರಿಸಿ, ಸೂಕ್ತ ಸಲಹೆ ನೀಡಿ, ಸರಿಯಿದ್ದರೆ ಪ್ರೋತ್ಸಾಹಿಸಿ, ತಪ್ಪಿದ್ದರೆ ತಿದ್ದಿ ಸರಿದಾರಿ ತೋರಿಸಿ, ನನ್ನ ಓದಿನ ಗ್ರಹಿಕೆಯನ್ನು ವಿಸ್ತರಿಸುತ್ತಿದ್ದರು. 'ಓದು' ಎಂಬುದು ಒಂದು ಹಂತಕ್ಕೆ ಬೆಳೆದಾಗ ಬರೆಯುವಂತೆ ಪ್ರೋತ್ಸಾಹಿಸತೊಡಗಿದರು. 'ಸಂಶೋಧನಾ ಬರಹ' ಇತರೆಲ್ಲ ಬರಹಗಳಿಗಿಂತ ಭಿನ್ನ ಎಂಬುದನ್ನು ಮನವರಿಕೆ ಮಾಡಿಕೊಟ್ಟರು. ನೀನು ಕಂಡುಕೊಂಡದ್ದನ್ನು ಸರಳ ಭಾಷೆಯಲ್ಲಿ ಅರ್ಥವಾಗುವಂತೆ ಹೇಳಬೇಕಾದರೆ, ನಮ್ಮ ಆಲೋಚನೆಯಲ್ಲಿಯೇ ಒಡಮೂಡಬೇಕು. ಗ್ರಹಿಕೆಯಿಂದ ಕಂಡುಕೊಂಡಿದ್ದನ್ನು ಆಲೋಚನೆಗೊಳಪಡಿಸಿ ಅಲ್ಲಿಂದಲೇ ಅಭಿವ್ಯಕ್ತಯಾಗಬೇಕು. ಆಗ ನೀನು ಹೇಳಬೇಕಾದದ್ದನ್ನು ಪೂರ್ಣವಾಗಿ ಹೇಳಲು ಸಾಧ್ಯ ವಾಗುತ್ತದೆ. ಇಲ್ಲದಿದ್ದರೆ ನಿನ್ನ ಗ್ರಹಿಕೆಯೇ ಒಂದು, ನೀನು ಹೇಳುತ್ತಿರುವುದೇ ಒಂದು ಆಗುತ್ತದೆ ಎಂಬ ಅವರ ಪ್ರಾಕ್ಟಿಕಲ್ ಸಲಹೆಗಳು ನನ್ನ ಎಲ್ಲ ತಪ್ಪುಗಳನ್ನು ಆರಂಭದಲ್ಲಿಯೇ ಇಲ್ಲವಾಗಿಸಿ ಸರಿದಾರಿಯಲ್ಲಿ ಸಾಗುವಂತೆ ಮಾಡುತ್ತಿದ್ದವು. ಒಬ್ಬ ನಿಜವಾದ ಮಾರ್ಗದರ್ಶಕನ ನಡೆಗೆ ಎಬಿಆರ್ ಅತ್ಯುತ್ತಮ ಉದಾಹರಣೆ ಎಂಬುದು ನನ್ನ ಅಭಿಪ್ರಾಯ. ಪ್ರತಿ ಆರು ತಿಂಗಳಿಗೆ ಪ್ರಗತಿ ವರದಿ ನೀಡಬೇಕಾಗಿದ್ದರಿಂದ ಎಬಿಆರ್ ಅವರು ನನಗೆ ಆರು ತಿಂಗಳಲ್ಲಿ ಏನು ಓದಬೇಕು, ಏನು ಬರೆಯಬೇಕು ಎಂಬುದನ್ನು ಮೊದಲೇ ಹೇಳುತ್ತಿದ್ದರು. ಅದರಂತೆ ಬರೆದುಕೊಂಡು ಹೋದಾಗ ಸುದೀರ್ಘವಾಗಿ ಅದರ ಬಗ್ಗೆ ಚರ್ಚಿಸುತ್ತಿದ್ದರು.

ಕನ್ನಡ ಸಾಹಿತ್ಯದಲ್ಲಿ ಮುಖ್ಯ ನೆಲೆಗೆ ಬಾರದ ತೆರೆಮರೆಯಲ್ಲಿ, ಅಂಚಿನಲ್ಲಿ ಉಳಿದಿರುವ ಅದೆಷ್ಟೊ ವಿಚಾರಗಳ ಕಡೆ ಗಮನ ಸೆಳೆದು ಕುತೂಹಲ ಉಂಟುಮಾಡುತ್ತಿದ್ದರು. ಸಂಶೋಧನೆಯಲ್ಲಿ ಕತೆ ಹೇಳುವುದು ಆಗಬಾರದು, ಕತೆಯ ಒಳಗೆ ಇಳಿದು ಅಲ್ಲಿಯ ಪಾತ್ರಗಳ, ಘಟನೆಗಳ ವಿಶ್ಲೇಷಣೆಯ ಮೂಲಕ ಕತೆಗಾರನ ತಾತ್ವಿಕತೆಯನ್ನು ಗ್ರಹಿಸುತ್ತಾ ಬರಹ ಸಾಗಬೇಕು. ಕತೆಯೊಳಗೆ ಬರುವ ಒಂದೊಂದು ದೃಶ್ಯಗಳೂ ಹೊಸಲೋಕವನ್ನು ತೆರೆಯುವತ್ತ ಮುಖ ಮಾಡಿರುತ್ತವೆ. ಅದನ್ನು ಗ್ರಹಿಸುವ ಕಡೆ ನಿಮ್ಮ ಶೋಧ ಸಾಗಬೇಕು ಅದಕ್ಕೆ ಹಲವು ಉದಾಹರಣೆಯ ಮೂಲಕ ಗ್ರಹಿಸುವ ವಿಧಾನವನ್ನು ಕಲಿಸುತ್ತಿದ್ದರು. ಒಂದು ನಿದರ್ಶನವನ್ನು ಇಲ್ಲಿ ನೋಡಬಹುದು, ದೇವನೂರು ಮಹಾದೇವ ಅವರ 'ಒಡಲಾಳ' ನೀಳ್ಗತೆಯಲ್ಲಿ ಪುಟ್ಟಗೌರಿ ಗೋಡೆಯ ಮೇಲೆ ನೀಲಿ ಬಣ್ಣದಿಂದ ನವಿಲಿನ ಚಿತ್ರವನ್ನು ಕಾಲಿನ ಕಡೆಯಿಂದ ಬಿಡಿಸಲು ಪ್ರಾರಂಭಿಸುತ್ತಾಳೆ. ಆಗ ಅಲ್ಲಿಗೆ ಬಂದ ಶಿವು ನವಿಲಿನ ತಲೆ ಕಡೆಯಿಂದ ಚಿತ್ರ ಬಿಡಿಸಲು ಮುಂದಾಗಿ ಅದು ಸಾಧ್ಯವಾಗದೇ ಅಲ್ಲಿಂದ ತೆರಳುತ್ತಾನೆ. ಈ





ದೃಶ್ಯ ಕತೆಯೊಳಗೆ ಸಾಮಾನ್ಯವಾಗಿ ಬಂದು ಮರೆಯಾಗುತ್ತದೆ. ಇದನ್ನು ಸಂಶೋಧಕನಾದವನು ಸೂಕ್ಷ್ಮವಾಗಿ ಅವಲೋಕಿಸಿ ಇಂತಹ ಎಳೆಗಳ ಮೂಲಕ ಕತೆಗಾರ ಏನನ್ನು ಹೇಳಲು ಬಯಸಿದ್ದಾನೆ ಎಂಬುದನ್ನು ಗ್ರಹಿಸಬೇಕಾಗುತ್ತದೆ. ಪುಟ್ಟಗೌರಿ ಕಾಲಿನ ಕಡೆಯಿಂದ ನವಿಲಿನ ಪೂರ್ಣ ಚಿತ್ರವನ್ನು ಬಿಡಿಸುತ್ತಾಳೆ. ಅದು ಮನೆಯ ಎಲ್ಲರ ಕಣ್ಣಿಗೆ ಅಂದವಾಗಿ ಕಾಣುತ್ತದೆ. ಭಾರತೀಯ ಸಮಾಜವನ್ನು ತಳ ಸಮುದಾಯಗಳ ನೆಲೆಯಿಂದ ಕಟ್ಟಬೇಕಾಗಿದೆ. ಉದ್ಧಾರ ಎಂಬುದು ಪಾದದ ಕಡೆಯಿಂದ ಆಗಬೇಕಾಗಿದೆ ಎಂಬುದನ್ನು ದೇವನೂರರು ಸೂಚ್ಯವಾಗಿ ಈ ದೃಷ್ಟಿಯಲ್ಲಿ ಹೇಳಿದ್ದಾರೆ. ಹುಲಿ ವೇಷ ಹಾಕಿ ಜಾತ್ರೆಯಲ್ಲಿ ಗೌಡನ ಎದುರು ಸೆಡ್ಡು ಹೊಡೆದು ಕುಣಿಯುವ 'ಅಮಾಸ' ಕತ್ತಲ ಲೋಕದ ಪ್ರತಿನಿಧಿ. ಬೆಳಕಿನತ್ತ ಸಾಗುವ ತುಡಿತವುಳ್ಳ ಅವನು ಹುಲಿ ವೇಷ ಹಾಕಿ ಪ್ರವೇಶಿದ್ದು ಗೌಡರನ್ನು ಬೆಚ್ಚಿಬೀಳಿಸುತ್ತಾನೆ. ಇದು ದಲಿತರ ಪ್ರವೇಶ ಮಾರ್ಗ ವಿಧಾನವನ್ನು ಸೂಚಿಸುತ್ತದೆ. ಮೊದಲ ಮುದ್ರಣದಲ್ಲಿ 'ಅಮಾಸ' ಕತೆಯ ಅಂತ್ಯದಲ್ಲಿ ಪೂರ್ಣವಿದಾಯ ಎಂಬುದಿಲ್ಲ ಎಂಬುದನ್ನು ಗಮನಿಸಬೇಕು." ಹೀಗೆ ತಮ್ಮ ಅಗಾಧ ಓದಿನ ಹೊಳಹುಗಳನ್ನು ಸಂಶೋಧಕರಿಗೆ ದಾರಿದೀಪವಾಗಿಸಿ ಮಾರ್ಗದರ್ಶನ ಮಾಡುವುದಷ್ಟೇ ಅಲ್ಲದೆ, ಸಾಹಿತ್ಯ ಲೋಕಕ್ಕೆ ತಮ್ಮದೇ ಆದ ಕೊಡುಗೆ ನೀಡುವಂತೆ ತಮ್ಮನ್ನ ತಾವು ತೊಡಗಿಸಿಕೊಳ್ಳಬೇಕೆಂದು ಪ್ರೇರೇಪಿಸುತ್ತಿದ್ದರು. ಅವರ ಪ್ರತಿಯೊಂದು ಮಾತಿನ ಹಿಂದೆ ಸಾಹಿತ್ಯದ ದುಡಿತವಿತ್ತು. ಶಿಷ್ಯ ಸಮುದಾಯವನ್ನು ಬೆಳೆಸುವ ಆಕಾಂಕ್ಷೆಯಿತ್ತು. ಯಾವ ಫಲಾಪೇಕ್ಷೆಯಿಲ್ಲದೆ ನಿರ್ವ್ಯಾಜ ಪ್ರೀತಿಯಿಂದ ತಾನೇ ಸಹಾಯ ಮಾಡಿ ಬೆಳೆಸುವ ಅತಿವಿರಳ ಮಾರ್ಗದರ್ಶಕರಲ್ಲಿ ಎಬಿಆರ್ ಅಗ್ರ ನೆಲೆಯಲ್ಲಿ ಎದ್ದು ಕಾಣುತ್ತಾರೆ.

ಎಬಿಅರ್ ಅನಸೂಯೆ ವ್ಯಕ್ತಿತ್ವವುಳ್ಳವರು ಎಂಬುದು ಮೊದಲ ಭೇಟಿಯಲ್ಲಿಯೇ ನನಗೆ ಗೊತ್ತಾಯಿತು. ಸಂಶೋಧನೆಗೆ ವಿಷಯ ಆಯ್ಕೆ ಮಾಡಿಕೊಂಡು ಅಧ್ಯಾಯಗಳ ವರ್ಗೀಕರಣ ಸಂದರ್ಭದಲ್ಲಿ, ನಂತರದ ಕಾಲದಲ್ಲಿ ಮುಕ್ತವಾಗಿ ಯಾರನ್ನಾದರೂ ಭೇಟಿ ಮಾಡಿ ಚರ್ಚಿಸಲು ಅವರೇ ಹೇಳುತ್ತಿದ್ದರು. ಕೆಲವೊಂದು ಹೆಸರುಗಳನ್ನು ಅವರೇ ಸೂಚಿಸುತ್ತಿದ್ದರು, ರಹಮತ್ ಸರ್, ನಟರಾಜ್ ಬೂದಾಳ್, ಹುಳಿಯಾರ್ ಸರ್, ಸಬಿತಾ, ಮುತ್ತಯ್ಯ, ಪುಟ್ಟಯ್ಯ, ನುಗಡೋಣಿ, ವೆಂಕಟಗಿರಿ ದಳವಾಯಿ ಮೊದಲಾದವರು. ಯಾರನ್ನೇ ಭೇಟಿ ಮಾಡಿದರೂ ಟಿಪ್ಪಣಿ ಮಾಡಿಕೊಳ್ಳಿ ಅವುಗಳನ್ನು ನಿನ್ನ ನಿಲುವುಗಳೊಂದಿಗೆ ತುಲನೆ ಮಾಡಿ ಸಂಶೋಧನೆಯ ಗುಣಮಟ್ಟ ಹೆಚ್ಚುವಂತಿದ್ದರೆ ಬಳಸಿಕೊಂಡು ಮುಂದೆ ಸಾಗು ಎಂದು ಸಲಹೆ ನೀಡುತ್ತಿದ್ದರು. ಚಾಪ್ಟರ್, ಸಬ್ ಚಾಪ್ಟರ್ ಗಳನ್ನು ಮಾಡಿಕೊಳ್ಳುವ ಸಂದರ್ಭಗಳಲ್ಲಿ ಗೊಂದಲ ಉಂಟಾದಾಗ ನನ್ನ ಎಲ್ಲ ಮಾತುಗಳನ್ನು ಸಮಾಧಾನದಿಂದ ಆಲಿಸಿ, ನಂತರ ನನ್ನ ತಪ್ಪುಗಳನ್ನು ಗುರುತಿಸಿ ಅವುಗಳಿಗೆ ಪರಿಹಾರ ನೀಡಿ ಮುಂದೆ ಇಂತಹ ಸಂದರ್ಭ ಬಂದಾಗ ಹೇಗೆ ಆಲೋಚಿಸಬೇಕು ಎಂಬುದನ್ನು ಹೇಳುತ್ತಿದ್ದರು. ಇದು ಅವರು ಕೇವಲ ನೆಪಮಾತ್ರದ ಮಾರ್ಗದರ್ಶಕರಲ್ಲ ಚಿಕಿತ್ಸಕ ಮಾರ್ಗದರ್ಶಕರಾಗಿದ್ದರು ಎಂಬುದಕ್ಕೆ ಸಾಕ್ಷಿ.

ಒಬ್ಬ ಮಾರ್ಗದರ್ಶಕನಾಗಿ ಸಂಶೋಧಕನಿಗೆ ಕಲಿಸಬೇಕಾದ ಇನ್ನೊಂದು ಮಹತ್ವದ ಆಯಾಮ ಬರೆವಣಿಗೆ. ಅದರಲ್ಲೂ ಸಂಶೋಧನಾ ಬರೆವಣಿಗೆ. ಎಬಿಅರ್ ಈ ವಿಚಾರದಲ್ಲಿ ನುರಿತ ಮಾರ್ಗದರ್ಶಕರು. ಅವರು ಓದುವಾಗ ಟಿಪ್ಪಣಿ ಮಾಡಿಕೊಳ್ಳುವ ವಿಧಾನದಿಂದ ಹಿಡಿದು ಸಂಶೋಧನಾ ಅಧ್ಯಾಯಗಳ ಬರೆವಣಿಗೆ ಹಾಗೂ ಫಲಿತಗಳನ್ನು ಬರೆಯುವವರೆಗೆ ತಿದ್ದಿ ತಿದ್ದಿ ಕಲಿಸುವ ಮೇಷ್ಟ್ರು ರೀತಿಯಲ್ಲಿ ಕಲಿಸಿ ಖುಷಿ ಪಟ್ಟವರು. ಒಮ್ಮೆ ಅತ್ಯುತ್ತಮವಾಗಿ ಕಲಿಸಿದರೆ ಪದೇ ಪದೇ ಕಲಿಸುವ ಪ್ರಮೇಯವೇ ಬರುವುದಿಲ್ಲ. ಎಬಿಅರ್ ಮೊದಲ ಕಲಿಕೆಯಲ್ಲಿಯೇ ತಪ್ಪುಗಳನ್ನು ಗುರುತಿಸಿ ಸೂಕ್ತ ಸಲಹೆಗಳೊಂದಿಗೆ ತಿದ್ದಿ ಸಂಶೋಧನಾ ಬರೆವಣಿಗೆಯನ್ನು ಕಲಿಸುತ್ತಿದ್ದುದನ್ನು ಮರೆಯಲಾಗದು, ನಿಜವಾಗಿಯೂ ಸಂಶೋಧನೆ ಏನನ್ನು ಬಯಸುತ್ತದೆ ಎಂಬುದನ್ನು ಸದಾ ಕಾಲ ಗಮನದಲ್ಲಿಟ್ಟುಕೊಂಡು ಬರೆಯಬೇಕು. ಬರೆಯುವಾಗ ಬಳಸುವ ಪ್ರತಿ ಪದವೂ ಸೂಕ್ತವೇ ಎಂಬ ವಿಮರ್ಶೆ ನಮ್ಮೊಳಗೆ ನೆಡೆಯುತ್ತಿರಬೇಕು. ಗೊಂದಲ ಮೂಡಿಸುವ, ಅನವಶ್ಯವಾಗಿ ವಿವರಿಸುವ ಬರೆವಣಿಗೆಗೆ ಅವಕಾಶವಾಗದಂತೆ ನೋಡಿಕೊಳ್ಳಬೇಕು. ಒಮ್ಮೆ ಬರೆದದ್ದನ್ನು ಹತ್ತಾರು ಬಾರಿ ಓದಿ, ಉಪ ಅಧ್ಯಾಯಕ್ಕೆ, ಅದರ ಮೂಲಕ ಅಧ್ಯಾಯಕ್ಕೆ, ಅದರೊಂದಿಗೆ ಮುಖ್ಯ ವಿಷಯಕ್ಕೆ ಪೂರಕವಾಗಿದೆಯೇ? ಎಂಬುದನ್ನು ಗಮನಿಸಿಕೊಳ್ಳುತ್ತಿರಬೇಕು. ಪ್ರತಿ ಹಂತದಲ್ಲಿಯೂ ಹೊಸದನ್ನು ಕಂಡುಕೊಂಡು ಫಲಿತಗಳ ರೂಪದಲ್ಲಿ ಕಟ್ಟಿಕೊಳ್ಳುತ್ತಾ ಸಾಗಬೇಕು ಎಂಬುದನ್ನು ನನ್ನ ಒಂದೊಂದು ಬರಹವನ್ನು ಓದಿ, ತಿದ್ದಿ, ತಿಳಿ ಹೇಳಿ ಕಲಿಸಿದ ಅಚ್ಚುಮೆಚ್ಚಿನ ಮೇಷ್ಟ್ರು ಎಬಿಅರ್.

ಎಬಿಅರ್ ಬಗ್ಗೆ ಬರೆಯುತ್ತಾ ಹೋದರೆ ಅದಕ್ಕೆ ಅಂತ್ಯ ಎಂಬುದಿಲ್ಲ. ಏಕೆಂದರೆ ಒಂದೊಂದು ಮುಖದಲ್ಲೂ ಒಂದೊಂದು ರೀತಿ ಕಾಣುವ ಅವರ ವ್ಯಕ್ತಿತ್ವ ಬಹುಮುಖವುಳ್ಳದ್ದು. ಬಹುತ್ವ ಭಾರತದ ಪ್ರತಿನಿಧಿಯಾಗಿ ಕಾಣುವ ಅವರು ನಿಗರ್ವಿಯಾಗಿ ತನ್ನನ್ನು ಬಹುತ್ವದ ಉಳಿವಿಗಾಗಿ ಬಹು ನೆಲೆಯಲ್ಲಿ ತೊಡಗಿಸಿಕೊಂಡವರು. ಬಹುಸಂಖ್ಯೆಯಲ್ಲಿರುವ ತಳ ಸಮುದಾಯಗಳ ಅಂಚಿಗೆ ತಳ್ಳಲ್ಪಟ್ಟ, ನೊಂದು ಬೆಂದವರ ಪರವಾಗಿ ಅವರ ಗಟ್ಟಿ ಧ್ವನಿ ಯಾವಾಗಲೂ ಮೊಳಗುತ್ತಲೇ ಇರುವುದು. ವೃತ್ತಿಯಲ್ಲಿ ಪ್ರೊಫೆಸರ್ ಆಗಿ ಮಾಡುತ್ತಿದ್ದ ಕೆಲಸ ಒಂದು ಪ್ರದೇಶಕ್ಕೆ ಸೀಮಿತವಾಗಿತ್ತು. ಈಗ ನಿವೃತ್ತರಾದ ಮೇಲೆ ಇಡೀ ಕರ್ನಾಟಕದಾದ್ಯಂತ ವ್ಯಾಪಿಸಿಕೊಂಡು ಅಲ್ಲಿಂದ ವಿಸ್ತರಣೆಯಾಗಿ 'ಮಾನವ ಬಂಧುತ್ವ' ನೆಲೆಯಲ್ಲಿ ವಿಶ್ವಮಾನ್ಯಗೊಳ್ಳುತ್ತಿರುವುದು ಅವರು ಸುಮ್ಮನೆ ಕೂರುವ ವ್ಯಕ್ತಿಯಲ್ಲ ಎಂಬುದನ್ನು ಸಾರಿಸಾರಿ ಹೇಳುವಂತಿದೆ. 'ವ್ಯಕ್ತಿ ಯಾವಾಗಲೂ ಶಕ್ತಿಯಾಗಿ ಬದುಕಬೇಕು' ಎಂದು ಪದೇ ಪದೇ ಹೇಳುತ್ತಿದ್ದರು. ಅಷ್ಟೇ ಅಲ್ಲ, ಅದರಂತೆ ಬದುಕಿ ತೋರುತ್ತಿದ್ದಾರೆ. ಅವರ ಸುಘಟನಾ ಶಕ್ತಿಗೆ 'ಮಾನವ ಬಂಧುತ್ವ ವೇದಿಕೆ' ಒಂದು ಸಾಕ್ಷಿಯಷ್ಟೇ. ಸಾಧಿಸುವ ಛಲದೊಂದಿಗೆ, ಎಲ್ಲರನ್ನು ಒಳಗೊಳ್ಳುತ್ತಾ ಸಾಧನೆಗೆ ಪ್ರೇರೇಪಿಸುವ ಪ್ರೇರಣಾ ಶಕ್ತಿಯಾಗಿ ಅವರು ಕಂಡುಬರುತ್ತಾರೆ. ದಮನಿತ ಧ್ವನಿಯಾಗಿ, ಕರ್ನಾಟಕದಾದ್ಯಂತ ಸಂಚಲನ ಮೂಡಿಸುತ್ತಿರುವ ಎಬಿಆರ್ ಪ್ರಸ್ತುತ 'ನಾಯಕರತ್ನ' ರಲ್ಲಿ ಅಗ್ರಗಣ್ಯರು ಎಂಬುದು ನನ್ನ ಅನಿಸಿಕೆ.







# ಡಾ.ಎ.ಬಿ.ರಾಮಚಂದ್ರಪ್ಪರವರ ಬದುಕು ಮತ್ತು ಬರಹ



ಅಶೋಕ ಜಿ ಗಾಣಗಟ್ಟೆ

ಕನ್ನಡ ಬಂಡಾಯ ಸಾಹಿತಿಗಳಲ್ಲಿ ಒಬ್ಬರಾದ ಡಾ. ಎ.ಬಿ.ರಾಮಚಂದ್ರಪ್ಪ ರವರು 10-06-1961 ರಲ್ಲಿ ಜನಿಸಿದ್ದಾರೆ. ಇವರ ತಂದೆ ವೈ.ಬಸವಂತಪ್ಪ, ತಾಯಿ ಶ್ರೀಮತಿ ಸಿದ್ದಮ್ಮ. ಇವರು ಮೂಲತಃ ಕೃಷಿಕ ಕುಟುಂಬದವರಾಗಿದ್ದು, ಇವರ ಮಗನಾದ ಎ.ಬಿ. ರಾಮಚಂದ್ರಪ್ಪ ರವರು ಪ್ರಾಥಮಿಕ ಶಿಕ್ಷಣವನ್ನು ತಮ್ಮ ಸ್ವ ಗ್ರಾಮದಲ್ಲಿ ಅಭ್ಯಾಸ ಮಾಡಿದ್ದು, ಪ್ರೌಢ ಶಿಕ್ಷಣವನ್ನು ಸರ್ಕಾರಿ ಪ್ರೌಢಶಾಲೆ ಚನ್ನಗಿರಿಯಲ್ಲಿ ಹಾಗೂ ಬಿ.ಎ ಪದವಿಯನ್ನು ಮೈಸೂರಿನಲ್ಲಿ 1985 ರಲ್ಲಿ ಮುಗಿಸಿರುತ್ತಾರೆ, ನಂತರ ಕನ್ನಡ ಎಂ.ಎ ಪದವಿಯನ್ನು 1987ರಲ್ಲಿ ಮೈಸೂರು ವಿಶ್ವವಿದ್ಯಾಲಯದಲ್ಲಿ ಮುಗಿಸಿರುತ್ತಾರೆ. ಪಿಎಚ್. ಡಿ ಪದವಿಯನ್ನು 2008ರಲ್ಲಿ ಕುವೆಂಪು ವಿಶ್ವವಿದ್ಯಾಲಯ ಶಂಕರಘಟ್ಟದಲ್ಲಿ ಮುಗಿಸಿದ್ದು, ಇವರ ಪ್ರಬಂಧದ ಶೀರ್ಷಿಕೆ 'ಸ್ವಾತಂತ್ರ್ಯೋತ್ತರ ಕನ್ನಡ ಸಾಹಿತ್ಯದಲ್ಲಿ ಅಂಬೇಡ್ಕರ್ ಚಿಂತನೆಗಳು' ಈ ವಿಷಯಕ್ಕೆ ಡಾಕ್ಟರೇಟ್ ಪಡೆದಿರುತ್ತಾರೆ. ಇವರು ಏಳು ವರ್ಷಗಳ ಕಾಲ ಕನ್ನಡ ಸ್ನಾತಕೋತ್ತರ ಅಧ್ಯಯನ ಕೇಂದ್ರದಲ್ಲಿ ಪ್ರಾಧ್ಯಾಪಕರಾಗಿ ಹಾಗೂ ಸಂಯೋಜನಕರಾಗಿ ಸೇವೆ ಸಲ್ಲಿಸಿದ್ದಾರೆ. ಹರಿಹರದ ಎಸ್. ಜೆ.ವಿ.ಪಿ ಆಟಾನಮಸ್ ಕಾಲೇಜಿನಲ್ಲಿ ಸಹಾಯಕ ಪ್ರಾಧ್ಯಾಪಕರಾಗಿ ಮತ್ತು ಕನ್ನಡ ವಿಭಾಗದ ಮುಖ್ಯಸ್ಥರಾಗಿ ಸೇವೆಯನ್ನು ಸಲ್ಲಿಸಿ ನಿವೃತ್ತರಾಗಿರುತ್ತಾರೆ. ಹಾಗೂ ಆರು ಸಂಶೋಧನಾ ಪಿಎಚ್. ಡಿ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡಿದ್ದಾರೆ.

ಸಾಹಿತ್ಯ ಸಾಂಸ್ಕೃತಿಕ ಸಂಘ ಸಂಸ್ಥೆಗಳಲ್ಲಿ ಇವರ ಸೇವೆ ಅಪಾರವಾದುದಾಗಿದೆ. ಬಂಡಾಯ ಸಾಹಿತ್ಯ ಸಂಘಟನೆಯಲ್ಲಿ ಸಂಚಾಲಕರಾಗಿ ಸೇವೆಯನ್ನು ಸಲ್ಲಿಸಿದ್ದಾರೆ. ಕನ್ನಡ ಕಾವಲು ಸಮಿತಿಯ ಜಿಲ್ಲಾ ಸದಸ್ಯರಾಗಿ ಸೇವೆ. ದಲಿತ ಸಂಘರ್ಷ ಸಮಿತಿಯಲ್ಲಿ 80 ದಶಕದಿಂದಲೂ ಸಕ್ರಿಯವಾಗಿ ಚಳುವಳಿಗಳಲ್ಲಿ ಭಾಗವಹಿಸಿದ್ದಾರೆ. ಕನ್ನಡ ಸಾಹಿತ್ಯ ಪರಿಷತ್ತಿನ ಅಜೀವ ಸದಸ್ಯತ್ವ, ರಾಜ್ಯ ಸರ್ಕಾರರ ಸಂಘದ ರಾಜ್ಯ ಉಪಾಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದಾರೆ. ಸಾಮಾಜಿಕ ನ್ಯಾಯ ಪರವಾದ ಹಲವು ಸಂಘಟನೆಗಳು, ಕಾರ್ಮಿಕ ಸಂಘಟನೆಗಳು, ವಿದ್ಯಾರ್ಥಿ ಸಂಘಟನೆಗಳು, ಮಹಿಳಾ ಸಂಘಟನೆಗಳು ಹಾಗೂ ಅಹಿಂದ ಹೋರಾಟಗಳಲ್ಲಿ ಭಾಗಿಯಾಗಿದ್ದಾರೆ. ಇನ್ನು ಅನೇಕ ಸಂಘಟನೆಗಳ ಜೊತೆಗೆ ಮೂರು ದಶಕಗಳಿಂದಲೂ ನಿರಂತರವಾಗಿ ಸಂವಾದ ಸಂಪರ್ಕ ಸಲಹೆಗಳೊಂದಿಗೆ ಒಡನಾಟವನ್ನು ಇಟ್ಟುಕೊಂಡಿದ್ದಾರೆ. ಮಾನವ ಬಂಧುತ್ವ ವೇದಿಕೆ ಕರ್ನಾಟಕ ರಾಜ್ಯ ಸಂಚಾಲಕರಾಗಿ ಕಾರ್ಯನಿರ್ವಹಣೆ ಮಾಡುತ್ತಿದ್ದಾರೆ. ಕನ್ನಡ ಅಧ್ಯಾಪಕರಾಗಿರುವ ಇವರಿಗೆ ಕನ್ನಡದ ಮೇಲಿನ ಕಾಳಜಿಯು ಕನ್ನಡಪರ ಸಂಘಟನೆಗಳು, ನಾಡು-ನುಡಿಯ ಉಳಿವಿಗಾಗಿ ನಡೆದಿರುವ ಅನೇಕ ಹೋರಾಟಗಳಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದಾರೆ.





# ಅರಿವಿನ ತೊರೆ



ಶೈಕ್ಷಣಿಕ ಸೇವೆಯನ್ನು ಗಮನಿಸುವುದಾದರೆ ಸ್ನಾರ್ಥಕ ಪದವಿ ಪರೀಕ್ಷಾ ಮಂಡಳಿ ಅಧ್ಯಯನ ಮಂಡಳಿಯ ಸದಸ್ಯರಾಗಿ ಅಧ್ಯಕ್ಷರಾಗಿ ಕಾರ್ಯ ನಿರ್ವಹಣೆ ಮಾಡಿದ್ದಾರೆ. ಸ್ನಾತಕೋತ್ತರ ಪದವಿಯ ಕನ್ನಡ ಪರೀಕ್ಷಾ ಮಂಡಳಿ ಹಾಗೂ ಅಧ್ಯಯನ ಮಂಡಳಿಯ ಸದಸ್ಯರಾಗಿ ಅಧ್ಯಕ್ಷರಾಗಿ ಸೇವೆ ಮಾಡಿದ್ದಾರೆ. ಕುವೆಂಪು ವಿಶ್ವವಿದ್ಯಾಲಯ ಸ್ನಾತಕೋತ್ತರ ಪದವಿಯ ಕನ್ನಡ ಅಧ್ಯಯನ ಮಂಡಳಿಯ ಸದಸ್ಯರಾಗಿ ಕಾರ್ಯನಿರ್ವಹಣೆ, ಕುವೆಂಪು ವಿಶ್ವವಿದ್ಯಾಲಯದ ಸ್ನಾತಕೋತ್ತರ ಪದವಿಯ ಪಠ್ಯ ಪುಸ್ತಕ ರಚನಾ ಸಮಿತಿಯ ಸದಸ್ಯನಾಗಿ ಸಂಪಾದಕರಾಗಿ ಸೇವೆ ಸಲ್ಲಿಸಿದ್ದಾರೆ. ದಾವಣಗೆರೆ ವಿಶ್ವವಿದ್ಯಾಲಯದ ಸ್ನಾತಕೋತ್ತರ ಪದವಿಯ ಕನ್ನಡ ಪಠ್ಯಪುಸ್ತಕದ ರಚನಾ ಸಮಿತಿಯ ಸದಸ್ಯರಾಗಿ ಸೇವೆ ಸಲ್ಲಿಸಿದ್ದಾರೆ. ದಾವಣಗೆರೆ ವಿಶ್ವವಿದ್ಯಾಲಯದ ಕನ್ನಡ ಪರೀಕ್ಷಾ ಮಂಡಳಿಯ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದಾರೆ. ಸಹ್ಯಾದ್ರಿ ವಿಜ್ಞಾನ ಮಹಾವಿದ್ಯಾಲಯ ಶಿವಮೊಗ್ಗ ಮಹಾವಿದ್ಯಾಲಯದಲ್ಲಿ ಕನ್ನಡ ಪರೀಕ್ಷಾ ಮಂಡಳಿಯ ಸದಸ್ಯರಾಗಿ ಕಾರ್ಯ ನಿರ್ವಹಿಸಿದ್ದಾರೆ.

ಆಡಳಿತಾತ್ಮಕ ಸೇವೆಯನ್ನು ನೋಡುವುದಾದರೆ ಕನ್ನಡ ಅಭಿವೃದ್ಧಿ ಪ್ರಾಧಿಕಾರ ಸದಸ್ಯರಾಗಿ ಕರ್ನಾಟಕ ಸರ್ಕಾರದಲ್ಲಿ ಗುರುತಿಸಿಕೊಂಡಿದ್ದಾರೆ. ಮಾನವ ಬಂದತ್ವ ವೇದಿಕೆ ರಾಜ್ಯ ಸಂಚಾಲಕರು ಕರ್ನಾಟಕದಲ್ಲಿ ಸೇವೆ ಸಲ್ಲಿಸಿದ್ದಾರೆ. ಏಳು ವರ್ಷಗಳ ಕಾಲ ಸ್ನಾತಕೋತರ ಅಧ್ಯಯನ ಕೇಂದ್ರದ ಸಂಚಾಲಕರಾಗಿ ಸೇವೆಗೈದಿದ್ದಾರೆ. ಕನ್ನಡ ಅಧ್ಯಯನ ವಿಭಾಗದ ಮುಖ್ಯಸ್ಥರಾಗಿ ಸೇವೆ ಸಲ್ಲಿಸಿದ್ದಾರೆ. ಎಸ್ಸಿ–ಎಸ್ಟಿ ರೆಮಿಡಿಯಲ್ ಕೋಚಿಂಗ್ ಸೆಂಟರ್ ಸಂಚಾಲಕರಾಗಿ ಸೇವೆ ಸಲ್ಲಿಸಿದ್ದಾರೆ. ಎಸ್.ಜೆ.ವಿ.ಪಿ ಮಹಾವಿದ್ಯಾಲಯದ ಪ್ರಭಾರ ಪ್ರಾಚಾರ್ಯರಾಗಿ ಸೇವೆ ಸಲ್ಲಿಸಿದ್ದಾರೆ. ಎಸ್.ಜೆ.ವಿ.ಪಿ ಮಹಾವಿದ್ಯಾಲಯದ ಆರ್ಥಿಕ ಯೋಜನೆಗಳ ಗೌರವ ಸಲಹೆಗಾರರಾಗಿ ಸೇವೆ ಸಲ್ಲಿಸಿದ್ದಾರೆ. ಎಸ್.ಜೆ.ವಿ.ಪಿ ಮಹಾವಿದ್ಯಾಲಯದ ಗೌರ್ನಿಂಗ್ ಬಾಡಿಯ ಸದಸ್ಯರಾಗಿ ಸೇವೆ ಸಲ್ಲಿಸಿದ್ದಾರೆ. ಕನ್ನಡ ವಿಶ್ವವಿದ್ಯಾಲಯದ ಎಂ.ಫಿಲ್ ಸಂಪ್ರಬಂಧಗಳು ಹಾಗೂ ಪಿಎಚ್.ಡಿ ಸಂಶೋಧನಾ ಮಹಾಪ್ರಬಂಧಗಳಿಗೆ ಮೌಲ್ಯಮಾಪನ ಕಾರ್ಯದಲ್ಲಿ ಭಾಗವಹಿಸಿ ವರದಿಗಳನ್ನು ತಯಾರಿಸಿದ್ದಾರೆ.

ಸರ್ಕಾರಿ ಹಾಗೂ ಸಾಹಿತ್ಯ ಸಾಂಸ್ಕೃತಿಕ ಸಂಘ ಸಂಸ್ಥೆಗಳಲ್ಲಿ ಪ್ರಬಂಧಗಳನ್ನು ಮಂಡಿಸಿದ್ದಾರೆ. ಸಾಹಿತ್ಯ ಅಕಾದೆಮಿ, ಕನ್ನಡ ಸಾಹಿತ್ಯ ಪರಿಷತ್ತು ಪುಸ್ತಕ ಪ್ರಾಧಿಕಾರ, ಕನ್ನಡ ಅಭಿವೃದ್ಧಿ ಪ್ರಾಧಿಕಾರ ಈ ಸಂಸ್ಥೆಗಳು ಆಯೋಜಿಸಿದ್ದ ವಿಚಾರ ಸಂಕಿರಣಗಳಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ನೂರಕ್ಕೂ ಅಧಿಕ ಪ್ರಬಂಧಗಳನ್ನು ಮಂಡಿಸಿದ್ದಾರೆ. ರಾಜ್ಯದ ಅನೇಕ ಸಂಘ ಸಂಸ್ಥೆಗಳಲ್ಲಿ ತಾಲೂಕು ಮತ್ತು ಜಿಲ್ಲಾಡಳಿತ ವಿಶ್ವವಿದ್ಯಾಲಯಗಳು, ಮಹಾವಿದ್ಯಾಲಯಗಳು ನಡೆಸಿರುವ ಕಾರ್ಯಕ್ರಮಗಳಲ್ಲಿ ನೂರಾರು ಉಪನ್ಯಾಸಗಳನ್ನು ನೀಡಿದ್ದಾರೆ. ಸಾರ್ವಜನಿಕ ಸಭೆ ಸಮಾರಂಭಗಳು ಸರ್ಕಾರ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಿಲ್ಲಾಡಳಿತ ನಡೆಸುವ ಮಹರ್ಷಿ ವಾಲ್ಮೀಕಿ ಜಯಂತಿ, ಕನಕ ಜಯಂತಿ, ಬಸವಣ್ಣ, ಗಾಂಧಿ, ಅಂಬೇಡ್ಕರ್, ನಾರಾಯಣ ಗುರು, ಟಿಪ್ಪು ಸುಲ್ತಾನ್ ಜಯಂತಿಗಳಲ್ಲಿ ಅನೇಕ ಉಪನ್ಯಾಸಗಳನ್ನು ನೀಡಿದ್ದಾರೆ.

ಸಾರ್ವಜನಿಕ ಸಭೆ ಸಮಾರಂಭಗಳಲ್ಲಿ ಜನಪರ ಹೋರಾಟದ ಹಲವು ಸಂಘ ಸಂಸ್ಥೆಗಳ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ವಿಶೇಷ ಉಪನ್ಯಾಸಗಳನ್ನು ನೀಡಿದ್ದಾರೆ.

ದಲಿತ ಬಂಡಾಯ ಸಾಹಿತ್ಯದಲ್ಲಿ ತಮ್ಮದೇ ಆದಂತಹ ಛಾಪನ್ನು









ಮೂಡಿಸಿಕೊಂಡಿದ್ದಾರೆ. ಇವರು ಕ್ರಿಯಾಶೀಲವಾದಂತ ವ್ಯಕ್ತಿತ್ವ ಉಳ್ಳವರು. ಸದಾ ಕಾರ್ಯಕ್ರಮಗಳನ್ನು ಆಯೋಜಿಸಿ ನಿರ್ವಹಣೆ ಮಾಡುವಂತ ಮತ್ತು ವಿಚಾರಗಳನ್ನು ಮಂಡಿಸುವಂತಹ ಸಾಮರ್ಥ್ಯ ಉಳ್ಳಂತ ವ್ಯಕ್ತಿತ್ವದವರು. ಇವರು ಮಾನವ ಬಂದುತ್ವ ವೇದಿಕೆಯ ರಾಜ್ಯ ಸಂಚಾಲಕರಾಗಿ ಜಿಲ್ಲೆ, ತಾಲೂಕು, ಗ್ರಾಮೀಣ ಮಟ್ಟದಲ್ಲಿ ಶೋಷಿತ ವರ್ಗಗಳ ಮೇಲೆ ಅನ್ಯಾಯವಾದಂತಹ ಸಂದರ್ಭದಲ್ಲಿ ಅವರ ಪರವಾಗಿ ಧ್ವನಿ ಎತ್ತುವಂತಹ ವಿಚಾರವಾದಿಗಳಾಗಿದ್ದಾರೆ. ಇವರು ಸದಾ ಹಸನ್ಮುಖಿಗಳು ತುಂಬಾ ವಿಚಾರಗಳನ್ನು ಪ್ರಬುದ್ಧವಾಗಿ, ತಾರ್ಕಿಕವಾಗಿ ಯೋಚಿಸಿ ಜ್ಞಾನವನ್ನು ಉಣಬಡಿಸುವಂತಹ ಚಿಂತಕರು. ಹರಿಹರದ ಬೈಪಾಸ್ ಹತ್ತಿರ ಅನಗವಾಡಿ ಬಿ.ಕೃಷ್ಣಪ್ಪ ಭವನದಲ್ಲಿ ಅನೇಕ ಕಾರ್ಯಕ್ರಮಗಳನ್ನು ಆಯೋಜನೆ ಮಾಡಿದ್ದಾರೆ. ಅಷ್ಟೇ ಅಲ್ಲದೆ ಸತೀಶ್ ಜಾರಕಿಹೊಳಿ ಫೌಂಡೇಶನ್ ವತಿಯಿಂದ ಗ್ರಾಮೀಣ ವಿದ್ಯಾರ್ಥಿಗಳಿಗೆ ಕೆಇಎ ಮತ್ತು ಕೆಪಿಎಸ್ಸಿ ನಡೆಸುವಂತಹ ಪಿಡಿಒ ಪರೀಕ್ಷೆಗಳಿಗೆ ಒಳ್ಳೆಯ ಸಂಪನ್ಮೂಲ ವ್ಯಕ್ತಿಗಳನ್ನು ಕರೆಸಿ ವಿದ್ಯಾರ್ಥಿಗಳಿಗೆ ಉಪಯುಕ್ತವಾದಂತಹ ಪರೀಕ್ಷಾ ಪೂರ್ವ ತಯಾರಿಗಳನ್ನು ಮತ್ತು ಮಾಹಿತಿಗಳನ್ನು ಒದಗಿಸಿ ಊಟ, ವಸತಿ ಜೊತೆಗೆ ಜ್ಞಾನದ ಹಸಿವನ್ನು ನೀಗಿಸುವಂತಹ ಸಾಮರ್ಥ್ಯ ಉಳ್ಳವರು. ಈ ರೀತಿ ಗ್ರಾಮೀಣ ಭಾಗದ ವಿದ್ಯಾರ್ಥಿಗಳನ್ನು ದೃಷ್ಟಿಕೋನದಲ್ಲಿಟ್ಟುಕೊಂಡು ಅನೇಕ ಕಾರ್ಯಕ್ರಮಗಳನ್ನು ಆಯೋಜಿಸಿದ್ದಾರೆ.

**ಬರಹ :** ಡಾ ಎ.ಬಿ ರಾಮಚಂದ್ರಪ್ಪರವರ ಬರಹವನ್ನು ಗಮನಿಸುವುದಾದರೆ ಸಾಹಿತ್ಯ ಕೃಷಿಯಲ್ಲಿ ತಮ್ಮದೇ ಆದಂತಹ ಚಾಪನ್ನು ಮೂಡಿಸಿದ್ದಾರೆ. ಇವರ ಪ್ರಕಟಿತ ಕೃತಿಗಳು – ಅಂಬೇಡ್ಕರ್ ಮತ್ತು ಹೋರಾಟ, ದೇವರ ದಾಸಿಮಯ್ಯ, ಭಾರತೀಯ ಸಾಮಾಜಿಕ ಚಿಂತಕರ ಮಹಾಬೆಳಗು, ಸಂ ಮನೆ ಮನೆ ತೋರಣ, ಸಂ ಹೊಸಗನ್ನಡ ಪ್ರಬಂಧ ಸಾಹಿತ್ಯ– 2 ಸಂ ಜನಪದ ಸಾಹಿತ್ಯ ದರ್ಶನ ಸಂ ಹಳೆಗನ್ನಡ ಸಂವೇದನೆ, ಸಂ ಹೊಸಗನ್ನಡ ಕನ್ನಡ ಕವಿತೆಗಳು, ಸಂ ಹೊಸಗನ್ನಡ ಸಂವೇದನೆಗಳು, ಸಂ ಹೊಸಗನ್ನಡ ಕಥಾ ಸಂಕಲನ, ಸಂ ಹೊಸಗನ್ನಡ ಪ್ರಬಂಧ ಸಂಕಲನ ಸಂ ಪರಂಪರೆ, ಸಂ ಸಾಹಿತ್ಯ ಕಣಜ, ಸಂ ಪ್ರಾಚೀನ ಕಾವ್ಯ ಗಂಗೆ, ಸಂ ಸಾಹಿತ್ಯ ಸಂಕಥನ ಕಾವ್ಯ ಕಣಜ. ಸಂ ವಾಲ್ಮೀಕಿ ದರ್ಶನ, ಸಂ ಜನಮುಖಿ (ಎನ್.ವೈ.ಹನುಮಂತಪ್ಪನವರ ಅಭಿನಂದನಾ ಗ್ರಂಥ)

ಪತ್ರಿಕಾ ಪ್ರಕಟಣ ಲೇಖನಗಳು: ಸಂಕ್ರಮಣ, ಅನ್ವೇಷಣೆ, ಹೊಸತು, ಕೆಂಬಾವುಟ ಮುಂತಾದ ಸಾಹಿತ್ಯ ಪತ್ರಿಕೆಗಳಲ್ಲಿ ವಿಮರ್ಶೆ ಸಂಶೋಧನೆ ಕವನ ಹಾಗೂ ಲೇಖನಗಳ ಪ್ರಕಟಣೆ ಇತರೆ ಸಂಪಾದಿತ ಕೃತಿಗಳಲ್ಲಿ ಹಲವು ವೈಚಾರಿಕ ಹಾಗೂ ವಿಮರ್ಶಾ ಲೇಖನಗಳ ಪ್ರಕಟಣೆಯನ್ನು ಮಾಡಿದ್ದಾರೆ. ಇಂತಹ ಅಪಾರವಾದ ವ್ಯಕ್ತಿತ್ವವನ್ನು ಹಾಗೂ ಬರವಣಿಗೆಯನ್ನು ಹೊಂದಿರುವಂತಹ ಇವರು ಅಪಾರ ಶಿಷ್ಯ ಬಳಗವನ್ನು ಸಂಪಾದಿಸಿದ್ದಾರೆ. ಪ್ರೀತಿಯ ಗುರುಗಳಾದ ಎ.ಬಿ.ಆರ್ ಎಂದೇ ಪ್ರಖ್ಯಾತಿಯನ್ನು ಪಡೆದದಂತ ಇವರು ಪ್ರಸ್ತುತ ಜನವರಿ 11–12 ನೇ 2025ರಂದು ನಡೆಯುವ ದಾವಣಗೆರೆ ಜಿಲ್ಲೆ ಕನ್ನಡ ಸಾಹಿತ್ಯ ಸಮ್ಮೇಳನವು ಈ ಬಾರಿ ಜಗಳೂರಿನಲ್ಲಿ ನಡೆಯುವ ಸಮ್ಮೇಳನದ ಸರ್ವಾಧ್ಯಕ್ಷರಾಗಿ ಆಯ್ಕೆ ಆಗಿರುವುದು ನಮ್ಮೆಲ್ಲರಿಗೆ ಸಂತಸದ ಸಂಗತಿಯಾಗಿದೆ. ಅಭಿನಂದನೆಗಳು ಪ್ರೀತಿಯ ಗುರುಗಳಿಗೆ. ಆಯ್ಕೆ ಮಾಡಿದ ದಾವಣಗೆರೆ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವ ಸದಸ್ಯರಿಗೂ ಧನ್ಯವಾದಗಳು.










## ಅರಿವಿನ ತೊರೆ





# ಪ್ರೊ.ಎ.ಬಿ.ಆರ್ ಎಂಬ ನುಡಿ ಚಿಂತಕರು

ವಿಚಾರ ಸೂಕ್ಷ್ಮರೂ, ವಿವೇಕಿಗಳೂ, ಜನಪರವಾದ ಆಂದೋಲನಗಳಲ್ಲಿ ಸದಾ ತಮ್ಮನ್ನ ತೊಡಗಿಸಿಕೊಳ್ಳುವ ಸಕ್ರೀಯರೂ ಆದ ಈ ನೆಲದ ಸಂಸ್ಕೃತಿ ಚಿಂತಕರಾದ ಡಾ.ಎ.ಬಿ.ರಾಮಚಂದ್ರಪ್ಪನವರು ಒಂದು ಕಾಲದ ಗಹನತೆ ಹಾಗೂ ಸರಳತೆಗಳನ್ನು ರೂಢಿಸಿಕೊಂಡು ಹೊಸ ತಲೆಮಾರಿಗೆ ಪ್ರೇರಣೆಯಂತೆ ಕಾಣಿಸುತ್ತಿರುವ ಇಲ್ಲಿಯ ಕೆಲವೇ ಕೆಲವು ಜೀವಗಳಲ್ಲಿ ಒಬ್ಬರು. ಹಲವು ದಿಕ್ಕುಗಳಿಂದ, ಹಲವಾರು ವಿಚಾರ ಧಾರೆಗಳಿಂದ ತಮ್ಮನ್ನ ರೂಪಿಸಿಕೊಂಡ ಇವರು ಈ ಜಿಲ್ಲೆಯ ಕೆಲವೇ ಕೆಲವು ಸಾಹಿತ್ಯಿಕ ಲೇಖಕರಲ್ಲಿ ಉತ್ತಮರು. ಮಾನವ ಬಂಧುತ್ವ ವೇದಿಕೆಯ ಹೊಸ ಸೆಲೆಯ ಹರಿವಿಗೆ ಪ್ರಭಾವಿತರಾಗಿ ನಟರಾಗಿ,ಸಂಪನ್ಮೂಲ ವ್ಯಕ್ತಿಯಾಗಿ ಉರಿವ ನೆಲದಲೆಲ್ಲಾ ಓಡಾಡುತ್ತಿರುವ ಇವರು ಜನರ ಒಡಲೊಳಗಿನ ಜೀವಪರ ನಿಲುವನ್ನು ಪ್ರೇರೇಪಿಸಲು–ಮುನ್ನೆಡೆಸಲು–ನುಡಿಸಲು ಶ್ರಮಿಸುತ್ತಿದ್ದಾರೆ.

**ಮಾನವ ಬಂಧುತ್ವ ವೇದಿಕೆ:** ಭಾರತ ಬಹು ಸಂಸ್ಕೃತಿಯ ಪ್ರತಿರೂಪ. ನಮ್ಮ ನಾಡು ಸರ್ವ ಜನಾಂಗದ ಶಾಂತಿಯ ತೋಟ. ಬುದ್ಧನ ಅಹಿಂಸೆ, ಬಸವಣ್ಣನ ದಯೆ, ಅಂಬೇಡ್ಕರ್ ನೀಡಿದ ಸಮಷ್ಟಿ ಪ್ರಜ್ಞೆಯ ಸಂವಿಧಾನದ ಕಾರಣಕ್ಕೆ ಭಾರತ ತಲೆ ಎತ್ತಿ ನಿಲ್ಲಲು ಕಾರಣವಾಗಿದೆ. ಮೂಲಭೂತವಾದಿಗಳು ಮತ್ತು ಪ್ರತ್ಯೇಕತಾ ವಾದಿಗಳು ದೇಶದ ಸಮಗ್ರತೆಯ ಆಯಾಮವನ್ನೇ ಭಗ್ನಗೊಳಿಸುತ್ತಿದ್ದಾರೆ. ಜಾತಿ ಧರ್ಮ,ಭಾಷೆ,ನೀರು ಮತ್ತು ಗಡಿಗಳ ವಿಚಾರದಲ್ಲಿ ಮಾನವ ಸಮೂಹಗಳ



# ಅರಿವಿನ ತೊರೆ



ಬಹುತ್ವದ ಆಯಾಮಗಳನ್ನು ಸಂಕುಚಿತಗೊಳಿಸುತ್ತಿದ್ದಾರೆ. ಲಿಂಗ ತಾಖತಮ್ಯ ಮತ್ತು ವರ್ಗತಾರತಮ್ಯಗಳಿಂದ ಮಾನವ ಮಾನವರ ನಡುವೆ ಏಕರೂಪತೆ ಎಂಬ ಗೋಡೆಗಳನ್ನು ಕಟ್ಟುತ್ತಿದ್ದಾರೆ. ಘನತೆಯ ಮೌಲ್ಯ ಸಾರುತಿದ್ದ ಗತದ ಜೀವಗಳ  ಹೃದಯ ಪರಿಮಳವನ್ನು ಮೂಲೋತ್ಪಾಟನೆಗೊಳಿಸುತ್ತಿದ್ದಾರೆ. ನಾಡಿನ ಸಮಗ್ರ ಅಭಿವೃದ್ಧಿಗಾಗಿ ದುಡಿವ ಜನಮುಖಿ ಸಂಘಟನೆಗಳು, ದಮನಿತ, ರೈತ, ಮಹಿಳಾ, ಕಾರ್ಮಿಕ, ಆದಿವಾಸಿ, ಅಲ್ಪಸಂಖ್ಯಾತರ ಸುಂದರ ಬದುಕುಗಳನ್ನು ಅಪಮೌಲ್ಯಗೊಳಿಸುತ್ತಿದ್ದಾರೆ. ವಿಸ್ಮೃತಿಗೆ ಸಂದಿರುವ ಜನರ ವೈಚಾರಿಕ ಪರಂಪರೆಯು ಉಳಿಯಬೇಕು. ನೆಲದ ಜನಾಂದೋಲನಗಳು ಜಾಗೃತಗೊಳ್ಳಬೇಕು.ಶ್ರಮವಂತ ಜನರ ಮನ ಮನವನ್ನು ಮತ್ತೆ ಬೆಳಗಿಸಲು, ಹದವರಿತು ಬದುಕನ್ನು ಹಸನಾಗಿಸಿಕೊಳ್ಳಲು ಮತ್ತೆ ಹೊಸ ಹೊಸ ಬೆಸುಗೆಗಳಲ್ಲಿ ಬೆಳಗಬೇಕು. ಸಮುದಾಯಗಳ ಎದೆಯ ಹರುಹಿನೊಳಗೆ ಮತ್ತೆ ಬುದ್ಧ, ಬಸವ, ಅಂಬೇಡ್ಕರ್, ಪೆರಿಯಾರ್, ಫುಲೆ, ಚಿಂತನೆಗಳನ್ನು ಬೆಳಸಬೇಕು ಎಂಬ ನಿಟ್ಟಿನಲ್ಲಿ ಮಾನ್ಯರಾದ ಸತೀಶ್ ಜಾರಕಿಹೊಳಿಯವರು ಸ್ಥಾಪಿಸಿದ ಈ ಸಂಸ್ಥೆ ಇಂದು ತಲಸ್ಪರ್ಷಿಯಾಗಿ ಹರಿಯುತ್ತಿದೆ. ಇದರ ವಿಸ್ತಾರ ಹರುಹಿನ ಒಂದು ಬೆಳಕಿನ ಎಳೆಯಂತೆ ಡಾ.ಎ.ಬಿ.ರಾಮಚಂದ್ರಪ್ಪನವರು ಕಾಣುತ್ತಾರೆ.



ಡಾ.ಶಿವಕುಮಾರ್ ಕಂಪ್ಲಿ

**ಡಾ.ಎ.ಬಿ.ರಾಮಚಂದ್ರಪ್ಪ ಎಂಬ ಒಂದು ಮೆಲುಕು:** ಅಂಬೇಡ್ಕರ್ ಅವರ ತಾತ್ವಿಕತೆಯಿಂದ ರೂಪುಗೊಂಡ ಇವರು ನಾಡಿನ ಪ್ರಗತಿ ಪರ ಚಿಂತನೆಗಳ ಮೂಲ ಬೆಳಕಾದ ಬಸವಣ್ಣ ಹಾಗೂ ತತ್ವ ಪದಕಾರರ ನುಡಿ ಶಕ್ತಿಗಳನ್ನು ಅರಗಿಸಿಕೊಂಡವರು. ಉತ್ತಮ ಬರಹಗಾರರೂ,ಚಿಂತಕರೂ ಮತ್ತು ಆಕರ್ಷಕ ವಾಗ್ಮಿಗಳೂ ಆದ ಇವರು ಮುವ್ವತ್ನಾಲ್ಕು ವರ್ಷಗಳ ಬೋಧನಾ ಅನುಭವ ಉಳ್ಳವರು. ಏಳು ವರ್ಷಗಳ ಕಾಲ ಸ್ನಾತಕೋತ್ತರ ಪದವಿಯನ್ನು ಪ್ರಾಧ್ಯಾಪಕರಾಗಿ, ಸಂಯೋಜಕರಾಗಿ ಮುನ್ನೆಡೆಸಿಕೊಂಡು ಬಂದವರು. ತಮ್ಮ ನಿಡುಗಾಲದ ಸುಧೀರ್ಘ ಅಧ್ಯಾಪನದ ಜೊತೆ ಜೊತೆಗೆ ಸಂಕ್ರಮಣ, ಅನ್ವೇಷಣೆ, ಹೊಸತು, ಕೆಂಬಾವುಟ ಮೊದಲಾದ ಹೆಸರಾಂತ ಸಾಹಿತ್ಯ ಪತ್ರಿಕೆಗಳಿಗೆ ಸಂಶೋಧನೆ, ವಿಮರ್ಶೆ, ವೈಚಾರಿಕ ಬರಹಗಳನ್ನು ಬರೆದವರು. ತಮ್ಮ ವೃತ್ತಿ ಬದುಕಿನ ಹಲವು ಕವಲುಗಳ ನಡುವೆ ಸುಮಾರು ಹದಿನಾರು ಸಂಪಾದಿತ ಕೃತಿಗಳನ್ನು ಹೊರ ತಂದಿರುವ ಇವರು ಆ ಮೂಲಕ ಹಲವು ನೆಲೆಯ ದೇಸೀಯ, ಕಾಯಕಗಳ ಚರ್ಚೆಗಳನ್ನು ಒಗ್ಗೂಡಿಸಿದವರು. ಮೂರು ಸ್ವತಂತ್ರ ಕೃತಿಗಳ ಲೇಖಕರೂ ಆದ ಇವರು ಅವನ್ನು ಜನಪರವಾದ ತಳವರ್ಗಗಳ ಆದಿಮ ಬೆಳಕಿನೊಳಗೇ ರೂಪಿಸಿದ್ದಾರೆ. ಅನೇಕ ಪ್ರಾಧ್ಯಾಪಕರು ವಿದ್ಯಾರ್ಥಿಗಳೆಂಬ ಮಹಾ ಮನೆಯೊಳಗೇ ಉಳಿಯುವಾಗ ಇವರಂತಹ ಕೆಲವರು ಆ ಗಡಿರೇಖೆಯನ್ನು ದಾಟಿ ಹತ್ತು ಹಲವು ಸಂಘಟನೆಗಳೊಂದಿಗೆ ಸಮುದಾಯಗಳೊಂದಿಗೆ ಗುರುತಿಸಿಕೊಳ್ಳಬಲ್ಲರು. ಅನಿವಾರ್ಯ ಹಾಗೂ ಅಗತ್ಯತೆ ಬಿದ್ದಲ್ಲಿ ಹೋರಾಟಕ್ಕೂ ಧುಮುಕಿ ತಮ್ಮ ಸಾಮಾಜಿಕ ಬದ್ಧತೆಯನ್ನು ಮೆರೆಯಬಲ್ಲರು. ದಾವಣಗರೆರೆ ಎಂಬ ವಾಣಿಜ್ಯ ನಗರಿಯಲ್ಲಿ ಇವರು ಬಂಡಾಯ ಸಾಹಿತ್ಯ ಸಂಘಟನೆಯ ಸಂಚಾಲಕರಾಗಿ, ಕನ್ನಡ ಕಾವಲು ಸಮಿತಿಯ ಸದಸ್ಯರಾಗಿ, ಮಾನವ ಬಂಧುತ್ವ ವೇದಿಕೆಯ ರಾಜ್ಯ ಸಂಚಾಲಕರಾಗಿ ತಮ್ಮ ಸಾಂಸ್ಕೃತಿಕ ಅಸ್ಮಿತೆಯನ್ನ ಸಾಬೀತುಗೊಳಿಸಿಕೊಂಡಿದ್ದಾರೆ. ಪ್ರೊ.ಎ.ಬಿ.ಆರ್. ಅವರು ದಲಿತ ಸಂಘರ್ಷ ಸಮಿತಿಯ ಹಲವು ಮಾನವೀಯ ಹಾಗೂ ವೈಚಾರಿಕ ಚಳುವಳಿಗಳಲ್ಲಿ ಕಳೆದ ಎಂಭತ್ತರ ದಶಕದಿಂದಲೂ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ತಮ್ಮ ವೃತ್ತಿ ಬದ್ಧತೆಯ ಜೊತೆ ಜೊತೆಗೇ ಸಾಮಾಜಿಕ ಕಾಳಜಿಯನ್ನೂ ಮೆರೆದಿದ್ದಾರೆ.

**ನೆನಪಿನ ಪುಟದೊಳಗೆ:** ಬಾಲ್ಯಕಾಲದಲ್ಲಿ ಗ್ರಾಮೀಣ ಭಾಗದ ಹಸಿ ಹಸಿ ವಿದ್ಯಾರ್ಥಿಯಾಗಿ ತಮ್ಮ ಓದಿನ ಬದುಕು ಆರಂಭಿಸಿದ ಇವರು ಮುಂದೆ ಮೈಸೂರಿನಂತಹ ವಿದ್ವತ್ ನಗರಿಯಲ್ಲಿ ಪದವಿ ಹಾಗೂ ಸ್ನಾತಕೋತ್ತರ ಪದವಿಯ ಮೂಲಕ ಫಲ ನೀಡುವ ಹೆಮ್ಮರದಂತೆ ಬೆಳೆದವರು. ಕಳೆದ ತಲೆಮಾರಿನ ಓದು , ಮಾತುಗಾರಿಕೆ ಮತ್ತು ಜೀವ ಸ್ಪಂದನೆಗಳಿಗೆ ಉದಾಹರಣೆಗಳಂತೆ ಕಾಣಬಲ್ಲ ಇವರು ಹಂಪಿ ವಿಶ್ವವಿದ್ಯಾಲಯದ ಸಾಹಿತ್ಯ ವಿಭಾಗದಲ್ಲಿ ಸಂಶೋಧನಾ ಮಾರ್ಗದರ್ಶಕರಾಗಿಯೂ ಸೇವೆ ಸಲ್ಲಿಸುತಿದ್ದಾರೆ. ಮಣ್ಣಿನ ವಾಸನೆ ಹಾಗೂ ಮಾನವೀಯತೆಗೆ ಮಿಡಿಯುವ ಇವರು ತಮ್ಮ ಉಪವೃತ್ತಿಯಾಗಿ ಕೃಷಿಯನ್ನು ನಂಬಿದ್ದಾರೆ. ಕನ್ನಡ ಸಾಹಿತ್ಯ ಪರಿಷತ್ತು, ಪುಸ್ತಕ ಪ್ರಾಧಿಕಾರ, ಕನ್ನಡ ಅಭಿವೃದ್ಧಿ ಪ್ರಾಧಿಕಾರದಂತಹ ಪ್ರತಿಷ್ಟಿತ ಸಾಹಿತ್ಯಿಕ ಸಂಸ್ಥೆಗಳಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಜನಪರ ಚಳುವಳಿ ಹಾಗೂ ಕಾರ್ಯಕ್ರಮಗಳ ಮುಖ್ಯ ಭಾಷಣಕಾರರಾಗಿ ಸಮೂಹಗಳೊಂದಿಗೆ ಗುರ್ತಿಸಿಕೊಂಡು ಅನಿವಾರ್ಯ ಹಾಗೂ ಅಗತ್ಯತೆ ಬಂದಾಗ ಹೋರಾಟಕ್ಕೂ ಧುಮುಕಿ ತಮ್ಮ ಸಾಮಾಜಿಕ ಬದ್ಧತೆಯನ್ ನಮೆರೆದಿದ್ದಾರೆ. ಸರ್ಕಾರಿ ಹಾಗೂ ಕನ್ನಡ ಸಂಸ್ಕೃತಿ ಇಲಾಖೆಯು ನಡೆಸುವ ಅನೇಕ ಜಯಂತಿಗಳ ವಿಶೇಷ ಉಪನ್ಯಾಸಕರಾಗಿ ಜನಪರ ಹಾಗೂ ಸಮಾಜೋಭಿವೃದ್ಧಿಯ ಕನಸು ಬಿತ್ತುವ ಬೆಳದಿಂಗಳಂತೆ ಕಾರ್ಯ ನಿರ್ವಹಿಸಿದ್ದಾರೆ.

**ಶುಭ ನುಡಿಯ ಸಾಲು:** ಸಾಹಿತ್ಯದ ಓದುಗರೂ ಮತ್ತು ಹೋರಾಟಗಾರರಾದ ಡಾ. ಎ.ಬಿ.ರಾಮಚಂದ್ರಪ್ಪ ಅವರಿಗೆ ಪ್ರಸ್ತುತ  ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರಿನ  ವತಿಯಿಂದ ನಡೆಯಲಿರುವ ದಾವಣಗೆರೆ ಜಿಲ್ಲೆಯ ಜಗಳೂರಿನಲ್ಲಿ ಆಯೋಜಿಸಿರುವ ಹದಿನಾಲ್ಕನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರಾಗುವ ಗೌರವ ಲಭಿಸಿದೆ. ಸಹೃದಯರಾದ ಇವರಿಗೆ ಹೃತ್ಪೂರ್ವಕ ಅಭಿನಂದನೆಗಳು.







# ಕುತೂಹಲದ ಮಾತು



ಮೊದಲಿಗೆ ನನ್ನ ನೆಚ್ಚಿನ ರಾಮಚಂದ್ರಪ್ಪ ಮೇಷ್ಟ್ರಿಗೆ ನಮನಗಳು. ಅವರ ಬಗ್ಗೆ ಒಂದಿಷ್ಟು ಬರವಣಿಗೆಗೆ ಅವಕಾಶಿಸಿದ ಡಾ.ಓಬಳೇಶ್ ಅವರಿಗೂ ವಂದಿಸುತ್ತೇನೆ. ಸಾಕಷ್ಟು ಮಂದಿ ಅವರವರ ಬರವಣಿಗೆಯ ಮೂಲಕ ರಾಮಚಂದ್ರಪ್ಪ ಮೇಷ್ಟ್ರಿಗೆ ವ್ಯಕ್ತಿತ್ವ ಮತ್ತು ಒಡನಾಟಗಳನ್ನು ತಮ್ಮದೇ ರೀತಿಯಲ್ಲಿ ವ್ಯಕ್ತಪಡಿಸಿರಬಹುದು ಅಂದುಕೊಳ್ಳತ್ತೇನೆ. ಮೇಷ್ಟ್ರನ್ನು ನಾನು ಮೊದಲಿಗೆ ಮುಖಾಮುಖಿಯಾದದ್ದು ನಮ್ಮ ಹೆಮ್ಮೆಯ ಕನ್ನಡ ವಿಶ್ವವಿದ್ಯಾಲಯದ, ಕನ್ನಡ ಸಾಹಿತ್ಯ ಅಧ್ಯಯನ ವಿಭಾಗದ ಮುಂಭಾಗದಲ್ಲಿ. ಅವರನ್ನು ನಾನು ಎದುರುಗೊಂಡ ತಕ್ಷಣ ನಗುಮುಖದಿಂದಲೇ ಬಂದದ್ದನ್ನು ನೋಡಿ ನನ್ನ ಪಿ.ಎಚ್.ಡಿ ಅಧ್ಯಯನದ ಯಶಸ್ಸೇ ಒಂದು ಕ್ಷಣ ನನ್ನ ಮುಂದೆಯೇ ಬಂದಂತಾಯಿತು. ಮೊದಲ ಸಾರಲೇಖ ವರದಿ ಒಪ್ಪಿಸಿ ಖುಷಿಯಿಂದ ಹೊರಡುವ ಹೊತ್ತಿನಲ್ಲಿ ಒಂದು ಸ್ವೀಟ್‌ಬಾಕ್ಸ್ ಅವರ ಕೈಗಿತ್ತಾಗ "ಇದೇ ಮೊದಲು, ಇನ್ನೂ ಮುಂದೆಲ್ಲಾ ಇದೆಲ್ಲಾ ಇಟ್ಟಿಕೋ ಬ್ಯಾಡ ಕಣೋ" ಅಂದರು ನನ್ನ ಹೆಗಲ ಮೇಲೆ ಕೈ ಹಾಕುತ್ತಾ. ಆಗ ನನಗೆ ಅವರು ಖಡಕ್ಕಾಗೇ ಕಂಡರೂ, ಸ್ನೇಹಮಯಿ ಜೀವಿ ಎಂದೆನಿಸಿತು. ಅವರ ಮನೆಗೆ ಹೋದಾಗಲೆಲ್ಲಾ ಅವರ ಕುಟುಂಬದಲ್ಲಿ ನಾನು ಒಬ್ಬ ಎಂಬ ಭಾವನೆ ಮೂಡುತಿತ್ತು. ಅಂದಿನಿಂದ ಇದೂವರೆಗೂ ನನಗೆ ಯಾವುದೇ ಆರ್ಥಿಕ ಹೊರೆ ಆಗದಂತೆ ಪಿ.ಎಚ್.ಡಿ ಅವಾರ್ಡ್‌ವರೆಗೂ ಸಹಕರಿಸಿದ್ದು ನನ್ನ ಪುಣ್ಯ. ಏಳೆಂಟು ವರ್ಷಗಳ ಅವರ ಒಡನಾಟ ಅನನ್ಯ; ಅವಿಸ್ಮರಣೀಯವಾದುದ್ದು. ಈ ಕಾರಣಗಳಿಂದಲೇ ನಮ್ಮ ಊರಿಗೆ ಬಂದುಹೋಗಲು ಆಗಾಗ ಮೇಷ್ಟ್ರು ಬಳಿ ಮನವಿ ಮಾಡಿಕೊಳ್ಳುತ್ತಿದ್ದೆ. ಅದು ಒಂದು ದಿನ ಬಂದೇ ಬಿಟ್ಟಿತು. ಕೊಳ್ಳೇಗಾಲದ ನನ್ನ ಬಾಡಿಗೆ ಮನೆಗೆ ಅವರ ಸಹಪಾಠಿಗಳೊಂದಿಗೆ ಬಂದು ನಮ್ಮ ಆಥಿತ್ಯ ಸ್ವೀಕರಿಸಿ, ಕುರುಬನಕಟ್ಟೆಗೆ ಭೇಟಿ ಮಾಡಿಸಿದ್ದು ನನ್ನ ಋಣಾನುಬಂಧ ಎನಿಸಿತು.

ಕೆಲವರಿಗೆ ಹಣ, ಅಧಿಕಾರ ಬಂತೆಂದರೆ ಅವರ ನಡವಳಿಕೆಗಳು ಬಣ್ಣದ ಬುಗುರಿಯಂತೆ ಬದಲಾಗಿಬಿಡುತ್ತದೆ. ಆದರೆ ನಮ್ಮ ಮೇಷ್ಟ್ರು ಸರಳ ವ್ಯಕ್ತಿತ್ವದೊಂದಿಗೆ ತಮ್ಮ ಶಿಷ್ಯರ ಜೊತೆಗೆ ಸ್ನೇಹದಿಂದ ವರ್ತಿಸುವುದನ್ನು ಹತ್ತಿರದಿಂದ ಕಂಡಿದ್ದೇನೆ. ಸದಾ ಹಸನ್ಮುಖಿ. ತಮ್ಮ ಬಳಗವನ್ನು ಸದಾ ನಗುಮುಖದಿಂದಲೇ ಎದುರುಗೊಂಡು ಅವರ ಹೃದಯವನ್ನು ಗೆಲ್ಲುತ್ತಾರೆ. ನಮ್ಮ ಮೇಷ್ಟ್ರು ರಾಜ್ಯದ ಉದ್ದಗಲಕ್ಕೂ ತಮ್ಮ ಒಡನಾಟವನ್ನು ವಿಸ್ತರಿಸಿಕೊಂಡಿದ್ದಾರೆ. ಹೆಸರಾಂತ ಸಾಹಿತಿಗಳಾದ ಬರಗೂರು ರಾಮಚಂದ್ರಪ್ಪ, ಬಂಜಗೆರೆ ಜಯಪ್ರಕಾಶ್, ಕನ್ನಡ ವಿಶ್ವವಿದ್ಯಾಲಯದ ಮಾನ್ಯ ಕುಲಪತಿಗಳಾದ ಡಿ.ವಿ.ಪರಮಶಿವಮೂರ್ತಿ, ಮೈಸೂರು ಕೆ.ಎಸ್.ಓ.ಯು ಮಾನ್ಯ ಕುಲಸಚಿವರಾದ ಎಚ್.ವಿಶ್ವನಾಥ್, ರಹಮತ್ ತರೀಕೆರೆ, ಅಮರೇಶ ನುಗಡೋಣಿ ಅವರಂತಹ ಇನ್ನೂ ಅನೇಕರ ಸ್ನೇಹವನ್ನು ಸಂಪಾದಿಸಿದ್ದಾರೆ.

ರಾಮಚಂದ್ರಪ್ಪನವರು ನಾ ಕಂಡಂತೆ ಡಾ.ಬಿ.ಆರ್. ಅಂಬೇಡ್ಕರ್ ವಾದಿ. ದಲಿತ ಹೋರಾಟದ ಚಿಂತನೆಗಳನ್ನು ಮೈಗೂಡಿಸಿಕೊಂಡವರು. ಇವರು ಬುದ್ಧ, ಬಸವ, ಅಂಬೇಡ್ಕರ್, ಕಾನ್ಷಿರಾಂ, ಸಾವಿತ್ರಿಬಾಯಿ ಫುಲೆ, ಪೆರಿಯಾರ್, ಗಾಂಧಿ, ನಾರಾಯಣಗುರು, ಟಿಪ್ಪು, ವಾಲ್ಮೀಕಿ ಮುಂತಾದ ದಾರ್ಶನಿಕರು ಹಾಗೂ ಸಾಮಾಜಿಕ ಚಿಂತಕರ ಅನುಯಾಯಿಗಳು ಎಂಬುದನ್ನು ಅವರ ಹೋರಾಟದ ಮಾರ್ಗಗಳೇ ಹೇಳುತ್ತವೆ. ಅಗಾಧವಾಗಿ ಕನ್ನಡ ತನವನ್ನು ಅಪ್ಪಿಕೊಂಡು ಸಾಕಷ್ಟು ಓದಿಕೊಂಡು ತಮ್ಮದೇಯಾದ ಕೃತಿಗಳು, ಸಂಪಾದನೆಗಳು, ಲೇಖನಗಳು, ಉಪನ್ಯಾಸಗಳನ್ನು ಕನ್ನಡ ಸಾಹಿತ್ಯ ಸಾರಸತ್ವ ಲೋಕಕ್ಕೆ ಅರ್ಪಿಸಿದ್ದಾರೆ.



ಡಾ. ನಿಂಗಪ್ಪ ಮಂಟೇದರ











# ಬಂಡಾಯದ ದನಿ ಡಾ.ಎ.ಬಿ.ಆರ್.



ಕನ್ನಡದ ವಿದ್ವತ್ ವಲಯಕ್ಕೆ ಹಾಗೂ ಅವರ ಶಿಷ್ಯ ಬಳಗಕ್ಕೆ ಎ.ಬಿ.ಆರ್ ಸರ್ ಎಂದೇ ಚಿರಪರಿಚಿತರಾದವರು ಡಾ. ಎ ಬಿ ರಾಮಚಂದ್ರಪ್ಪ ಸರ್. ಶ್ರೀಯುತರು ದಾವಣಗೆರೆ 14ನೇ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿರುವುದು ಅತೀವ ಸಂತಸದ ವಿಷಯವಾಗಿದೆ. ಎ.ಬಿ.ಆರ್ ಸರ್ ರವರನ್ನು ನಾನು ಮೊದಲು ಭೇಟಿಯಾದದ್ದು 2011ರಲ್ಲಿ, ಕುವೆಂಪು ವಿಶ್ವವಿದ್ಯಾಲಯದ ಕನ್ನಡ ಭಾರತಿಯಲ್ಲಿ ನಡೆದ ಒಂದು ವಿಚಾರ ಸಂಕಿರಣದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಆಗಮಿಸಿದ್ದರು. ಅವರು ನನಗೆ ವಿಶೇಷವೆನಿಸಿದ್ದು ಅವರ ವೈಚಾರಿಕ ಚಿಂತನೆಗಳಿಂದ ಹಾಗೂ ಅವರು ನಮ್ಮ ಜಿಲ್ಲೆಯ, ನಮ್ಮ ತಾಲೂಕಿನವರೇ ಎಂದು ತಿಳಿದಾಗ ಅವರ ಬಗ್ಗೆ ಇನ್ನಷ್ಟು ಆಸಕ್ತಿ, ಅಭಿಮಾನಗಳು ಮೂಡಿದವು. ನಂತರ ಅವರನ್ನು 2014 ರಲ್ಲಿ ಬಸವಾಪಟ್ಟಣದ ಸರ್ಕಾರಿ ಜನತಾ ಕಾಲೇಜಿನ ಹಳೆಯ ವಿದ್ಯಾರ್ಥಿ ಸಂಘದ ಉದ್ಘಾಟನಾ ಸಮಾರಂಭಕ್ಕೆ ಮುಖ್ಯ ಅತಿಥಿಗಳಾಗಿ ಆಗಮಿಸಿದಾಗ, ಅವರ ವಿದ್ವತ್‌ಪೂರ್ಣ ಚಿಂತನೆಗಳು ಹಾಗೂ ಮಾತಿನ ವೈಖರಿಗಳು ನನ್ನ ಮೇಲೆ ಪ್ರಭಾವ ಬೀರಿದವು. ಅಲ್ಲಿಂದ ಇಲ್ಲಿಯವರೆಗೆ ನಿರಂತರವಾಗಿ ಎ.ಬಿ.ಆರ್ ಸರ್ ರವರ ಸಂಪರ್ಕದಲ್ಲಿದ್ದೇನೆ. ಅವರ ಮಾರ್ಗದರ್ಶನದಲ್ಲಿ ನಾವು ಸಹ ಸಾಗುತ್ತಿದ್ದೇವೆ. ನಾನು ಗಮನಿಸಿದಂತೆ ನಿರಂತರ ಹೋರಾಟದ ಬದುಕು ಅವರದ್ದಾಗಿದೆ. ಚನ್ನಗಿರಿ ತಾಲೂಕಿನ ಅಗರಬನ್ನಿಹಟ್ಟಿ ಎಂಬ ಪುಟ್ಟ ಗ್ರಾಮದಲ್ಲಿ ಸಾಧಾರಣ ರೈತ ಕುಟುಂಬದಲ್ಲಿ ಜನಿಸಿದ ಇವರು, ಇಂದು ರಾಜ್ಯವೇ ಗುರುತಿಸುವಂತೆ ಸಾಧಕ ಶ್ರೇಷ್ಠರಾಗಿರುವುದು ನಮ್ಮ ತಾಲೂಕಿಗೆ ಹೆಮ್ಮೆಯೇ ಸರಿ. ಆರಂಭದಿಂದಲೂ ಬಡ ಹಾಗೂ ಶೋಷಿತ ಜನರ ನೋವಿನ ದನಿಯಾಗಿ ನಿಂತವರು. ದಾವಣಗೆರೆ ಜಿಲ್ಲೆಯ ಹಲವು ಪ್ರಗತಿಪರ ಸಂಘಟನೆಯೊಂದಿಗೆ ಸಂಪರ್ಕದಲ್ಲಿದ್ದೂ ಜಿಲ್ಲೆಯ ಹಲವು ರೈತ ಹೋರಾಟಗಳಲ್ಲಿ, ಕಾರ್ಮಿಕ ಚಳುವಳಿಗಳಲ್ಲಿ, ದಲಿತ ಹೋರಾಟಗಳಲ್ಲಿ ಸಕ್ರಿಯರಾಗಿದ್ದಾರೆ.

ಅಧ್ಯಯನ, ಅಧ್ಯಾಪನ ಸಂಶೋಧನಾ ಕ್ಷೇತ್ರಗಳಲ್ಲಿ ತೊಡಗಿಸಿಕೊಂಡು ಸುಮಾರು 30 ಕ್ಕೂ ಹೆಚ್ಚು ವರ್ಷಗಳ ಕಾಲ ಗಣನೀಯ ಸೇವೆ ಸಲ್ಲಿಸಿದ್ದಾರೆ. ಸಾಹಿತ್ಯ ಮತ್ತು ಸಂಶೋಧನಾ ಕ್ಷೇತ್ರದಲ್ಲಿ ಹಲವು ಮೌಲ್ಯಯುತ ಕೃತಿಗಳನ್ನು ಪ್ರಕಟಿಸಿದ್ದಾರೆ. ದಲಿತ–



ಡಾ.ವಿಜಯಕುಮಾರ ಹೆಚ್.ಜಿ

# ಅರಿವಿನ ತೊರೆ





ಬಂಡಾಯ ಸಾಹಿತ್ಯದಲ್ಲಿ ತಮ್ಮನ್ನು ತೊಡಗಿಸಿಕೊಂಡು, ಮಧ್ಯ ಕರ್ನಾಟಕದ ಬಂಡಾಯದ ಧ್ವನಿಯಾಗಿಯೂ ಗುರುತಿಸಿಕೊಂಡಿದ್ದಾರೆ. 2023 ರಲ್ಲಿ ದಾವಣಗೆರೆಯಲ್ಲಿ ನಡೆದ ರಾಜ್ಯ ಬಂಡಾಯ ಸಾಹಿತ್ಯ ಸಮ್ಮೇಳನವನ್ನು ಆಯೋಜಿಸಿದ್ದರು. ನಾಡಿನ ನೂರಾರು ಬಂಡಾಯ ಸಂಗಾತಿಗಳು ಇದರಲ್ಲಿ ಭಾಗವಹಿಸಿದ್ದರು. ಪ್ರಸ್ತುತ ಕನ್ನಡ ಸಾಹಿತ್ಯಿಕ ಬಹುಮುಖ್ಯ ಚಳುವಳಿಗಳಲ್ಲಿ ಬಂಡಾಯ ಚಳುವಳಿಯೂ ಒಂದು. ರಾಜ್ಯಮಟ್ಟದ ಬಂಡಾಯ ಸಾಹಿತ್ಯ ಸಮ್ಮೇಳನ ಇಂದಿನ ಸಾಹಿತ್ಯಕ್ಕೆ ಹೊಸ ಆಯಾಮವನ್ನು, ತಾತ್ವಿಕತೆಯನ್ನು ದಿಕ್ಸೂಚಿಯಾಗಿ ಒದಗಿಸಿಕೊಡುವಲ್ಲಿ ಬಹುಮುಖ್ಯ ಪಾತ್ರ ವಹಿಸಿದೆ, ಈ ಮೂಲಕ ಶ್ರೀಯುತರು ರಾಜ್ಯಮಟ್ಟದ ಕ್ರಿಯಾಶೀಲ ಸಂಘಟಕರಾಗಿಯೂ ಗುರುತಿಸಿಕೊಂಡಿದ್ದಾರೆ.

ಇದರ ಜೊತೆಗೆ ಎ.ಬಿ.ಆರ್ ಸರ್ ರವರು ರಾಜ್ಯಾದ್ಯಂತ ಗುರುತಿಸಿಕೊಂಡಿರುವುದು "ಮಾನವ ಬಂಧುತ್ವ ವೇದಿಕೆ"ಯಿಂದ ಎಂಬುದು ಗಮನಾರ್ಹ. "ರಾಜ್ಯ ಮಾನವ ಬಂಧುತ್ವ ವೇದಿಕೆ"ಯ ರಾಜ್ಯ ಸಂಚಾಲಕರಾಗಿ ಪ್ರಸ್ತುತ ಕಾರ್ಯನಿರ್ವಹಿಸುತ್ತಿದ್ದಾರೆ. ಈ ಸಂಘಟನೆ ಮೂಲಕ ಮಾನವೀಯತೆಯನ್ನು, ಸಮಾಜಪರ ಕಾಳಜಿಯನ್ನು, ವೈಚಾರಿಕ ಚಿಂತನೆಗಳನ್ನು ಜನಸಾಮಾನ್ಯರಲ್ಲಿ ಬಿತ್ತುವ ಕಾರ್ಯದಲ್ಲಿ ತೊಡಗಿದ್ದಾರೆ. ಪ್ರಾಧ್ಯಾಪಕರಾಗಿ ಸೇವೆಯಲ್ಲಿರುವ ತನಕ ಅಕಾಡೆಮಿಕ್ ವಲಯದಲ್ಲಿ ಹೆಚ್ಚು ತೊಡಗಿಸಿಕೊಂಡ ಶ್ರೀಯುತರು ಸೇವಾ ನಿವೃತ್ತಿ ನಂತರ ಸಮಾಜಮುಖಿ ಕಾರ್ಯಗಳಲ್ಲಿ ನಿರಂತರವಾಗಿ ತೊಡಗಿಸಿಕೊಂಡಿದ್ದಾರೆ. ರಾಜ್ಯಾದ್ಯಂತ ಪ್ರವಾಸ ಕೈಗೊಂಡು ಬುದ್ಧನ ಮಾನವೀಯತೆ, ಬಸವಣ್ಣನವರ ಸಾಮರಸ್ಯ, ಅಂಬೇಡ್ಕರ್ ಅವರ ಸಮಾನತೆಯ ತತ್ವವನ್ನು ಜನಸಾಮಾನ್ಯರಿಗೆ ತಲುಪಿಸುವ ಮಹತ್ವದ ಜವಾಬ್ದಾರಿಯನ್ನು ಹೊತ್ತಿದ್ದಾರೆ. ಈ ಸಂಘಟನೆಯ ಮೂಲಕ ಸಾವಿರಾರು ಬಡ ವಿದ್ಯಾರ್ಥಿಗಳಿಗೆ ಉಚಿತ ಶಿಕ್ಷಣ, ಉದ್ಯೋಗದ ತರಬೇತಿ, ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತರಬೇತಿ ನೀಡಿ ಅವರ ಬದುಕಿಗೆ ಆಶಾಕಿರಣವನ್ನು ಒದಗಿಸಿದ್ದಾರೆ. ದಲಿತರು, ಅಲಕ್ಷಿತರು, ಮಹಿಳೆಯರು, ರೈತರು, ಕಾರ್ಮಿಕರು, ಅಲ್ಪಸಂಖ್ಯಾತರ ಮೇಲೆ ದೌರ್ಜನ್ಯ, ದಬ್ಬಾಳಿಕೆ ಹಾಗೂ ಶೋಷಣೆಗಳು ನಡೆದಾಗ ಅದನ್ನು ಪ್ರಬಲವಾಗಿ ಖಂಡಿಸಿ ಅವರಿಗೆ ನ್ಯಾಯ ಕೊಡಿಸುವಲ್ಲಿ ಮುಂಚೂಣಿಯ ನಾಯಕರಾಗಿ ಗುರುತಿಸಿಕೊಂಡಿದ್ದಾರೆ.

ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಸದಸ್ಯರಾಗಿ ಆಯ್ಕೆಗೊಂಡು ಜೊತೆಗೂಡಿ ಹಲವು ಮಹತ್ವವಾದ ಯೋಜನೆಗಳನ್ನು ರೂಪಿಸುವಲ್ಲಿ ಶ್ರಮಿಸಿದ್ದಾರೆ. ಪ್ರಾಧಿಕಾರದ ಯೋಜನೆಗಳಲ್ಲಿ ಒಂದಾದ 'ಸ್ಥಳನಾಮಗಳಲ್ಲಿ ಕನ್ನಡ' ಎಂಬ ಮಹತ್ವದ ಯೋಜನೆಯ ಸದಸ್ಯ ಸಂಚಾಲಕರಾಗಿ ನೇಮಕಗೊಂಡು, ಹಳ್ಳಿಯಿಂದ ರಾಜಧಾನಿವರೆಗೆ ಎಲ್ಲಾ ನಾಮ ಫಲಕಗಳಲ್ಲಿ ಶೇ 60% ಕನ್ನಡದ ಬರಹಗಳು ಬಳಕೆಯಾಗುವ ಹಾಗೆ ನಿಯಮಗಳನ್ನು ರೂಪಿಸಲಾಗಿದೆ. ಶ್ರೀಯುತರು ಸಮಾಜಮುಖಿ ಚಿಂತಕರಾಗಿ ಅಷ್ಟೇ ಅಲ್ಲದೆ, ಕನ್ನಡದ ಮೇಷ್ಟ್ರಾಗಿಯು ಕನ್ನಡ ಕಟ್ಟುವಲ್ಲಿ ಕನ್ನಡ ಭಾಷೆಯ ಉಳಿಸಿ ಬೆಳೆಸುವಲ್ಲಿ ತಮ್ಮ ಜವಾಬ್ದಾರಿಯನ್ನು ನಿರ್ವಹಿಸಿದ್ದಾರೆ.

ಹೀಗೆ ಎ.ಬಿ.ಆರ್ ಸರ್ ರವರು ಪ್ರಾಧ್ಯಾಪಕರಾಗಿ, ಬರಹಗಾರರಾಗಿ, ಹೋರಾಟಗಾರರಾಗಿ, ಬಂಡಾಯಗಾರರಾಗಿ ಬಹುಮುಖಿ ನೆಲೆಯಲ್ಲಿ ತಮ್ಮ ವ್ಯಕ್ತಿತ್ವವನ್ನು ವಿಸ್ತರಿಸಿಕೊಂಡವರು. ದಾವಣಗೆರೆ ಜಿಲ್ಲೆಯಷ್ಟೆ ಅಲ್ಲದೇ ರಾಜ್ಯಾದ್ಯಂತ ತಮ್ಮದೇ ಆದ ಶಿಷ್ಯ ವಲಯವನ್ನು, ಅನುಯಾಯಿಗಳನ್ನು ಹೊಂದಿ ಸದಾ ಕ್ರಿಯಾಶೀಲರಾಗಿ, ಸಮಾಜಮುಖಿಯಾಗಿ ತೊಡಗಿಸಿಕೊಂಡವರು. ಇವರು ದಾವಣಗೆರೆ ಜಿಲ್ಲೆಯ ಹದಿನಾಲ್ಕನೇಯ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷ ಸ್ಥಾನಕ್ಕೆ ಅತ್ಯಂತ ಸೂಕ್ತ ವ್ಯಕ್ತಿಯಾಗಿದ್ದಾರೆ. ಶ್ರೀಯುತರ ಸಮಾಜಮುಖಿ ಕಾರ್ಯಶೀಲತೆಗೆ ಹೆಚ್ಚಿನ ಸ್ಥಾನಮಾನ ದೊರಕಲಿ ಎಂಬ ಆಶಯದೊಂದಿಗೆ...








ಶುಭಕೋರುವವರು:
ಸ್ಕೈಲೈನ್ ಟೆಕ್ನಾಲಜಿ ಐಟಿ,ಗೈನ್ ನಾಲೆಡ್ಜ್ ಕನ್ನಡ ಯೂಟ್ಯೂಬ್ ಚಾನೆಲ್

ಒದಗಿಸುವ ಸೇವೆಗಳು
೧.ಸ್ಮಾರ್ಟ್ ಸ್ಕೂಲ್ ಮ್ಯಾನೇಜ್ಮೆಂಟ್ ಸಿಸ್ಟಮ್ ತಂತ್ರಾಂಶ
೨.ವೆಬ್ಸೈಟ್ ಡಿಸೈನ್
೩.ಆನ್ಲೈನ್ ಲರ್ನಿಂಗ್ ಪ್ಲಾಟ್ ಫಾರಮ್
೪.ವೀಡಿಯೋ ಎಡಿಟಿಂಗ್
೫.ಡಿಜಿಟಲ್ ಮಾರ್ಕೆಟಿಂಗ್
೬.ಸೋಶಿಯಲ್ ಮೀಡಿಯಾ ಮ್ಯಾನೇಜ್‌ಮೆಂಟ್
೭. ಆನ್‌ಲೈನ್ ಕ್ವಿಜ್



ಬಾಲಚಂದ್ರ .ಡಿ
ಸಂಸ್ಥಾಪಕರು, ಸ್ಕೈಲೈನ್ ಟೆಕ್ನಾಲಜಿ ಐಟಿ,ಗೈನ್ ನಾಲೆಡ್ಜ್ ಕನ್ನಡ ಯೂಟ್ಯೂಬ್ ಚಾನೆಲ್, ದಾವಣಗೆರೆ
ಮೊ:೮೪೯೬೦೨೦೭೬೦

SLTIT
SKYLINE TECHNOLOGY IT





ದಾವಣಗೆರೆ ಜಿಲ್ಲಾ 14ನೇ ಕನ್ನಡ ಸಾಹಿತ್ಯ
ಸಮ್ಮೇಳನದ ವಿಶೇಷ ಸಂಚಿಕೆ

# ಅರಿವಿನ ತೊರೆ





ಪ್ರಖರ ವೈಚಾರಿಕ ಪ್ರಜ್ಞೆಯ ಹಾಗೂ ಸೃಜನಶೀಲ ಸಂಘಟಕರಾದ ಡಾ.ಎ.ಬಿ.ರಾಮಚಂದ್ರಪ್ಪನವರು ಉತ್ತಮ ಲೇಖಕರು ಮತ್ತು ಕನ್ನಡದ ಅತ್ಯುತ್ತಮ ಪ್ರಾಧ್ಯಾಪಕರಲ್ಲಿ ಓರ್ವರು. ಸಮ ಸಮಾಜದ ಆಶೋತ್ತರಗಳ ಆಂದೋಲನಗಳನ್ನು ಸಂಘಟಿಸುವಲ್ಲಿ ಹಾಗೂ ಸಮಾವೇಶಗಳನ್ನು ಅರ್ಥಪೂರ್ಣವಾಗಿ ಆಯೋಜಿಸುವಲ್ಲಿ ಮೂರ್ನಾಲ್ಕು ದಶಕಗಳಿಂದ ಕ್ರಿಯಾಶೀಲರಾದ ರಾಮಚಂದ್ರಪ್ಪನವರು ಸಾಮಾಜಿಕ ಜವಾಬ್ದಾರಿಯುಳ್ಳ ಲೇಖಕರು. ದಾವಣಗೆರೆ ಜಿಲ್ಲೆಯಾದ್ಯಂತ ಮೂರು ದಶಕಗಳಿಂದ ಬಂಡಾಯ ಮತ್ತು ದಲಿತ ಸಾಹಿತ್ಯ ಸಂಘಟನೆಯ ಹಲವು ಸಮ್ಮೇಳನಗಳನ್ನು ರೂಪಿಸುವಲ್ಲಿ ಹಾಗೂ ಸಾರ್ಥಕವಾಗಿ ನೆರವೇರಿಸುವಲ್ಲಿ ಸಂಗಾತಿಗಳೊಡಗೂಡಿ ನೈತಿಕ ಬದ್ಧತೆಯಿಂದ ದುಡಿದ ಡಾ.ಎ.ಬಿ.ರಾಮಚಂದ್ರಪ್ಪನವರ ಕಾರ್ಯ ಅಪೂರ್ವವಾದುದು. ಕನ್ನಡ ಪ್ರಾಧ್ಯಾಪಕರಾಗಿ ವಿದ್ಯಾರ್ಥಿಗಳಲ್ಲಿ ವೈಜ್ಞಾನಿಕ, ವೈಚಾರಿಕ ಪ್ರಜ್ಞೆಯ ಜೊತೆಗೆ ಸಾಮಾಜಿಕ ನ್ಯಾಯಪರ ಚಿಂತನೆಯನ್ನು ಬೆಳೆಸಿದವರು. ವಿದ್ಯಾರ್ಥಿಗಳ ನೆಚ್ಚಿನ ಅಧ್ಯಾಪಕರಾಗಿರುವ ರಾಮಚಂದ್ರಪ್ಪನವರು ಕುವೆಂಪು ಮತ್ತು ದಾವಣಗೆರೆ ವಿಶ್ವವಿದ್ಯಾನಿಲಯದ ಕಾಲೇಜುಗಳ ಕನ್ನಡ ಅಧ್ಯಾಪಕರ ಸಂಘ ರಚನೆಯಾಗುವಲ್ಲಿ ಮತ್ತು ಕನ್ನಡ ಪಠ್ಯಪುಸ್ತಕಗಳನ್ನು ಪಾಠ ಮಾಡುವ ಬೋಧಕರು ಸಿದ್ಧಪಡಿಸಬೇಕು ಹಾಗೂ ಸಂಪಾದಿಸಬೇಕೆಂಬ ನಿರ್ಣಯ ಕೈಗೊಳ್ಳುವಲ್ಲಿ, ಅನುಷ್ಠಾನವಾಗುವಲ್ಲಿ ಅವರ ಒತ್ತಾಸೆ ಗಮನಾರ್ಹವಾದುದು. ಇವರು ದಾವಣಗೆರೆ ಜಿಲ್ಲಾ ಮಟ್ಟದ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರಾಗಿ ಭಾಜನರಾಗಿರುವುದು ನಮಗೆಲ್ಲರಿಗೂ ಅಭಿಮಾನದ ಹಾಗೂ ಗೌರವದ ಸಂಗತಿ. ಡಾ.ಎಂ.ಬಿ.ರಾಮಚಂದ್ರಪ್ಪನವರಿಗೆ ಶುಭಾಶಯಗಳೊಂದಿಗೆ ಅಭಿನಂದನೆಗಳು.

**ಡಾ.ಸಿ.ಶಿವಲಿಂಗಪ್ಪ ಮೀರಾಸಾಬಿಹಳ್ಳಿ**



ಡಾ.ಎ.ಬಿ ರಾಮಚಂದ್ರಪ್ಪನವರಿಗೆ ನಾನು ನನ್ನ ಕೈಯಾರೆ ಅವರಿಗೆ ಮತ್ತೊಂದು ಜವಾಬ್ದಾರಿಯನ್ನು ಹಸ್ತಾಂತರಿಸುವ ಈ ಸಂದರ್ಭವಂತು ಬಹುಶಃ ಅದು ನಿರ್ವಚನೀಯವಾದದ್ದು ಹಾಗೆ ಚಾರಿತ್ರಾರ್ಹವಾದುದ್ದು. ಯಾಕೆಂದರೆ ದ್ರೋಣಾಚಾರ್ಯ–ಏಕಲವ್ಯ, ಅರವಿಂದ–ವಿವೇಕಾನಂದ ಹಾಗೂ ಅಂಬೇಡ್ಕರ್–ಭೀಮ ಗುರು ಪರಂಪರೆಯ ಜೊತೆಗೆ ಗುರುವಿನಿಂದ ಶಿಷ್ಯನಿಗೆ ಕನ್ನಡ ಧ್ವಜ ಹಸ್ತಾಂತರ ಸಂದರ್ಭ ಇದೊಂದು ಚಾರಿತ್ರಾರ್ಹವಾದುದು. ಈ ಅವಕಾಶವನ್ನು ಕಲ್ಪಿಸಿದ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರನ್ನೊಳಗೊಂಡು ಕಾರ್ಯಕಾರಿ ಸಮಿತಿಗೆ ವಂದನೆಗಳು. ಸರ್ವಾಧ್ಯಕ್ಷತೆಯ ಗೌರವಕ್ಕೆ ಪಾತ್ರರಾದ ಡಾ.ಎ.ಬಿ.ರಾಮಚಂದ್ರಪ್ಪರವರಿಗೆ ಶುಭಾಶಯಗಳು.

**ಪ್ರೊ.ಸಿ.ವಿ.ಪಾಟೀಲ್, ಹರಿಹರ**

# ಅರಿವಿನ ತೊರೆ



ಸಿರಿಗೆರೆಯ ಎಂ.ಬಸವಲಿಂಗಯ್ಯ ವಸತಿ ಮಹಾವಿದ್ಯಾಲಯದಲ್ಲಿ ಸ್ನಾತಕ ಪದವಿಗಾಗಿ ಅಧ್ಯಯನ ಮಾಡುವಾಗ ಎ.ಬಿ.ರಾಮಚಂದ್ರಪ್ಪ ನನ್ನ ವಿದ್ಯಾರ್ಥಿಯಾಗಿದ್ದರು. ತರಗತಿಯ ಸಂದರ್ಭದಲ್ಲಿ ಶ್ರದ್ಧೆಯಿಂದ ಪಾಠ ಕೇಳುವ ವಿದ್ಯಾರ್ಥಿಯಾಗಿದ್ದರು. ಅನಿವಾರ್ಯ ಸನ್ನಿವೇಶದಲ್ಲಿ ಸಿರಿಗೆರೆಯಿಂದ ಹರಿಹರದ ಎಸ್.ಜೆ.ವಿ.ಪಿ ಕಾಲೇಜಿಗೆ ವರ್ಗಾವಣೆಯಾಗಿ ಸ್ನಾತಕ ಪದವಿ ಮುಗಿಸಿ, ಮುಂದೆ ಸ್ನಾತಕೋತ್ತರ ಪದವಿಯನ್ನು ಕುವೆಂಪು ವಿಶ್ವವಿದ್ಯಾಲಯದಿಂದ, ಜೊತೆಗೆ ಪಿ.ಎಚ್.ಡಿ ಪದವಿ ಪಡೆದು, ತಾವು ಓದಿದ ಕಾಲೇಜಿನಲ್ಲಿ ಅಧ್ಯಾಪಕರಾಗಿದ್ದು ಅವರ ಬದುಕಿನ ವಿಶೇಷ. ಅಧ್ಯಯನ ಮಾಡುವಾಗಿನಿಂದ ಸೆಟೆದು ಬಾಗುವ ಪ್ರವೃತ್ತಿ ಉಳ್ಳವರು. ವ್ಯಾಪಕವಾಗಿ ಅಧ್ಯಯನ ಮಾಡಿ, ವಿದ್ಯಾರ್ಥಿಗಳಿಗೆ ಅಚ್ಚುಮೆಚ್ಚಿನ ಅಧ್ಯಾಪಕರಾದವರು. ಮಾನವ ಬಂಧುತ್ವ ವೇದಿಕೆಯ ಪದಾಧಿಕಾರಿಗಳಾಗಿ ಜನಪರವಾದ, ಪ್ರಗತಿಪರವಾದ ಧೋರಣೆ ಉಳ್ಳವರಾಗಿ ನಡೆದುಕೊಳ್ಳುತ್ತಿದ್ದಾರೆ. ಬಂಡಾಯದ ಸಂಘಟನೆಯಲ್ಲಿ ಗುರುತಿಸಿಕೊಂಡು ಸಾಹಿತ್ಯ ಚಟುವಟಿಕೆ ಮೂಲಕ ಜನಜಾಗೃತಿ ಮಾಡುತ್ತಿದ್ದಾರೆ. ಹೀಗಾಗಿ ಎಲ್ಲರ ಮೆಚ್ಚುಗೆಗೆ ಪಾತ್ರವಾಗಿದ್ದಾರೆ. ಜನರಿಗೆ ತಲುಪಿಸಬೇಕಾದ ವೈಚಾರಿಕ ನೆಲೆಗಟ್ಟಿನಲ್ಲಿ ಜಿವನ ಮೌಲ್ಯಗಳನ್ನು ಪರಿಣಾಮಕಾರಿಯಾಗಿ ತಿಳಿಸುವಲ್ಲಿ ಯಶಸ್ವಿಯಾಗಿದ್ದಾರೆ. ಈ ಹಿನ್ನೆಲೆಯಲ್ಲಿ ಉತ್ತಮ ವಾಗ್ಮಿಗಳಾಗಿ ಬೆಳೆದಿದ್ದಾರೆ. ನನ್ನ ಶಿಷ್ಯರೊಬ್ಬರು ಅಭಿಮಾನ ಮತ್ತು ಹೆಮ್ಮೆಪಡುವ ರೀತಿಯಲ್ಲಿ ಸಾಹಿತ್ಯ ಕ್ಷೇತ್ರದಲ್ಲಿ ಗುರುತಿಸಿಕೊಂಡಿರುವುದು ಸಂತೋಷದ ಸಂಗತಿಯಾಗಿದೆ. ಈ ಎಲ್ಲ ಅಂಶಗಳ ಬೆಳಕಿನಲ್ಲಿ ಜಗಳೂರಿನಲ್ಲಿ ಜರುಗಿರುವ ದಾವಣಗೆರೆ ಜಿಲ್ಲಾ 14ನೇ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರಾಗಿ ಆಯ್ಕೆಯಾಗಿರುವ ಇವರನ್ನು ಹೃತ್ಪೂರ್ವಕವಾಗಿ ಅಭಿನಂದಿಸುವೆ.

**–ಡಾ.ನಾ.ಲೋಕೇಶ್ ಒಡೆಯರ್.**



ಸುಮಾರು ನಲವತ್ತು ವರ್ಷಗಳಿಂದಲೂ ನಿರಂತರವಾಗಿ ಗುರು– ಶಿಷ್ಯ ಸಂಬಂಧವನ್ನು ಕಾಯ್ದಿರಿಸಿಕೊಂಡು ಬಂದಿರುವ ಮಿತ್ರ ಡಾ.ಎ.ಬಿ.ರಾಮಚಂದ್ರಪ್ಪ ನನ್ನ ಮೆಚ್ಚಿನ ವಿದ್ಯಾರ್ಥಿ ಎಂಬುದೇ ಹೆಗ್ಗಳಿಕೆಯ ಸಂಗತಿ. ಜಾತಿ, ಗುಂಪು, ರಾಜಕೀಯ ವರ್ತುಲದೊಳಗೆ ವ್ಯಕ್ತಿ ಬಾಂಧವ್ಯವನ್ನು ಕಾಪಿಟ್ಟುಕೊಳ್ಳುವುದೇ ದುಸ್ತರವಾಗಿರುವ ಇಂದಿನ ಸಂದರ್ಭದಲ್ಲಿ ರಾಮಚಂದ್ರಪ್ಪ ಪ್ರೀತಿ, ಸ್ನೇಹ, ಸೌಹಾರ್ದದ ನೆಲೆಗಳನ್ನು ಭದ್ರಪಡಿಸಿಕೊಂಡು, ತಮ್ಮ ಕ್ರಿಯಾಶೀಲ ಚಟುವಟಿಕೆಗಳನ್ನು ಮುಂದುವರೆಸಿಕೊಂಡು ಹೋಗುತ್ತಿರುವುದು ಸಂತಸದ ವಿಷಯ.

ಜೊತೆಗೆ ಸಮಕಾಲೀನ ಸಾಮಾಜಿಕ, ಸಾಂಸ್ಕೃತಿಕ ವಿದ್ಯಮಾನಗಳಿಗೆ ಪ್ರತಿಕ್ರಿಯಿಸುತ್ತಾ, ಆರೋಗ್ಯಕರ ಸಂವಾದಗಳನ್ನು ಹುಟ್ಟುಹಾಕುವ ಗುಣ ಅವರಲ್ಲಿ ತೀಕ್ಷ್ಣತರದ್ದಾಗಿದೆ. ಅವರು ನನ್ನ ಮಾರ್ಗದರ್ಶನದಲ್ಲಿ 'ಸ್ವಾತಂತ್ರ್ಯೋತ್ತರ ಕನ್ನಡ ಸಾಹಿತ್ಯದಲ್ಲಿ ಅಂಬೇಡ್ಕರ್ ಚಿಂತನೆಗಳು' ಎಂಬ ವಿಷಯದ ಬಗ್ಗೆ ಸಂಶೋಧನೆ ಕೈಗೊಂಡಾಗ ಭಾರತೀಯ ಸಮಾಜ ಹಾಗೂ ಸಂವಿಧಾನದ ಸತ್ಯಾಸತ್ಯತೆ ಬಗ್ಗೆ ನಾವಿಬ್ಬರೂ ಪರಸ್ಪರ ವಾಗ್ವಾದ ನಡೆಸಿದ್ದೆವು. ಆಗ ಹಲವಾರು ಜಟಿಲ ಪ್ರಶ್ನೆಗಳು ಎದುರಾದಾಗ ಅತ್ಯಂತ ತಾಳ್ಮೆ ಮತ್ತು ಏಕಾಗ್ರತೆಯಿಂದ ಚರ್ಚಿಸುತ್ತಿದ್ದೆವು. ಎಬಿಆರ್ ಅವರ ವಿನಯಶೀಲತೆಯಲ್ಲಿ ಅತಿವಿನಯದ 'ದೂರ್ತತನ' ಕಾಣುತ್ತಿರಲಿಲ್ಲ; ಹಸನ್ಮುಖಿ ಭಾವವಿರುತ್ತಿತ್ತು.

ಅವರ ಬಹುಮುಖ್ಯ ಆಲೋಚನಗಳು ಸ್ನೇಹ ವಲಯದ ಮಾತು/ಚರ್ಚೆಗಳಲ್ಲಿ, ಕೆಲವಾರು ಉಪನ್ಯಾಸಗಳಲ್ಲಿ ಚದುರಿಹೋಗಿವೆ ಎನಿಸುತ್ತದೆ. ಹೀಗಾಗಿ, ಬರವಣಿಗೆಯ ಪ್ರಮಾಣ ಕಡಿಮೆ. ಆದರೂ, ಅವರ ಪ್ರಕಟಿತ ಕೃತಿಗಳಲ್ಲಿ ಸಾಮಾಜಿಕ ಬದ್ಧತೆಯುಳ್ಳ ಪ್ರಖರ ಚಿಂತನೆಗಳು ದಾಖಲಾಗಿವೆ. ಆ ನಿಟ್ಟಿನ ಸೃಜನಶೀಲ ಸಾಹಿತ್ಯಕ ರಚನೆಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳುವ ಹೊಣೆಗಾರಿಕೆ ಸಮ್ಮೇಳನಾಧ್ಯಕ್ಷ ಸ್ಥಾನ ಗೌರವದಿಂದ ಹೆಚ್ಚಲಿದೆ ಎಂದು ಭಾವಿಸಿದ್ದೇನೆ.

**ಡಾ.ಕುಮಾರಚಲ್ಯ**



ಡಾ. ಎ. ಬಿ. ರಾಮಚಂದ್ರಪ್ಪನವರು ಪ್ರಗತಿಪರ ಚಿಂತಕರು ಹಾಗೂ ಸಾಮಾಜಿಕ ಹೋರಾಟಗಾರರು ಮಾನವ ಬಂಧುತ್ವ ಸಂಘಟನೆಯ ಮೂಲಕ ಸಾಂಸ್ಕೃತಿಕ ಚಿಂತಕರನ್ನು ತಮ್ಮತ್ತ ಸೆಳೆಯುತ್ತಿರುವುದು ನನ್ನ ವಿದ್ಯಾರ್ಥಿ ಮತ್ತು ನನ್ನ ಸಹೋದ್ಯೋಗಿ ಎಂಬುದು ನನಗೆ ಹೆಮ್ಮೆ

**ಪ್ರೊ. ಎಚ್. ಎ. ಭಿಕ್ಷಾವರ್ತಿಮಠ**

# ಅರಿವಿನ ತೊರೆ























# ಅರಿವಿನ ತೊರೆ















## ದಾವಣಗೆರೆ ಜಿಲ್ಲಾ ೧೪ನೇ ಕನ್ನಡ ಸಾಹಿತ್ಯ ಸಮ್ಮೇಳನದ
## ಸರ್ವಾಧ್ಯಕ್ಷರಾಗಿ ಆಯ್ಕೆಯಾಗಿರುವ
# ಡಾ.ಎ.ಬಿ.ರಾಮಚಂದ್ರಪ್ಪ ಅವರಿಗೆ
## ಪ್ರೀತಿ ಪೂರ್ವಕ ಅಭಿನಂದನೆಗಳು








**ಗೋವರ್ಧನ್ ನವಿಲೇಹಾಳ್**

ಸಂಪಾದಕರು, ದೇವನಗರಿ ಸುದ್ದಿದಿನ
ಕನ್ನಡ ದಿನ ಪತ್ರಿಕೆ



**ವಸಂತ್ ಕುಮಾರ್ ಜಿ.ಎಸ್**

ಸಂಪಾದಕರು, ನಗರ ಮಿಡಿತ ದಿನಪತ್ರಿಕೆ
ದಾವಣಗೆರೆ

ದಾವಣಗೆರೆ ಜಿಲ್ಲಾ ೧೪ನೇ ಕನ್ನಡ ಸಾಹಿತ್ಯ ಸಮ್ಮೇಳನದ
ಸರ್ವಾಧ್ಯಕ್ಷರಾಗಿ ಆಯ್ಕೆಯಾಗಿರುವ
ಡಾ.ಎ.ಬಿ.ರಾಮಚಂದ್ರಪ್ಪ ಅವರಿಗೆ
ಪ್ರೀತಿ ಪೂರ್ವಕ ಅಭಿನಂದನೆಗಳು






## ಶುಭಕೋರುವವರು

## Karnataka ENT Hospital and Research Center

Karnataka ENT Hospital and Research Center is a well-established medical facility located in Chitradurga, Karnataka. Renowned for its excellence in ENT - Head & Neck Surgery, the hospital is equipped with modern technology and staffed by experienced professionals dedicated to providing high-quality care. The facility offers a comprehensive range of diagnostic and treatment services for ear, nose, throat, and related conditions, ensuring patient-centric and evidence-based care.The hospital is also committed to academic and research excellence, hosting various educational initiatives and programs aimed at advancing knowledge in the field of ENT. Its monthly newsletter and user-friendly website keep patients and the medical community informed about the latest developments and services. With a reputation for trust and innovation, Karnataka ENT Hospital and Research Center is a benchmark for quality healthcare in the region.



**Dr. Prahlada N.B**

**Karnataka ENT Hospital and Research Center**



ಬಾರಿಸು ಕನ್ನಡ ಡಿಂಡಿಮವ...

–ಕುವೆಂಪು





ಪ್ರಕಾಶಕರು: ಏಕಾಂತಗಿರಿ ಟ್ರಸ್ಟ್, ಏಕಾಂತಗಿರಿ ನಿಲಯ, ಮೊದಲನೇ ಮಹಡಿ,
ಲೋಕಿಕೆರೆ–577002, ದಾವಣಗೆರೆ ತಾ.ಜಿಲ್ಲೆ ಮೊ: 9591420216

ISSN ಮಾನ್ಯತೆ ಹೊಂದಿರುವ "ಅರಿವು ಅಸ್ಮಿತೆ" ಕನ್ನಡ–ಇಂಗ್ಲೀಷ್ ತ್ರೈಮಾಸಿಕ ಪತ್ರಿಕೆಯಲ್ಲಿ ಸಂಶೋಧನಾ ಲೇಖನಗಳನ್ನು ಪ್ರಕಟಿಸಲು ಸಂಪರ್ಕಿಸಿ : 9591420216 ಇಮೇಲ್: arivuasmithe@gmail.com